
# ತಂತ್ರ

## (ಭಗವಂತ ಜಗನ್ಮಾತೆಯ ರೂಪದಲ್ಲಿ)



ಅಖಿಲ ಭಾರತ ಪತ್ರಿಕೆ

ಅಕ್ಟೋಬರ್ 2015

ಬೆಲೆ : 15/–



*Our best friend is he who loves us*
*in the best of ourselves and yet*
*does not ask us to be other than we are.*

- The Mother

# ಅಖಿಲ ಭಾರತ ಪತ್ರಿಕೆ


**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### 'ತಂತ್ರ'

**(ಭಗವಂತ ಜಗನ್ಮಾತೆಯ ರೂಪದಲ್ಲಿ)**


**ಅನು : ಡಾ. ಕೆ.ಎಸ್. ಆಮೂರ**

ದೇವಿಯನ್ನು ಕುರಿತು ಸ್ತೋತ್ರ 3

ತಂತ್ರದ ಹಿನ್ನೆಲೆಯಲ್ಲಿರುವ ತತ್ವಜ್ಞಾನ ಹಾಗೂ ಮೂಲಕಾರಣ 4

ಕುಂಡಲಿನಿ ಶಕ್ತಿ 10

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಶಕ್ತಿ ಉಪಾಸನಾ 21

**ಅನು : ಡಾ. ಕೆ.ಎಸ್. ಆಮೂರ**

ಸಮಗ್ರ ಯೋಗ ಹಾಗೂ ತಂತ್ರ 32

ದೈವೀ ಮಾತೆಯಾಗಿರುವ ದೇವ 42

**ಅನು : ಶ್ರೀ ವೀರೇಂದ್ರ ಸಿಂಪಿ**

ಅನಂತ ದೈವೀ ಶಕ್ತಿಯ ರೀತಿ 54

**ವಾರ್ತಾಪತ್ರ** 64


**(All India Magazine)ದ ಸಂಪಾದಕರ ಟಿಪ್ಪಟಿ:**

ತಂತ್ರ ಕುರಿತು ಇರುವ ಈ ಸಂಕಲನವನ್ನು, ಕಾಳಜಿ ವಹಿಸಲು ಸೂಚಿಸುವ ಒಂದು ಶಬ್ದವನ್ನು ಗಮನದಲ್ಲಿರಿಸಿಕೊಂಡು, ಓದಬೇಕು. ಮೊಟ್ಟ ಮೊದಲನೆಯದಾಗಿ ಅದನ್ನು ಕುರಿತು ಎಲ್ಲವನ್ನೂ ಹೇಳಲಾಗುವುದಿಲ್ಲ, ಆದಾಗ್ಯೂ ತಂತ್ರದ ಎಲ್ಲ ಮುಖಗಳನ್ನು ಸ್ಪರ್ಶಿಸಲಾಗಿದೆ, ಆದರೆ ವಿಸ್ತಾರವಾದ ಬಾಹ್ಯ ದೃಷ್ಟಿಕೋನ ಹಾಗೂ ಸಂಕ್ಷಿಪ್ತ ಸಾರವನ್ನು ಕೊಡುವುದರ ಹೊರತು ಹೆಚ್ಚಿನದೇನನ್ನೂ ಮಾಡಲಾಗದು. ಎರಡನೆಯದಾಗಿ ದೈವೀ ಮಾತೆಗೆ ಹಾಗೂ ಯೋಗದಲ್ಲಿ ಅವರ ಪ್ರಮುಖ ಪಾತ್ರಕ್ಕೆ ತೆರೆದಿರಿಸಿಕೊಳ್ಳುವಿಕೆಯಂತಹ ತಂತ್ರದ ಅಂಶಗಳು ಶ್ರೀ ಅರವಿಂದರ ಯೋಗದಲ್ಲಿ ಇದ್ದಾಗಲೂ, ಆ ಯೋಗ ತಾಂತ್ರಿಕ ಯೋಗ ಎಂದು ಅರ್ಥಮಾಡಿಕೊಳ್ಳಬಾರದು. ಮೂರನೆಯದಾಗಿ ಕೆಲವೊಂದು ಪರಿಚ್ಛೇದಗಳನ್ನು ಅವುಗಳ ಸಂದರ್ಭಕ್ಕನುಸಾರವಾಗಿ ನೋಡಬೇಕಾಗುತ್ತದೆ, ಉದಾಹರಣೆಗೆ ಸಾಯಂಕಾಲದ ಮಾತುಕತೆಗಳಲ್ಲಿ ಬರುವ ಭಾಗ. ಅದೇ ರೀತಿಯಲ್ಲಿ ಶಕ್ತಿ ಉಪಾಸನಾ ಕುರಿತು ಪುಟ 17 ರಿಂದ 27 ರ ವರೆಗೆ ಬರುವ ಭಾಗ 'ಯೌಗಿಕ ಸಾಧನೆ' ಎಂಬ ಶೀರ್ಷಿಕೆಯಡಿಯಲ್ಲಿ ಬರೆದದ್ದನ್ನು ಒಟ್ಟುಗೂಡಿಸಿದ್ದರಿಂದ ಬಂದಿದೆ; ಅದರ ಲೇಖಕರ ಹೆಸರು 'ಉತ್ತರ ಯೋಗಿ' ಎಂದಿತ್ತು. ಈ ಉತ್ತರ ಯೋಗಿ, ಸಹಜವಾಗಿ, ಶ್ರೀ ಅರವಿಂದರೇ ಆಗಿದ್ದರು. ಭಾರತದ ಉತ್ತರ ಭಾಗದಿಂದ ಯೋಗಿಯೊಬ್ಬರು ಎಂದರೆ ಶ್ರೀ ಅರವಿಂದರು ಪಾಂಡಿಚೇರಿಗೆ ಬರಲಿರುವರು ಎಂಬುದನ್ನು ಅಲ್ಲಿಯ ಯೋಗಿ 'ನಗಾಯಿ ಜಪ್ತಾ' ಮೊದಲೇ ಕಂಡುಕೊಂಡಿದ್ದಕ್ಕೆ ಉತ್ತರ ಯೋಗಿ ಎಂಬ ಹೆಸರು ಸಮಂಜಸವಾಗಿದೆ. ಅದನ್ನು ಬರೆಯುವಾಗ ಶ್ರೀ ಅರವಿಂದರು ಅದರ ಜೊತೆಗೆ ಉಪಸಂಹಾರ ಬರೆದಿದ್ದರು. ಅದರ ಕೊನೆಯ ಭಾಗವನ್ನು ಪುಟ 30 ರ ಕೊನೆಯಲ್ಲಿ ಕೊಡಲಾಗಿದೆ.

*

## ದೇವಿಯನ್ನು ಕುರಿತು ಸ್ತೋತ್ರ

ಜಗತ್ತಿನ ಕಾರಣ ಹಾಗೂ ಜನನಿಯಾದವಳು,
ಶಬ್ದ ಬ್ರಹ್ಮನ ರೂಪ ತಾಳಿದವಳು,
ದಿವ್ಯಾನಂದವನ್ನು ತನ್ನ ದ್ರವ್ಯವಾಗಿರಿಸಿಕೊಂಡವಳು.

ನೀನು ಆದಿಕಾಲದವಳಾಗಿರುವಿ,
ಅನೇಕಾನೇಕ ಜೀವಿಗಳ ಜನನಿಯಾಗಿರುವಿ,
ಜಗತ್ತುಗಳ ಸೃಷ್ಟಿಕರ್ತ ಬ್ರಹ್ಮ, ಕಾಪಾಡುವ ವಿಷ್ಣು, ಲಯಗೊಳಿಸುವ ಶಿವ
ಇವರೆಲ್ಲರ ದೇಹಗಳನು ಸೃಷ್ಟಿಸಿದವಳು ನೀನಾಗಿರುವಿ.

ಜಗತ್ತಿಗೆ ನೀನು ಆದಿಕಾಲದ ಕಾರಣವಾಗಿದ್ದರೂ ಕೂಡ,
ನೀನೆಂದೆಂದಿಗೂ ತರುಣಿಯಾಗಿಯೇ ಇರುವಿ,
ಪರ್ವತರಾಜನ ಪುತ್ರಿಯಾಗಿದ್ದರೂ ಕೂಡ,
ನೀನು ಕೋಮಲತೆಯಿಂದ ತುಂಬಿಕೊಂಡಿರುವಿ,
ವೇದಗಳ ಜನನಿ ನೀನಾಗಿದ್ದರೂ ಕೂಡ,
ನಿನ್ನನವು ವರ್ಣಿಸಲಾರವು.
ನಿನ್ನನ್ನು ಕುರಿತು ಜನರು ಜಪ ಮಾಡಲೇಬೇಕಿದ್ದರೂ ಕೂಡ
ಅವರ ಮನಸ್ಸು ನಿನ್ನನ್ನು ಅರಿತುಕೊಳ್ಳದೇ ಇಹುದು.

*

ಈ ಸ್ತೋತ್ರವನ್ನು ತಾಂತ್ರಿಕ ಸಂಕಲನ 'ತಂತ್ರ ಸಾರ' ಗ್ರಂಥದಿಂದ ಆಯ್ದು ಉಲ್ಲೇಖಿಸಲಾಗಿದೆ. ಅದರ ಪ್ರಾರಂಭ ಶ್ರೇಷ್ಠ ದೈವೀ ಸಂಕೇತದ ಪರಮೋಚ್ಚ ಅರ್ಥದಿಂದ ತುಂಬಿಕೊಂಡಿದೆ, ಅದರ ಕೊನೆ ಜಗಜ್ಜನನಿಯ ದೇಹದ ಆರಾಧನೆಗಾಗಿ ಇಡಿಯಾದ ರೂಪದಲ್ಲಿರುವ ಸ್ವಯಂತ್ಯಾಗ (Self-abandonment). ಈ ಮನೋವೈಶಾಲ್ಯ ಇಡೀ ತಾಂತ್ರಿಕ ಪದ್ಧತಿಗೆ ಮಾದರಿ ರೂಪದ್ದಾಗಿದೆ, ಅದು ತನ್ನ ಅಭೀಪ್ಸೆಯಲ್ಲಿ, ಇಲ್ಲಿಯವರೆಗೆ ಪ್ರಕಟವಾದ ಹಾಗೂ ಪ್ರಕಟವಾಗದೆ ಇರುವ ದೇವನನ್ನು ಆರಾಧನೆಯಲ್ಲಿ, ಸ್ವ–ಶಿಸ್ತುಪಾಲನೆಯಲ್ಲಿ ಹಾಗೂ ಜ್ಞಾನದಲ್ಲಿ ಅಪ್ಪಿಕೊಳ್ಳಲು ಮಾನವಾತ್ಮವೊಂದು ಕೈಕೊಂಡ ಅತ್ಯಂತ ಶ್ರೇಷ್ಠ ಪ್ರಯತ್ನಗಳಲ್ಲಿ ಒಂದಾಗಿದೆ.

**(CWSA, 1/574–75)** – ಶ್ರೀ ಅರವಿಂದರು





## ತಂತ್ರದ ಹಿನ್ನೆಲೆಯಲ್ಲಿರುವ ತತ್ವಜ್ಞಾನ ಹಾಗೂ ಮೂಲಕಾರಣ

### ತಂತ್ರದ ಪ್ರಧಾನ ಮೂಲಕಾರಣ

ಹಾಗಿದ್ದರೂ, ಇಲ್ಲಿಯೂ ಕೂಡ, ವಾಸ್ತವಿಕ ವಿಧಾನಗಳನ್ನು ಮತ್ತು ಆಚರಣೆಗಳನ್ನು ಬದಿಗಿರಿಸಿದರೆ ಮತ್ತು ಪ್ರಧಾನ ತತ್ವನ್ನು ಅರಸಿದರೆ, ತಂತ್ರ ನಿರ್ದಿಷ್ಟವಾಗಿ ಯೋಗದ ವೈದಿಕ ವಿಧಾನಗಳಿಂದ ತನ್ನನ್ನು ಭಿನ್ನವಾಗಿರಿಸಿ–ಕೊಳ್ಳುತ್ತದೆ ಎಂಬುದನ್ನು ನಾವು ಮೊದಲಿಗೆ ಕಂಡುಕೊಳ್ಳುತ್ತೇವೆ. ನಾವು ಇಲ್ಲಿಯವರೆಗೆ ಪರೀಕ್ಷೆಗೊಳಪಡಿಸಿದ ಎಲ್ಲ ಯೋಗ ಪದ್ಧತಿಗಳು ಒಂದರ್ಥದಲ್ಲಿ ತಾತ್ವಿಕವಾಗಿ ವೇದಾಂತಿಕವಾಗಿವೆ, ಅವುಗಳ ಶಕ್ತಿ ಜ್ಞಾನದಲ್ಲಿದೆ, ಅವುಗಳ ವಿಧಾನ ಜ್ಞಾನದ್ದಾಗಿದೆ, ಆದಾಗ್ಯೂ ಅದನ್ನು, ಯಾವಾಗಲೂ, ಬುದ್ಧಿಮತ್ತೆಯಿಂದ ಒಳನೋಟಕ್ಕೆ ಒಳಪಡಿಸಿದ್ದಾಗಿರುವುದಿಲ್ಲ, ಆದರೆ ಅದರ ಬದಲಾಗಿ ಪ್ರೇಮ ಮತ್ತು ನಂಬಿಕೆಗಳಲ್ಲಿ ಅಭಿವ್ಯಕ್ತಪಡಿಸಿದ ಹೃದಯದ ಜ್ಞಾನವಾಗಿರಬಹುದು, ಇಲ್ಲವೆ ಕ್ರಿಯೆಯ ಮೂಲಕ ಕಾರ್ಯಗತಗೊಳಿಸುವ ಸಂಕಲ್ಪದಲ್ಲಿಯ ಜ್ಞಾನವಾಗಿರಬಹುದು. ಅವುಗಳೆಲ್ಲವುಗಳಲ್ಲಿ ಯೋಗದ ಪ್ರಭು ಪುರುಷನಾಗಿರುತ್ತಾನೆ, ಅವನು ಪ್ರಜ್ಞಾಪೂರ್ಣ ದಿವ್ಯಾತ್ಮ, ಅವನು ತಿಳಿದಿರುತ್ತಾನೆ, ಅವಲೋಕಿಸುತ್ತಾನೆ, ಆಕರ್ಷಿಸುತ್ತಾನೆ ಮತ್ತು ಆಳಿಕೆ ನಡೆಸುತ್ತಾನೆ. ಆದರೆ ತಂತ್ರದಲ್ಲಿ ಅದು ಹೆಚ್ಚಾಗಿ ಪ್ರಕೃತಿ, ಪ್ರಕೃತಿಯ ಆತ್ಮ, ದೈವೀ ಚೈತನ್ಯ, ದೈವೀ ಸಾಮರ್ಥ್ಯದಲ್ಲಿರುವ ದೈವೀ ಸಂಕಲ್ಪ, ವಿಶ್ವದಲ್ಲಿ ನಿರ್ವಹಿಸುತ್ತಿರುವಂತಹದು. ದೈವೀ ಸಾಮರ್ಥ್ಯದಲ್ಲಿರುವ ದೈವೀ ಸಂಕಲ್ಪದ ನಿಕಟ ರಹಸ್ಯಗಳನ್ನು, ಅದರ ವಿಧಾನಗಳನ್ನು, ಅದರ ತಂತ್ರವನ್ನು ಕಲಿತುಕೊಳ್ಳುವುದರ ಹಾಗೂ ಅನ್ವಯಿಸುವುದರ ಮೂಲಕ ತಾಂತ್ರಿಕ ಯೋಗಿ ತನ್ನ ಶಿಸ್ತುಪಾಲನೆಯ ಗುರಿಗಳನ್ನು ಬೆಂಬತ್ತುತ್ತಿದ್ದ – ಆ ಗುರಿಗಳು ಪ್ರಭುತ್ವ, ಪರಿಪೂರ್ಣತೆ, ಮುಕ್ತಿ

ಹಾಗೂ ದಿವ್ಯಾನಂದ ಇವೆಲ್ಲ ಆಗಿವೆ. ಪ್ರಕಟವಾದ ಪ್ರಕೃತಿ ಹಾಗೂ ಅದರ ತೊಂದರೆ ಇವುಗಳಿಂದ ಹಿಂದೆಗೆದುಕೊಳ್ಳದೆ ತಾಂತ್ರಿಕ ಯೋಗಿ ಅವುಗಳನ್ನು ಎದುರಿಸಿದ, ಹಿಡಿದುಕೊಂಡ ಮತ್ತು ಅವುಗಳ ಮೇಲೆ ಜಯ ಸಾಧಿಸಿದ. ಆದರೆ ಕೊನೆಗೆ, ಪ್ರಕೃತಿಯ ಸರ್ವಸಾಧಾರಣ ಪ್ರವೃತ್ತಿ ಇರುವ ಹಾಗೆ, ತಾಂತ್ರಿಕ ಯೋಗಿ ಹೆಚ್ಚಿನ ಮಟ್ಟದಲ್ಲಿ, ಅದರ ಯಾಂತ್ರಿಕತೆಯ ಮೂಲಕಾರಣವನ್ನು ಕಳೆದುಕೊಂಡ, ಆ ಮೂಲಕಾರಣ ಸೂತ್ರಗಳ ಹಾಗೂ ರಹಸ್ಯ ಯಾಂತ್ರಿಕತೆಯ ವಿಷಯವಾಗಿಬಿಟ್ಟಿತು. ಆದಾಗ್ಯೂ ಸರಿಯಾಗಿ ಉಪಯೋಗಿಸಿದರೆ ಸಾಮರ್ಥ್ಯಪೂರ್ಣ ಆಗಬಹುದಾಗಿದ್ದ ಅದು ಮೂಲ ಉದ್ದೇಶದ ಸ್ಪಷ್ಟತೆಯಿಲ್ಲದೆ ಪತನಗೊಂಡಿತು.

*

**ವೇದಾಂತ ಮತ್ತು ತಂತ್ರ: ಒಂದೇ ದೈವೀಸತ್ಯದ ಎರಡು ಬದಿಗಳು**

ವೇದ ಮತ್ತು ವೇದಾಂಗ ದೈವೀಸತ್ಯದ ಒಂದು ಬದಿ, ದೈವೀ ಶಕ್ತಿಯ ಮೇಲೆ ಒತ್ತುಕೊಟ್ಟಿರುವ ತಂತ್ರ ಆ ಸತ್ಯದ ಇನ್ನೊಂದು ಬದಿ. ಈ ಯೋಗದಲ್ಲಿ ಅವುಗಳಿಗೆ ಮೊದಲು ಕೊಡಲಾಗಿದ್ದ ಪದ್ಧತಿ ಪ್ರಕಾರ ಇರುವ ರೂಪಗಳಲ್ಲಿ ಅವುಗಳನ್ನು ತೆಗೆದುಕೊಳ್ಳಲಾಗಿಲ್ಲ, ಆದರೆ ಅವುಗಳ ಸಾರದಲ್ಲಿ ಅತ್ಯಂತ ಸಂಪೂರ್ಣ ಹಾಗೂ ಅತ್ಯುಚ್ಚ ಪ್ರಾಮುಖ್ಯತೆಯತ್ತ ಅವುಗಳನ್ನು ಕೊಂಡೊಯ್ಯಲಾಗಿದೆ. ಆದರೆ ವೇದಾಂತ ದೈವೀ ಜ್ಞಾನದ ಮೂಲಕಾರಣಗಳನ್ನು ಹಾಗೂ ಸಾರಸರ್ವಸ್ವವನ್ನು ಕುರಿತು ವ್ಯವಹರಿಸುತ್ತದೆ. ಮತ್ತು ಹಾಗಾಗಿ ಅದರ ಆಧ್ಯಾತ್ಮಿಕ ಜ್ಞಾನದ ಹಾಗೂ ಅನುಭವದ ಬಹಳಷ್ಟನ್ನು ಒಟ್ಟಾಗಿ 'ಆರ್ಯ' ಪತ್ರಿಕೆಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. ತಂತ್ರ ಹೆಚ್ಚಿನ ರೀತಿಯಲ್ಲಿ ರೂಪಗಳು, ವಿಧಾನಗಳು ಹಾಗೂ ಸಂಘಟಿತಗೊಂಡ ಸಾಮರ್ಥ್ಯಗಳು ಇವುಗಳೊಡನೆ ವ್ಯವಹರಿಸುತ್ತದೆ, ಹಾಗಾಗಿ ಅವುಗಳಿದ್ದ ಹಾಗೆ ಅವುಗಳನ್ನು ಕೈಗೆತ್ತಿಕೊಂಡಿಲ್ಲ, ಏಕೆಂದರೆ ಸಮಗ್ರ ಯೋಗ ತನ್ನದೇ ರೂಪಗಳನ್ನು, ವಿಧಾನಗಳನ್ನು ಹಾಗೂ ಸಂಘಟಿತ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವ ಆವಶ್ಯಕತೆ ಇರುತ್ತದೆ, ಆದರೆ ನಾನು ಅಷ್ಟೊಂದು ಒತ್ತುಕೊಟ್ಟು ಹೇಳಿದ ಪರಿವರ್ತನೆಯ ವಿಧಾನದ ಹಿನ್ನೆಲೆಯಲ್ಲಿ ಕೇಂದ್ರಗಳ ಮೂಲಕ ಪ್ರಜ್ಞೆಯ ಆರೋಹಣ ಮತ್ತು ಇತರ ತಾಂತ್ರಿಕ ಜ್ಞಾನ ಇವೆ – ಹಾಗೆಯೇ ಶ್ರೀಮಾತೆಯವರ ಶಕ್ತಿಯ ಸಹಾಯವಿಲ್ಲದೆ ಏನನ್ನೂ ಕೈಕೊಳ್ಳಲಾಗುವುದಿಲ್ಲ ಎಂಬ ಸತ್ಯ ಕೂಡ ಅಲ್ಲಿದೆ.

**(SABCL, 22/72–73, CWSA, 29/459)**

*



**ತಂತ್ರದ ಎರಡು ಮಾರ್ಗಗಳು**

ಭಾರತದಲ್ಲಿ ಗಮನಾರ್ಹವಾದ ಯೌಗಿಕ ಪದ್ಧತಿ ಇನ್ನೂ ಇದೆ ಎಂಬುದನ್ನು, ಅದರ ಸ್ವಭಾವದಲ್ಲಿ ಅದು ಸಮನ್ವಯ ರೂಪದ್ದು ಹಾಗೂ ಪ್ರಕೃತಿಯ ಮೂಲ–ಕಾರಣದಿಂದ ಮತ್ತು ಅದರ ಶ್ರೇಷ್ಠ ಕ್ರಿಯಾಶೀಲ ಶಕ್ತಿಯಿಂದ ಪ್ರಾರಂಭಿಸುವಂತಹದು ಎಂಬುದನ್ನು ನಾವು ಮೊದಲಿಗೆ ಅವಲೋಕಿಸುತ್ತೇವೆ. ಆದರೆ ಅದು ಬೇರೆಯ ರೀತಿಯದೇ ಆದ ಯೋಗ, ಇತರ ಯೋಗಗಳೊಡನೆ ಸಮನ್ವಯ ಕಂಡು–ಕೊಂಡದ್ದಲ್ಲ. ಈ ಪದ್ಧತಿ ತಂತ್ರದ ಮಾರ್ಗವಾಗಿದೆ. ತಾಂತ್ರಿಕರಲ್ಲದವರೊಂದಿಗೆ ಕೂಡಿಕೊಂಡಾಗ ಅದರಲ್ಲಾದ ಬೆಳವಣಿಗೆಗಳಿಂದ ಅದು ಅಪಖ್ಯಾತಿಗೊಳಗಾಗಿ ಪತನಗೊಂಡಿತು. ವಿಶೇಷವಾಗಿ ಅದರ ವಾಮ ಮಾರ್ಗದಲ್ಲಿ ಆದ ಬೆಳವಣಿಗೆ ಅದಕ್ಕೆ ಕಾರಣವಾಗಿತ್ತು. ಆ ಮಾರ್ಗ ಸದ್ಗುಣ ಹಾಗೂ ಪಾಪ ಇವುಗಳ ದ್ವಂದ್ವವನ್ನು ಮೀರಿ ಹೋಗುವುದರಲ್ಲಿ, ಅವುಗಳ ಸ್ಥಾನದಲ್ಲಿ ಕ್ರಿಯೆಯ ಸ್ವಯಂಪ್ರೇರಿತ ಔಚಿತ್ಯವನ್ನು ತರುವುದರಲ್ಲಿ ತೃಪ್ತಿ ಕಂಡುಕೊಳ್ಳದೆ, ಕೆಲವೊಮ್ಮೆ, ಸ್ವ–ಲೋಲುಪತೆಯನ್ನು ಒಂದು ವಿಧಾನವನ್ನಾಗಿ ಮಾಡುತ್ತಿರುವಂತೆ ತೋರಿಬಂದಿತು, ಅದು ಕಟ್ಟುನಿಟ್ಟಿಲ್ಲದ ಸಾಮಾಜಿಕ ಅನೈತಿಕತೆಯ ಒಂದು ವಿಧಾನವಾಗಿತ್ತು. ಹಾಗಿದ್ದಾಗಲೂ ಅದರ ಮೂಲದಲ್ಲಿ ತಂತ್ರ ಶ್ರೇಷ್ಠ ಹಾಗೂ ಬಲವತ್ತರವಾದ ಪದ್ಧತಿಯಾಗಿತ್ತು, ಕನಿಷ್ಠ ಪಕ್ಷ, ಅದನ್ನು ಭಾಗಶಃ ಸತ್ಯವಾದ ವಿಚಾರಗಳ ಆಧಾರದ ಮೇಲೆ ಸ್ಥಾಪಿಸಲಾಗಿತ್ತು. ದಕ್ಷಿಣ ಮಾರ್ಗ ಮತ್ತು ವಾಮ ಮಾರ್ಗ ಎಂದು ಎರಡು ಬಗೆಯಲ್ಲಿ ವಿಭಜನೆಗೊಂಡ ಇವು ಕೂಡ ಕೆಲವೊಂದು ಗಾಢವಾದ ಗ್ರಹಿಕೆಯಿಂದ ಮುಂದೆ ಸಾಗಿದ್ದವು. ದಕ್ಷಿಣ ಮತ್ತು ವಾಮ ಶಬ್ದಗಳ ಪ್ರಾಚೀನ ಕಾಲದ ಅರ್ಥದಲ್ಲಿ ಜ್ಞಾನ ಮಾರ್ಗ ಮತ್ತು ಆನಂದದ ಮಾರ್ಗ ಎಂಬ ಭೇದವಿತ್ತು. ಮನುಷ್ಯನಲ್ಲಿರುವ ಪ್ರಕೃತಿ ಸರಿಯಾದ ವ್ಯತ್ಯಾಸ ಗುರುತಿಸುವುದರ ಮೂಲಕ ತನ್ನನ್ನು ಮುಕ್ತಗೊಳಿಸಿಕೊಳ್ಳುತ್ತದೆ, ಈ ಗುರುತಿಸಿಕೊಳ್ಳುವಿಕೆ ಆ ಪ್ರಕೃತಿಯ ಚೈತನ್ಯಗಳಲ್ಲಿ, ಅಂಶಗಳಲ್ಲಿ ಹಾಗೂ ಸಾಧ್ಯಗೊಳಿಸುವ ಶಕ್ತಿಗಳಲ್ಲಿ ಇರುವ ಸಾಮರ್ಥ್ಯ ಹಾಗೂ ಆಚರಣೆ ಇವುಗಳಲ್ಲಿ ಇರಬೇಕು. ಮತ್ತು ಮನುಷ್ಯನಲ್ಲಿರುವ ಪ್ರಕೃತಿಯ ಈ ಮುಕ್ತಗೊಳಿಸಿಕೊಳ್ಳುವಿಕೆ ತನ್ನದೇ ಚೈತನ್ಯಗಳು, ಅಂಶಗಳು ಹಾಗೂ ಸಾಧ್ಯಗೊಳಿಸುವ ಶಕ್ತಿಗಳು ಇವುಗಳಲ್ಲಿರುವ ಸಾಮರ್ಥ್ಯ ಹಾಗೂ ಆಚರಣೆ ಇವುಗಳನ್ನು ಸಂತೋಷದಿಂದ ಒಪ್ಪಿಕೊಳ್ಳುವುದರ ಮೂಲಕ ಬರಬಹುದು. ಆದರೆ ಅವೆರಡೂ ಮಾರ್ಗಗಳಲ್ಲಿ ಕೊನೆಗೆ ತತ್ವಗಳಲ್ಲಿ ಮಬ್ಬಾಗುವಿಕೆಯಿತ್ತು, ಸಂಕೇತಗಳ ವಿರೂಪಗೊಳ್ಳುವಿಕೆ ಮತ್ತು ಪತನಗಳಿದ್ದವು.

**(CWSA, 23/42–43)**

*

**ತಂತ್ರದ ಪ್ರಧಾನ ಕಲ್ಪನೆ**

ಈ ಪ್ರಧಾನ ತಾಂತ್ರಿಕ ಕಲ್ಪನೆಯಲ್ಲಿ ಸತ್ಯದ ಒಂದು ಬದಿಯಿದೆ; ಎಲ್ಲ ಸಿದ್ಧಿಗಾಗಿ ಏಕೈಕ ಪರಿಣಾಮಕಾರಿ ಶಕ್ತಿ ಇಲ್ಲವೆ ಚೈತನ್ಯವನ್ನು ದೈವೀ ಶಕ್ತಿಯ ಪೂಜೆಯಿಂದ ದೊರಕಿಸುವುದಾಗಿದೆ. ಶಕ್ತಿಯನ್ನು ಕುರಿತು ವೇದಾಂತಿಕ ಕಲ್ಪನೆಯ ಇನ್ನೊಂದು ತುದಿಯಲ್ಲಿ, ಅದು ಮಾಯೆಯ ಸಾಮರ್ಥ್ಯವೆಂದು ಕಂಡುಕೊಳ್ಳುತ್ತೇವೆ ಮತ್ತು ನಿಶ್ಚಲ ನೀರವತೆಯಲ್ಲಿ ನಿಷ್ಕ್ರಿಯ ಪುರುಷನನ್ನು ಅರಸುವುದು ಕ್ರಿಯಾಶೀಲ ದೈವೀ ಚೈತನ್ಯ ಸೃಷ್ಟಿಸಿದ ಮೋಸದಿಂದ ಮುಕ್ತವಾಗುವುದಕ್ಕೆ ಒಂದು ಸಾಧನವಾಗಿರುತ್ತದೆ. ಆದರೆ ಸಮಗ್ರ ಕಲ್ಪನೆಯಲ್ಲಿ ಪ್ರಜ್ಞಾಪೂರ್ಣ ದಿವ್ಯಾತ್ಮ ಪ್ರಭುವಾಗಿರುತ್ತಾನೆ, ಪ್ರಕೃತಿಯ ಆತ್ಮ ನಿರ್ವಾಹಕ ದೈವೀ ಚೈತನ್ಯವಾಗಿರುತ್ತದೆ. ಪುರುಷ 'ಸತ್'ದ ಸ್ವರೂಪದವನು, ಪರಿಶುದ್ಧ ಹಾಗೂ ಅನಂತ ಪ್ರಜ್ಞಾಪೂರ್ಣ ಸ್ವ–ಅಸ್ತಿತ್ವ ಹೊಂದಿರುವವನು ಆಗಿರುತ್ತಾನೆ, ದೈವೀ ಶಕ್ತಿ ಅಥವಾ ಪ್ರಕೃತಿ 'ಚಿತ್'ದ ಸ್ವರೂಪದ್ದಾಗಿರುತ್ತದೆ – ಅದು ಪರಿಶುದ್ಧ ಹಾಗೂ ಅನಂತನಾದ ಪುರುಷನ ಸ್ವ–ಪ್ರಜ್ಞೆಯುಳ್ಳ ಅಸ್ತಿತ್ವದ ಸಾಮರ್ಥ್ಯ. ಅವೆರಡರ ಸಂಬಂಧ ವಿಶ್ರಾಂತಿ ಹಾಗೂ ಕ್ರಿಯೆ ಇವುಗಳ ಧ್ರುವಗಳ ನಡುವೆ ಅಸ್ತಿತ್ವದಲ್ಲಿರುತ್ತದೆ. ಪ್ರಜ್ಞಾಪೂರ್ಣ ಸ್ವ–ಅಸ್ತಿತ್ವದ ದಿವ್ಯಾನಂದದಲ್ಲಿ ದೈವೀ ಚೈತನ್ಯವನ್ನು ಹೀರಿಕೊಂಡಾಗ ಅಲ್ಲಿ ವಿಶ್ರಾಂತಿ ಇರುತ್ತದೆ, ಪುರುಷ ತನ್ನನ್ನು ದೈವೀ ಚೈತನ್ಯದ ಕ್ರಿಯೆಯಲ್ಲಿ ಸುರಿದು ಹೊರಹರಿಸಿದಾಗ ಅಲ್ಲಿ ಕ್ರಿಯೆ ಇರುತ್ತದೆ, ಸೃಷ್ಟಿ ಮತ್ತು ಸಂಭೂತಿಯ ಆನಂದ ಇರುತ್ತವೆ. ಆದರೆ ಆನಂದ ಸೃಷ್ಟಿಕರ್ತನಾದಾಗ ಮತ್ತು ಎಲ್ಲ ಸಂಭೂತಿಗಳ ಜನಕನಾದಾಗ, ಅದರ ವಿಧಾನ ತಪಸ್ಸಿನದಾಗಿರುತ್ತದೆ, ಇಲ್ಲವೆ ಅಸ್ತಿತ್ವದಲ್ಲಿರುವ ಅದರದೇ ಅನಂತ ಸಾಧ್ಯಗೊಳಿಸುವ ಶಕ್ತಿಯ ಮೇಲೆ ನೆಲೆಸಿ ಅದರಿಂದ ಕಲ್ಪನೆಯ ಸತ್ಯಗಳನ್ನು ಇಲ್ಲವೆ ನಿಜವಾದ ವಿಚಾರಗಳನ್ನು ಉತ್ಪಾದಿಸುವುದಾಗಿರುತ್ತದೆ, ಸರ್ವಜ್ಞ ಹಾಗೂ ಸರ್ವಶಕ್ತ ದೈವೀ ಅಸ್ತಿತ್ವದಿಂದ ಮುಂದುವರಿಯುವ ವಿಜ್ಞಾನವಿರುತ್ತದೆ, ಇವುಗಳಿಗೆ ನೆರವೇರಿಕೆಯ ತಮ್ಮದೇ ನಿಶ್ಚಿತತೆ ಇರುತ್ತದೆ ಮತ್ತು ಅವು ತಮ್ಮಲ್ಲಿ ಮನಸ್ಸು, ಪ್ರಾಣ ಹಾಗೂ ಭೌತದ್ರವ್ಯಗಳನ್ನೊಳಗೊಂಡ ಸಂಭೂತಿ ಪಡೆಯುವ ಸ್ವಭಾವ ಹಾಗೂ ನಿಯಮಗಳನ್ನು ಒಳಗೊಂಡಿರುತ್ತವೆ. ತಪಸ್ಸಿನ ಕೊನೆಯ ಸರ್ವಶಕ್ತಿ ಮತ್ತು ದೈವೀ ವಿಚಾರದ, ವಿಫಲವಾಗದ ನೆರವೇರಿಕೆ ಇವು ಎಲ್ಲ ಯೋಗದ ತಳಹದಿ–ಯಾಗಿರುತ್ತವೆ. ಮನುಷ್ಯನಲ್ಲಿ ಈ ಪದಗಳಿಗೆ ಪ್ರತಿಯಾಗಿ ದೈವೀ ಸಂಕಲ್ಪ, ನಂಬಿಕೆ ಎಂಬ ಪದಗಳನ್ನು ಕೊಡುತ್ತೇವೆ – ಕೊನೆಗೆ ಸ್ವ–ಪರಿಣಾಮ ಕಂಡುಕೊಳ್ಳುವ



ಸಂಕಲ್ಪವಿದೆ, ಏಕೆಂದರೆ ಅದು ದೈವೀ ಜ್ಞಾನದ ದ್ರವ್ಯವಾಗಿರುತ್ತದೆ, ನಂಬಿಕೆ: ಅದು ಪ್ರಕಟಣೆಯಲ್ಲಿ ಇನ್ನೂ ಸಿದ್ಧಿಸಿಕೊಳ್ಳಲಾಗಿರದ ದೈವೀ ಸತ್ಯ ಇಲ್ಲವೆ ನಿಜವಾದ ವಿಚಾರ ಇದರ ಪ್ರತಿಫಲನದ ಪ್ರಕಾಶ ನಿಮ್ಮ ಪ್ರಜ್ಞೆಯಲ್ಲಿ ಇರುವುದಾಗಿದೆ. ದೈವೀ ವಿಚಾರದ ಈ ಸ್ವ–ನಿಶ್ಚಿತತೆ ಕುರಿತು ಗೀತೆಯಲ್ಲಿ ಹೇಳಿದ್ದು ಹೀಗಿದೆ: "ಯೋ ಯಚ್ಛ್ರದ್ಧಃ ಸ ಏವ ಸಃ" ಮನುಷ್ಯನಲ್ಲಿಯ ನಂಬಿಕೆ ಏನಾಗಿರುತ್ತದೆಯೋ ಇಲ್ಲವೆ ಅವನಲ್ಲಿ ನಿಶ್ಚಿತ ವಿಚಾರ ಏನಿರುತ್ತದೆಯೋ ಅದೇ ಅವನಾಗಿರುತ್ತಾನೆ.

**(SABCL, 20/39; CWSA, 23/44)** **– ಶ್ರೀ ಅರವಿಂದರು**

*


**ಸ್ತ್ರೀಯನ್ನು ದೇವಿಯೆಂದು ಪೂಜಿಸುವುದು**


ವಿದ್ಯಾಃ ಸಮಸ್ತಾಸ್ ತವ ದೇವಿ ಭೇದಾಃ।
ಸ್ತ್ರಿಯಃ ಸಮಸ್ತಾಃ ಸಕಲಾ ಜಗತ್ಸು॥

"ಓ ದೇವಿ, ಎಲ್ಲ ವಿಜ್ಞಾನಗಳು ನಿನ್ನ ಭಿನ್ನ ಭಾಗಗಳಾಗಿವೆ, ಜಗತ್ತುಗಳಲ್ಲಿರುವ ಎಲ್ಲ ಸ್ತ್ರೀಯರು ಇಡಿಯಾಗಿ ನಿನ್ನವರೇ ಆಗಿರುವರು." ಹಾಗಾಗಿ ಜೀವಿಸಿರುವ ವ್ಯಕ್ತಿ–ವಿಶಿಷ್ಟತೆಯಲ್ಲಿ ಸ್ತ್ರೀ ತತ್ವ ಕಂಡುಬರುವುದರಲ್ಲೆಲ್ಲ ಜಗತ್ತಿಗೆ ಆಧಾರವಾಗಿರುವ ದೈವತ್ವದ ಮಾತೃ ಆತ್ಮದ ಇಡಿಯಾದ ಸಾನ್ನಿಧ್ಯವಿರುವುದು ಕಂಡುಬರುತ್ತದೆ. ದೇವಿ ತನ್ನ ಎಲ್ಲ ಮುಖ(ಕಲಾ)ಗಳೊಂದಿಗೆ ಸ್ತ್ರೀಯಲ್ಲಿದ್ದಾಳೆ, ಸ್ತ್ರೀಯಲ್ಲಿ ನಾವು ದುರ್ಗಾ, ಅನ್ನಪೂರ್ಣಾ, ತಾರಾ, ಮಹಾವಿದ್ಯೆಗಳು ಇವರೆಲ್ಲರನ್ನೂ ನೋಡಬೇಕು. 'ತಂತ್ರ' ಗ್ರಂಥದಲ್ಲಿ ಮಿ.ಅವಾಲೋನ್(Avalon) ತನ್ನ ಮುನ್ನುಡಿಯಲ್ಲಿ ಬರೆದದ್ದು ಹೀಗಿದೆ: "ಸ್ತ್ರೀಯರ ಪಾದಗಳನ್ನು ಕಂಡ ಎಲ್ಲೆಡೆಯಲ್ಲಿ ಮನುಷ್ಯ ತನ್ನ ಗುರುವನ್ನು ಕುರಿತು ಮಾಡುವ ಹಾಗೆ ಪೂಜೆ ಮಾಡಬೇಕು." ಹೀಗೆ ಹಿಂದೂ ಧರ್ಮ ಕುರಿತು ಇರುವ ಶಾಕ್ತರ ಯೋಚನೆ ಮನುಷ್ಯನಲ್ಲಿ ಅಡಗಿದ ದೈವತ್ವ ಕುರಿತು ವೇದಾಂತದ ಸಾರಿ ಹೇಳುವಿಕೆಯನ್ನು ಪೂರ್ತಿಗೊಳಿಸುತ್ತದೆ, ಅದನ್ನು ನಾವು, ಆಚರಣೆಯಲ್ಲಿ, ಪುರುಷರಿಗೆ ಮಾತ್ರ ಅನ್ವಯಿಸುವ ವಿಷಯವೆಂದು ಭಾವಿಸುವ ಒಲವು ಹೊಂದಿ–ರುತ್ತೇವೆ. ದ್ವಿವಿಧ ಪ್ರಕಟಣೆಯಲ್ಲಿರುವ ಪರಿಪೂರ್ಣ ಸಮತೆಯನ್ನು ವಾಸ್ತವದಲ್ಲಿ ನಾವು ನಿರಾಕರಿಸದಿದ್ದರೂ, ಮೌನದಿಂದ ಅದನ್ನು ದೂರ ಸರಿಸಿ ಇಡುತ್ತೇವೆ.

**(CWSA, 1/571)** **– ಶ್ರೀ ಅರವಿಂದರು**


*






*

**ಶ್ರೀಮಾತೆಯವರ ಚಿಹ್ನೆ**





# ಕುಂಡಲಿನಿ ಶಕ್ತಿ

## ಸುತ್ತಿಕೊಂಡ ಯೋಗಶಕ್ತಿಯನ್ನು ಜಾಗ್ರತಗೊಳಿಸುವುದು

**ಪ್ರಶ್ನೆ :** *ಮಧುರ ಮಾತೆಯವರೆ, ಇಲ್ಲಿ ಬರೆದದ್ದು ಹೀಗಿದೆ: "ಅಲ್ಲಿ ಸುತ್ತಿ ಹಾಕಿಕೊಂಡ ಇಲ್ಲವೆ ನಿದ್ರೆಯಲ್ಲಿರುವ ಯೋಗ–ಶಕ್ತಿ ಇದೆ". ಅದನ್ನು ಜಾಗ್ರತಗೊಳಿಸುವುದು ಹೇಗೆ?*

**ಶ್ರೀಮಾತೆ :** ಯೋಗವನ್ನು ಆಚರಿಸುವ ನಿರ್ಧಾರ ಕೈಕೊಂಡ ಕೂಡಲೆ ಅದು ಬಹಳ ಸ್ವಾಭಾವಿಕವಾಗಿ ಜಾಗ್ರತಗೊಳ್ಳುತ್ತದೆ. ನಿರ್ಧಾರ ನಿಷ್ಕಪಟದ್ದಾಗಿದ್ದರೆ ಮತ್ತು ಮನುಷ್ಯನಲ್ಲಿ ಅಭೀಪ್ಸೆಯಿದ್ದರೆ ಅದು ತನ್ನಷ್ಟಕ್ಕೆ ತಾನೇ ಜಾಗ್ರತಗೊಳ್ಳುತ್ತದೆ. ವಾಸ್ತವದಲ್ಲಿ ಬಹುಶಃ ಅದು ಜಾಗ್ರತಗೊಂಡಿರುವುದು ಯೋಗ ಕೈಕೊಳ್ಳುವುದಕ್ಕೆ ಅಭೀಪ್ಸೆ ನೀಡುತ್ತದೆ.

ದೈವೀ ಕೃಪೆಯ ಪರಿಣಾಮವೆಂದು ಅದಾಗಿರುವ ಸಾಧ್ಯತೆ ಇದೆ. ಇಲ್ಲವೆ ಕೆಲವು ಮಾತುಕತೆಗಳ ನಂತರ ಇಲ್ಲವೆ ಏನನ್ನೋ ಓದಿದ ನಂತರ ಅದು ನಿಮಗೆ ಯೋಗ ಎಂದರೆ ಏನು ಹಾಗೂ ಅದನ್ನು ಆಚರಿಸುವುದು ಹೇಗೆ ಎಂಬುದನ್ನು ತಿಳಿದುಕೊಳ್ಳಲು ವಿಚಾರವನ್ನು ಹಾಗೂ ಅಭೀಪ್ಸೆಯನ್ನು ಒಮ್ಮೆಗೆ ಕೊಟ್ಟಿರಬಹುದು. ಕೆಲವೊಮ್ಮೆ ಯಾರೋ ಒಬ್ಬರೊಡನೆ ನಡೆಸಿದ ಮಾತುಕತೆ, ಇಲ್ಲವೆ ಪುಸ್ತಕವೊಂದರಲ್ಲಿ ಓದಿದ ಒಂದು ಪದಚ್ಛೇದ ಸಾಕಾಗುತ್ತದೆ; ಸರಿ, ಅದು ಈ ಯೋಗಶಕ್ತಿಯನ್ನು ಜಾಗ್ರತಗೊಳಿಸುತ್ತದೆ ಮತ್ತು ಇದು ನೀವು ಯೋಗವನ್ನು ಕೈಕೊಳ್ಳುವಂತೆ ಮಾಡುತ್ತದೆ. ಮೊದಲಿಗೆ ಮನುಷ್ಯ ಅದರ ಬಗ್ಗೆ ಅರಿವುಳ್ಳವನಾಗಿರುವುದಿಲ್ಲ – ಕೇವಲ ನಮ್ಮ ಜೀವನದಲ್ಲಿ ಏನೋ ಒಂದು ಬದಲಾಗಿರುತ್ತದೆ, ಹೊಸ ನಿರ್ಧಾರವನ್ನು ಮಾಡಲಾಗಿರುತ್ತದೆ, ಒಂದು ಹೊರಳುವಿಕೆ ಇರುತ್ತದೆ, ಇಂತಹದಷ್ಟೇ ಅವನಿಗೆ ತಿಳಿದಿರುತ್ತದೆ.

**(CWM, 7/30,30–3–1955)**

*

**ಪ್ರಶ್ನೆ :** *ಮಧುರ ಮಾತೆಯವರೆ, ಈ ಯೋಗಶಕ್ತಿ ಎಂದರೆ ಏನು?*

**ಶ್ರೀಮಾತೆ :** ಅದು ಪ್ರಗತಿಯ ಚೈತನ್ಯ. ನೀವು ಯೋಗವನ್ನು ಕೈಕೊಳ್ಳುವಂತೆ ಮಾಡುವ ಚೈತನ್ಯ, ನಿಖರವಾಗಿ ಅದು ನೀವು ಪ್ರಜ್ಞಾ ಪೂರ್ವಕವಾಗಿ ಪ್ರಗತಿ ಸಾಧಿಸುವಂತೆ ಮಾಡುತ್ತದೆ. ಅದು ಪ್ರಜ್ಞಾಪೂರ್ಣ ಚೈತನ್ಯ.

ವಾಸ್ತವದಲ್ಲಿ ಯೋಗವನ್ನು ಕೈಕೊಳ್ಳುವುದಕ್ಕಾಗಿರುವ ಸಾಮರ್ಥ್ಯ ಯೋಗಶಕ್ತಿಯಾಗಿರುತ್ತದೆ.

**ಪ್ರಶ್ನೆ :** *ಮಧುರ ಮಾತೆಯವರೆ, ಕೆಳಗಿನಿಂದ ದೈವೀ ಶಕ್ತಿಗಳನ್ನು ಎಳೆದುಕೊಳ್ಳುವುದು ಹೆಚ್ಚು ಕಠಿಣವಾಗಿರುತ್ತದೆ ಅಲ್ಲವೆ?*

**ಶ್ರೀಮಾತೆ :** ಅದು ಸಂಪೂರ್ಣವಾಗಿ ನಿರರ್ಥಕ ಎಂದು ನನಗನಿಸುತ್ತದೆ.

ಚೈತನ್ಯದ ಹೆಚ್ಚಿನ ಸಂಚಯ(reserve)ಗಳಿವೆ ಎಂದು ಕೆಲವು ಜನರು ಯೋಚಿಸುತ್ತಾರೆ – ನಾನಿದನ್ನು ಬಹಳಷ್ಟು ಸಲ ಕೇಳಿದ್ದೇನೆ: ಪೃಥ್ವಿಯಲ್ಲಿ ಚೈತನ್ಯದ ಭವ್ಯ ಸಂಚಯವಿದೆ ಎಂದು ಹೇಳುತ್ತಾರೆ ಮತ್ತು ಅವರು ಈ ಚೈತನ್ಯವನ್ನು ತಮ್ಮೊಳಗೆ ಎಳೆದುಕೊಂಡರೆ ಹಲವಾರು ವಿಷಯಗಳನ್ನು ಕೈಕೊಳ್ಳಲು ಶಕ್ತರಾಗುತ್ತಾರೆ ಎಂಬ ಭಾವನೆ ಅವರಲ್ಲಿದೆ; ಆದರೆ ಅದು ಯಾವಾಗಲೂ ಮಿಶ್ರಣಕ್ಕೊಳಗಾಗಿರುತ್ತದೆ.

**(CWM, 7/101)**

*

**ಪ್ರಶ್ನೆ :** *ಈ ಯೋಗಶಕ್ತಿಯನ್ನು ಜಾಗ್ರತಗೊಳಿಸುವುದು ಹೇಗೆ?*

**ಶ್ರೀಮಾತೆ :** ಅದು ಅವಲಂಬಿಸಿರುವ ರೀತಿ ಹೀಗಿದೆ: ಜೀವನದಲ್ಲಿ ಅತ್ಯಂತ ಮಹತ್ವದ್ದಾದ ವಿಷಯ ಅದೊಂದೇ ಆಗಿದೆ ಎಂದು ಯೋಚಿಸಿದಾಗ ಅದು ಜಾಗ್ರತಗೊಳ್ಳುತ್ತದೆ. ಅಷ್ಟೇ. ಕೆಲವು ಜನರು ಧ್ಯಾನ ಮಾಡುತ್ತ ಕುಳಿತುಕೊಳ್ಳುತ್ತಾರೆ. ಬೆನ್ನೆಲುಬಿನ ಆಧಾರ ಸ್ಥಾನ(ಮೂಲಾಧಾರ)ದ ಮೇಲೆ ಏಕಾಗ್ರತೆ ವಹಿಸುತ್ತಾರೆ ಮತ್ತು ಅದು ತೀವ್ರವಾಗಿ ಎಚ್ಚತ್ತುಕೊಳ್ಳಲಿ ಎಂದು ಬಯಸುತ್ತಾರೆ, ಆದರೆ ಅದಷ್ಟೇ ಸಾಕಾಗದು. ಆದರೆ ಅದು ಮನುಷ್ಯನ ಜೀವನದಲ್ಲಿ ನಿಜವಾಗಿ ಅತ್ಯಂತ ಮಹತ್ವದ ವಿಷಯವಾದಾಗ, ಉಳಿದೆಲ್ಲವೂ ಸ್ವಾದವನ್ನು, ಸ್ವಾರಸ್ಯವನ್ನು, ಮಹತ್ವವನ್ನು ಕಳೆದುಕೊಂಡಿದೆ ಎಂದೆನಿಸಿದಾಗ, ಮನುಷ್ಯ ಅಂತರಂಗದಲ್ಲಿ ಇದಕ್ಕಾಗಿ ಜನಿಸಿದ್ದೇನೆ, ಪೃಥ್ವಿಯ ಮೇಲಿದ್ದೇನೆ ಎಂಬ ಭಾವನೆ ತಂದುಕೊಂಡಾಗ ಮತ್ತು ಲೆಕ್ಕಕ್ಕೆ ಬರುವುದು ನಿಜವಾಗಿ ಅದೊಂದೇ ವಿಷಯ ಎಂದೆನಿಸಿದಾಗ ಅದು ಸಾಕಾಗುತ್ತದೆ. ಮನುಷ್ಯ ಭಿನ್ನ ಕೇಂದ್ರಗಳ ಮೇಲೆ ಏಕಾಗ್ರತೆ ವಹಿಸಬಹುದು, ಆದರೆ ಅವನು ಕೆಲವೊಮ್ಮೆ ದೀರ್ಘ ಕಾಲದವರೆಗೆ ಏಕಾಗ್ರತೆ ಕೈಕೊಂಡಾಗಲೂ ಯಾವುದೇ ಪರಿಣಾಮ ಕಂಡುಕೊಳ್ಳದೇ ಇರಬಹುದು. ಮತ್ತು ನಂತರ ಒಂದು ದಿನ ಏನೋ ಒಂದು



ನಿಮ್ಮನ್ನು ಅಲುಗಾಡಿಸುತ್ತದೆ. ನಿಮ್ಮ ಕಾಲಾಸರೆಯನ್ನು ನೀವು ಕಳೆದುಕೊಳ್ಳುತ್ತಿರುವಿರೇನೋ ಎಂಬ ಭಾವನೆ ನಿಮಗೆ ಬರುತ್ತದೆ. ನೀವು ಏನೋ ಒಂದಕ್ಕೆ ಅಂಟಿಕೊಂಡಿರಬೇಕಾಗುತ್ತದೆ, ಆಗ ನೀವು ನಿಮ್ಮೊಳಗೆ ಭಗವಂತನೊಡನೆ ಏಕತೆ ಪಡೆಯುವ ವಿಚಾರಕ್ಕೆ ದೈವೀ ಸಾನ್ನಿಧ್ಯದ ವಿಚಾರಕ್ಕೆ ಪ್ರಜ್ಞೆಯ ಪರಿವರ್ತನೆಯ ವಿಚಾರಕ್ಕೆ ಅಂಟಿಕೊಳ್ಳುತ್ತೀರಿ, ಮತ್ತು ನೀವು ಅಭೀಪ್ಸೆ ಪಡುತ್ತೀರಿ, ಬಯಸುತ್ತೀರಿ, ಇದರ ಸುತ್ತ ನಿಮ್ಮ ಭಾವನೆಗಳನ್ನು, ಚಲನೆಗಳನ್ನು, ಪ್ರಚೋದನೆಗಳನ್ನು ಸಂಘಟಿಸುತ್ತೀರಿ. ಅದು ಬರುತ್ತದೆ. ಕೆಲವು ಜನರು ಎಲ್ಲ ಬಗೆಯ ಪದ್ಧತಿಗಳನ್ನು ಶಿಫಾರಸ್ (recommend) ಮಾಡಿದ್ದಾರೆ. ಬಹುಶಃ ಈ ಪದ್ಧತಿಗಳು, ಅವರ ಸಂದರ್ಭದಲ್ಲಿ, ಯಶಸ್ವಿಯಾಗಿದ್ದವು. ಸತ್ಯ ಹೇಳುವುದಾದರೆ ಮನುಷ್ಯ ತನ್ನದೇ ಪದ್ಧತಿಯನ್ನು ಕಂಡುಕೊಳ್ಳಬೇಕು, ಕಾರ್ಯವನ್ನು ಕೈಕೊಂಡ ನಂತರವಷ್ಟೇ ಮನುಷ್ಯ ಅದನ್ನು ಹೇಗೆ ಕೈಕೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳುತ್ತಾನೆ, ಅದಕ್ಕೂ ಮೊದಲಲ್ಲ.

ಮನುಷ್ಯ ಮೊದಲೇ ತಿಳಿದುಕೊಂಡಿದ್ದರೆ ಒಂದು ಮಾನಸಿಕ ರಚನೆಯನ್ನು ಮಾಡುತ್ತಾನೆ ಮತ್ತು ಅವನ ಮಾನಸಿಕ ರಚನೆಯಲ್ಲಿ ಜೀವಿಸುತ್ತ ದೊಡ್ಡ ಅಪಾಯಕ್ಕೀಡಾಗುತ್ತಾನೆ, ಆ ರಚನೆ ಒಂದು ಭ್ರಮೆಯಾಗಿರುತ್ತದೆ, ಏಕೆಂದರೆ ಮನಸ್ಸು ಕೆಲವೊಂದು ಸ್ಥಿತಿಗಳನ್ನು ನಿರ್ಮಾಣ ಮಾಡಿದಾಗ ಮತ್ತು ನಂತರ ಅವುಗಳನ್ನು ಸಿದ್ಧಿಸಿಕೊಂಡಾಗ ಅಲ್ಲಿ ಅನುಭವವೇ ಆಗಿರದೆ ಇರುವ, ಅದರ ಪ್ರತೀಕವಾಗಿರುವ ಕೇವಲ ಮಾನಸಿಕ ರಚನೆಗಳಿರುವ ಹಲವಾರು ಸಾಧ್ಯತೆಗಳಿರುತ್ತವೆ. ಹಾಗಾಗಿ ಈ ಎಲ್ಲ ಆಧ್ಯಾತ್ಮಿಕ ಅನುಭವಗಳಿಗಾಗಿ ಅವುಗಳನ್ನು ಅರಿತುಕೊಳ್ಳುವ ಮೊದಲೇ ಅವುಗಳನ್ನು ಹೊಂದಿರುವುದು ಹೆಚ್ಚು ವಿವೇಕದ್ದಾಗಿದೆ ಎಂದು ನನಗನಿಸುತ್ತದೆ. ಮನುಷ್ಯನಿಗೆ ಅವು ತಿಳಿದಿದ್ದರೆ ಅವನು ಅನುಕರಣೆ ಮಾಡುತ್ತಾನೆ, ಅವನಿಗೆ ಆ ಅನುಭವಗಳು ಆಗಿರುವುದಿಲ್ಲ, ಅವು ಆಗಿವೆ ಎಂದು ಅವನು ಕಲ್ಪನೆ ಮಾಡಿಕೊಳ್ಳುತ್ತಾನೆ. ಅದು ಹಾಗಿರುವಾಗ ಮನುಷ್ಯ ಏನನ್ನೂ ತಿಳಿದುಕೊಂಡಿರದೆ ಇದ್ದರೆ – ವಿಷಯಗಳು ಹೇಗಿವೆ, ಮತ್ತು ಅವು ಸಂಭವಿಸಬೇಕಾದುದು ಹೇಗೆ, ಏನು ಸಂಭವಿಬೇಕು, ಮತ್ತು ಅದು ಹೇಗೆ ಸಂಭವಿಸುತ್ತದೆ – ಮನುಷ್ಯ ಇದೆಲ್ಲದರ ಬಗ್ಗೆ ತಿಳಿದುಕೊಳ್ಳದೇ ಇದ್ದರೆ, ಆಗ ಬಹಳ ನಿಶ್ಚಲವಾಗಿ ಉಳಿದುಕೊಂಡು ಮತ್ತು ತನ್ನ ಸತ್ತೆಯಲ್ಲಿ ಒಂದು ಬಗೆಯ ಆಂತರಿಕ ತೊಡಕು ಬಿಡಿಸಿ ಅವನು ಒಮ್ಮೆಗೆ ಆ ಅನುಭವ ಪಡೆಯುತ್ತಾನೆ, ಮತ್ತು ನಂತರ ಅವನು ತನ್ನಲ್ಲಿ ಏನೆಲ್ಲ ಇತ್ತೆಂಬುದನ್ನು ತಿಳಿದುಕೊಳ್ಳುತ್ತಾನೆ. ಅದು ಮುಗಿದು ಹೋಗಿರುತ್ತದೆ, ಮನುಷ್ಯ ಅದನ್ನು

ಕೈಕೊಂಡಾಗ ಅದನ್ನು ಹೇಗೆ ಕೈಕೊಳ್ಳಬೇಕು ಎಂಬುದನ್ನು ತಿಳಿದಿರುತ್ತಾನೆ – ಅದು ನಂತರ. ಅ ರೀತಿಯಲ್ಲಿ ಅದು ನಿಶ್ಚಿತವಾದದ್ದಾಗಿರುತ್ತದೆ.

ಸ್ಪಷ್ಟವಾಗಿ ಮನುಷ್ಯ ತನ್ನ ಕಲ್ಪನೆಯನ್ನು ಉಪಯೋಗಿಸಬಹುದು, ಕುಂಡಲಿನಿಯನ್ನು ಕಲ್ಪನೆ ಮಾಡಿಕೊಂಡು ಅದನ್ನು ಮೇಲಕ್ಕೆಳೆಯಲು ಪ್ರಯತ್ನಿಸಬಲ್ಲ ಮತ್ತು ಇಂತಹ ಪ್ರಯತ್ನಗಳ ಕತೆಗಳನ್ನು ತನಗೆ ತಾನೇ ಹೇಳಿಕೊಳ್ಳಬಲ್ಲ. ಪುಸ್ತಕಗಳಲ್ಲಿ ವರ್ಣಿಸಿದ ಹಾಗೆ ಎಲ್ಲ ಶಬ್ದಗಳನ್ನು ಅರಿತುಕೊಂಡು, ವಿವರಗಳನ್ನು ಕೂಡಿ ಹಾಕಿ ಅವುಗಳ ಪ್ರಕಾರ ತಮ್ಮ ಅನುಭವಗಳನ್ನು ನನಗೆ ವರ್ಣಿಸಿ ಹೇಳಿದ ಜನರ ಉದಾಹರಣೆಗಳಿವೆ, ಮತ್ತು ಆಗ ಅದೇ ರೀತಿಯಲ್ಲಿ ಅವರಿಗೆ ಪ್ರಾಸಂಗಿಕವಾಗಿ ಒಂದು ಚಿಕ್ಕ ಪ್ರಶ್ನೆ ಕೇಳಿದೆ: ಅವರಿಗೆ ಆ ಅನುಭವ ಆಗಿದ್ದರೆ, ಅವರು ಒಂದು ವಿಶಿಷ್ಟ ವಿಷಯವನ್ನು ಅರಿತಿರಬೇಕಾಗಿತ್ತು ಇಲ್ಲವೆ ಅದರ ಬಗ್ಗೆ ಭಾವನೆ ತಂದುಕೊಂಡಿರ–ಬೇಕಾಗಿತ್ತು, ಆದರೆ ಇದು ಅವರ ಪುಸ್ತಕಗಳಲ್ಲಿ ಇಲ್ಲದ್ದರಿಂದ ಅವರು ನನಗೆ ಉತ್ತರ ಕೊಡುವುದು ಸಾಧ್ಯವಾಗಲಿಲ್ಲ.

**(CWM, 7/208–09)**

*

**ಜಾಗ್ರತಗೊಳ್ಳುವುದರ ನಿಜವಾದ ಅನುಭವ ಮತ್ತು ಮಾನಸಿಕ ರಚನೆ**

ಈ ಇಂದ್ರಿಯ ಗ್ರಾಹ್ಯ ವಿಷಯ ಬಹಳ ಮೂರ್ತ ಸ್ವರೂಪದ್ದು, ನೈಜವಾದದ್ದು, ಭೌತಿಕ ಇಂದ್ರಿಯ ಗೋಚರ ವಿಷಯಕ್ಕಿರುವ ಎಲ್ಲ ನೈಜತೆ ಮತ್ತು ಗಾಢತೆ ಇವುಗಳೊಂದಿಗೆ ಅದನ್ನು ಭಾವನೆಗೆ ತಂದುಕೊಳ್ಳಬಹುದು. ಆದರೆ ಪ್ರತಿಯೊಬ್ಬ ವ್ಯಕ್ತಿ ಅವನಿಗೇ ವಿಶೇಷವಾದ ರೂಪದಲ್ಲಿ ಅದನ್ನು ವರ್ಣಿಸುತ್ತಾನೆ, ಆದರೆ ಅದು ಸಾಧ್ಯವಾಗುವುದು ಪುಸ್ತಕಗಳನ್ನು ಓದದೇ ಇದ್ದಾಗ, ಅವನ ಮಿದುಳು ಪುಸ್ತಕಗಳಲ್ಲಿ ಬರೆದದ್ದನ್ನು ತುಂಬಿಕೊಂಡಿರದೇ ಇದ್ದಾಗ, ಅವನು ಓದಿದ್ದು ಸ್ವಯಂಚಾಲಿತವಾಗಿ ಅವನ ಅನುಭವಕ್ಕೆ ಒಂದು ರೂಪ ಕೊಡುತ್ತದೆ, ಅದು ಸ್ವಾಭಾವಿಕತೆಗೆ ನಿಷ್ಕಪಟವಾದುದರ ಹಾಗೂ ನೈಜವಾದುದರ ಭಾವನೆ ಇರುತ್ತದೆ – ಅದು ಮಾನಸಿಕ ರಚನೆಯಾಗಿ ಬಿಡುತ್ತದೆ. ಕುಂಡಲಿನಿ ಒಂದು ಸರ್ಪದ ರೂಪದಲ್ಲಿ ಇರುತ್ತದೆಂದು ನೀವು ಹೆಚ್ಚು ಹೆಚ್ಚಾಗಿ ಓದಿದ್ದರೆ ಸರಿ, ಬಹಳ ಸ್ವಾಭಾವಿಕವಾಗಿ, ನೀವು ಏಕಾಗ್ರತೆಯಲ್ಲಿದ್ದು ಅದನ್ನು ಜಾಗ್ರತಗೊಳಿಸಲು ಪ್ರಯತ್ನಿಸಿದಾಗ ಸುರಳಿ ಸುತ್ತಿ ಹಾಕಿಕೊಂಡಿರುವ ಸರ್ಪವನ್ನು ನೋಡುತ್ತೀರಿ, ಏಕೆಂದರೆ ನೀವು ಅದರ ಬಗ್ಗೆ ಆ ರೀತಿ ಯೋಚಿಸುತ್ತೀರಿ. ನಿಮಗೆ ಸಹಸ್ರ ದಲ ಪದ್ಮದ ಬಗ್ಗೆ ಹೇಳಿದಾಗ, ನೀವು



ಸಹಸ್ರ ದಲ ಪದ್ಮವನ್ನು ನೋಡುತ್ತೀರಿ. ಆದರೆ ಅದು ಸ್ವತಃ ಅನುಭವದ ವಾಸ್ತವ ಸಂಗತಿಯ ಮೇಲೆ ಇನ್ನೊಂದೇನನ್ನೋ ಇರಿಸು (super imposition) ವುದಾಗಿದೆ. ಅಸಂಖ್ಯವಾದುದರ ಭಾವನೆ, ಏಕವಾಗಿದ್ದು ಅದೇ ವೇಳೆಗೆ ಅಸಂಖ್ಯಾತವಾಗಿರುವುದರ ಭಾವನೆ ತಂದುಕೊಡುವ ಅಂತಹದೇನೋ ತೆರೆದುಕೊಳ್ಳುತ್ತಿರುವ, ಜಾಗ್ರತ–ಗೊಳ್ಳುತ್ತಿರುವ, ಕಂಪಿಸಲು ಪ್ರಾರಂಭಿಸುತ್ತಿರುವ, ಶಕ್ತಿಗಳಿಗೆ ಪ್ರತಿಸ್ಪಂದಿಸುತ್ತಿರುವ, ನಿಮಗೆ ಪ್ರಕಾಶದ ಗಾಢತೆಯನ್ನು ಕೊಡುತ್ತಿರುವ, ತಿಳಿವಳಿಕೆ ನೀಡುತ್ತಿರುವ, ಉಚ್ಚತರ ಪ್ರಾಂತಗಳನ್ನು ತೆರೆದು ತೋರಿಸುತ್ತಿರುವ ಇತ್ಯಾದಿಗಳ ಭಾವನೆ ಬರುತ್ತದೆ, ಇದು ಆ ಅನುಭವದ ಸತ್ವ, ಆದಾಗ್ಯೂ ಅದನ್ನು ನೀವು ಪುಸ್ತಕದಲ್ಲಿ ಕೊಡಲಾದ ಪ್ರತೀಕದೊಂದಿಗೆ ವರ್ಣಿಸಲು ಪ್ರಾರಂಭಿಸಿದಾಗ, ಅದನ್ನು ನೀವು ಒಮ್ಮೆಗೆ ಮೇಲ್ಮೈಯಲ್ಲಿ ಇರುವಂತಹದನ್ನಾಗಿ – ಪಳೆಯುಳಿಕೆಯದನ್ನಾಗಿರಿಸುವಂತೆ – ಕೃತ್ರಿಮವಾದದ್ದನ್ನಾಗಿ ಇಲ್ಲವೆ ಕಪಟರೂಪದ್ದನ್ನಾಗಿ ಮಾಡಿ ನೀವು ಕೈಕೊಳ್ಳುತ್ತಿರುವ ಹಾಗಿರುತ್ತದೆ.

**ಪ್ರಶ್ನೆ :** *ಹಾಗಾದರೆ, ಶ್ರೀಮಾತೆಯವರೆ ಓದದೆ ಇರುವುದು ಹೆಚ್ಚು ಒಳ್ಳೆಯದು ಎಂದು ಇದರ ಅರ್ಥವೆ?*

**ಶ್ರೀಮಾತೆ :** ಮನುಷ್ಯ ತನ್ನ ಅಭೀಪ್ಸೆಯ ಉತ್ಸಾಹವನ್ನು ನಿಜವಾಗಿ ತನ್ನಲ್ಲಿ ಹೊಂದಿದ್ದಾನೆ ಎಂಬ ಷರತ್ತಿಗನುಗುಣವಾಗಿ ಹಾಗೆ ಮಾಡಬಹುದು. ನೀವು ಈ ಯೋಗಕ್ಕಾಗಿ ಜನ್ಮ ತಾಳಿದ್ದರೆ, ನಿಮ್ಮ ಎಲ್ಲ ಅಸ್ತಿತ್ವದ ಮೇಲೆ ಪ್ರಬಲ ಪ್ರಭಾವ ಬೀರುವ ವಿಷಯ ಇದಾಗಿದ್ದರೆ, ಬೇರೆ ಏನನ್ನಾದರೂ ಕಂಡುಕೊಳ್ಳುವುದಕ್ಕಿಂತ ಮೊದಲು ನಿಮ್ಮಲ್ಲಿಯೇ ಇರುವ ಏನೋ ಒಂದನ್ನು ಕಂಡುಕೊಳ್ಳಬೇಕೆಂಬ ಭಾವನೆ ನಿಮಗೆ ಬಂದರೆ, ಸರಿ, ಆಗ ಒಂದು ಶಬ್ದವೂ ಸಾಕಾಗುತ್ತದೆ, ಒಂದು ಮಾತುಕತೆ, ಸರಳ ರೀತಿಯಲ್ಲಿ ನಿಮಗೆ ನಿರ್ದೇಶನ ನೀಡುತ್ತದೆ, ಅದಷ್ಟು ಸಾಕಾಗುತ್ತದೆ. ಆದರೆ ಅರಸುತ್ತಿರುವವರು, ತಡಕಾಡುತ್ತಿರುವವರು, ಸಂಪೂರ್ಣ ನಿಶ್ಚಿತತೆ ಹೊಂದದೆ ಇರುವವರು, ಅತ್ತಿಂದಿತ್ತ ಎಳೆತಕ್ಕೆ ಒಳಗಾದವರು, ಜೀವನದಲ್ಲಿ ಹಲವಾರು ಅಭಿರುಚಿಗಳನ್ನು ಹೊಂದಿರುವವರು, ಸಿದ್ಧಿಗಾಗಿ ತಮ್ಮ ಸಂಕಲ್ಪದಲ್ಲಿ ಸ್ಥಿರಗೊಂಡಿರದೆ ಇದ್ದವರು ಇಂತಹರೆಲ್ಲರೂ ಪುಸ್ತಕಗಳನ್ನು ಓದುವುದು ಒಳ್ಳೆಯದು, ಏಕೆಂದರೆ ಅದು ಅವರನ್ನು ಆ ವಿಷಯದ ಸಂಪರ್ಕದಲ್ಲಿರಿಸುತ್ತದೆ ಮತ್ತು ಆ ವಿಷಯ ಕುರಿತು ಅವರಲ್ಲಿ ಅಭಿರುಚಿ ಉಂಟಾಗುವಂತೆ ಮಾಡುತ್ತದೆ.

**(CWM, 7/211)** **– ಶ್ರೀಮಾತೆ**

*

**ಯೋಗದ ಸಂಬಂಧದಲ್ಲಿ ಚಕ್ರಗಳು ಇಲ್ಲವೆ ಕೇಂದ್ರಗಳು**

ನಮ್ಮ ಯೋಗದ ವಿಧಾನದಲ್ಲಿ, ಪ್ರತಿಯೊಂದು ಕೇಂದ್ರ ಮನೋ ವೈಜ್ಞಾನಿಕ ಉಪಯುಕ್ತತೆ ಮತ್ತು ಸರ್ವಸಾಧಾರಣ ಕಾರ್ಯವಿಧಾನ ಹೊಂದಿರುತ್ತದೆ, ಈ ಕೇಂದ್ರಗಳು ತಮ್ಮ ಎಲ್ಲ ವಿಶೇಷ ಸಾಮರ್ಥ್ಯಗಳನ್ನು ಹಾಗೂ ಕಾರ್ಯ–ವಿಧಾನಗಳನ್ನು ಸ್ಥಾಪಿಸುತ್ತವೆ. ಭೌತಿಕದಿಂದ ಅವಚೇತನದ ವರೆಗೆ ಮೂಲಾಧಾರದ ಆಳಿಕೆ ಇರುತ್ತದೆ, ನಿಮ್ನ ಪ್ರಾಣಿಕದ ಮೇಲೆ ಉದರದಲ್ಲಿರುವ ಸ್ವಾಧಿಷ್ಠಾನ ಆಳಿಕೆ ನಡೆಸುತ್ತದೆ. ನಾಭಿಪದ್ಮ ಇಲ್ಲವೆ ಮಣಿಪುರ ಭವ್ಯ ಪ್ರಾಣಿಕದ ಮೇಲೆ ಆಳಿಕೆ ನಡೆಸುತ್ತದೆ, ಹೃದಯ ಕೇಂದ್ರದಲ್ಲಿರುವ ಹೃತ್‌ಪದ್ಮ ಇಲ್ಲವೆ ಅನಾಹತ ಭಾವನಾತ್ಮಕ ಸತ್ತೆಯ ಮೇಲೆ ಆಳಿಕೆ ನಡೆಸುತ್ತದೆ, ಗಂಟಲಿನ ಕೇಂದ್ರದಲ್ಲಿರುವ ವಿಶುದ್ಧ ಪ್ರಕಟ ಪಡಿಸುವ ಹಾಗೂ ಬಾಹ್ಯೀಕರಿಸುವ ಮನಸ್ಸಿನ ಮೇಲೆ ಆಳಿಕೆ ನಡೆಸುತ್ತದೆ, ಹುಬ್ಬುಗಳ ಮಧ್ಯದಲ್ಲಿರುವ ಆಜ್ಞಾಚಕ್ರ ಕ್ರಿಯಾಶೀಲ ಮನಸ್ಸು, ಸಂಕಲ್ಪ, ದರ್ಶನ, ಮಾನಸಿಕ ರೂಪಕೊಡುವಿಕೆ, ಇವೆಲ್ಲವುಗಳ ಮೇಲೆ ಆಳಿಕೆ ನಡೆಸುತ್ತದೆ, ಅಪ್ಪಣೆ ನೀಡುತ್ತದೆ. ಮೇಲ್ಗಡೆಗಿರುವ ಸಾವಿರ ಪಕಳೆಗಳುಳ್ಳ ಕಮಲ – ಸಹಸ್ರ ದಲ – ಯೋಚಿಸುವ ಉಚ್ಚತರ ಮನಸ್ಸಿಗೆ, ಅದಕ್ಕಿಂತ ಇನ್ನೂ ಹೆಚ್ಚು ಮೇಲ್ಗಡೆಗಿರುವ ಜ್ಞಾನೋದಯ ಪಡೆದ ಮನಸ್ಸು ಮತ್ತು ಅತ್ಯುಚ್ಚಮಟ್ಟದಲ್ಲಿರುವ ಅಂತರ್ಬೋಧೆ ಇವೆಲ್ಲವುಗಳ ತೆರೆದಿರಿಸಿಕೊಳ್ಳುವಿಕೆಗೆ ಸ್ಥಾನ ಒದಗಿಸುತ್ತದೆ, ಅವುಗಳ ಮೂಲಕ ಇಲ್ಲವೆ ತುಂಬಿ ಹರಿಯುವ ನೇರತ್ವ(directness)ದ ಮೂಲಕ ಉಳಿದೆಲ್ಲದರೊಂದಿಗೆ ನಿವೇದನೆ ಮಾಡುವುದನ್ನು ಇಲ್ಲವೆ ಕೂಡಲೆ ಸಂಪರ್ಕವನ್ನು ಸಾಧಿಸಬಹುದು.

*

ಯೋಗದ ಸಂಬಂಧದಲ್ಲಿ ಮನುಷ್ಯ ಚಕ್ರಗಳನ್ನು ಕುರಿತು ಮಾತನಾಡಬಹುದು. ಸರ್ವಸಾಮಾನ್ಯ ಜನರಲ್ಲಿ ಚಕ್ರಗಳು ತೆರೆದುಕೊಂಡಿರುವುದಿಲ್ಲ, ಅವರು ಸಾಧನೆ ಕೈಕೊಂಡಾಗ ಮಾತ್ರ ಅವು ತೆರೆದುಕೊಳ್ಳುತ್ತವೆ. ಏಕೆಂದರೆ ಚಕ್ರಗಳು ಆಂತರಿಕ ಪ್ರಜ್ಞೆಯ ಕೇಂದ್ರಗಳಾಗಿರುತ್ತವೆ ಮತ್ತು ಅಂಗಾಂಗಿಯಾಗಿ (organically) ಅವು ಸೂಕ್ಷ್ಮ ದೇಹಕ್ಕೆ ಸೇರಿರುತ್ತವೆ.

ಸಾಮಾನ್ಯ ಜನರಲ್ಲಿ ಸೂಕ್ಷ್ಮ ದೇಹ ಕ್ರಿಯಾಶೀಲವಾಗಿರುವುದು ಅತ್ಯಲ್ಪ, ಏಕೆಂದರೆ ಅವರಲ್ಲಿ ಬಾಹ್ಯ ಪ್ರಜ್ಞೆ ಕ್ರಿಯಾಶೀಲವಾಗಿರುತ್ತದೆ.

*



ಪ್ರಜ್ಞೆಯ ಕೇಂದ್ರಗಳು (ಕೇಂದ್ರಗಳು ಎಂಬರ್ಥದಲ್ಲಿ) ಚಕ್ರಗಳಾಗಿರುತ್ತವೆ. ಅವು ತೆರೆದುಕೊಳ್ಳುವುದರಿಂದಾಗಿ ಯೌಗಿಕ ಇಲ್ಲವೆ ಆಂತರಿಕ ಪ್ರಜ್ಞೆ ಅಭಿವೃದ್ಧಿ ಹೊಂದುತ್ತದೆ, – ಹಾಗಿಲ್ಲದಿದ್ದರೆ ನೀವು ಸಾಮಾನ್ಯ ಬಾಹ್ಯ ಪ್ರಜ್ಞೆಯ ಬಂಧನ–ಕ್ಕೊಳಗಾಗುತ್ತೀರಿ.

*

ಸಾಧನೆ ಕೈಕೊಳ್ಳುತ್ತಿರುವಾಗ ಮನುಷ್ಯ ಚೈತ್ಯ ಕೇಂದ್ರದ ಮೂಲಕ ಇಲ್ಲವೆ ಇನ್ನಾವುದೋ ಕೇಂದ್ರದ ಮೂಲಕ ಸಾಗಿ ಹೋಗುವುದಿಲ್ಲ. ಸಾಧನೆಯ ಒತ್ತಡದಿಂದ ಕೇಂದ್ರಗಳು ತೆರೆದುಕೊಳ್ಳುತ್ತವೆ. ಚಕ್ರ(ಕೇಂದ್ರ)ವೊಂದರಲ್ಲಿ ದೈವೀ ಶಕ್ತಿ ಅವರೋಹಣ ಹಾಗೂ ಆರೋಹಣ ಮಾಡುತ್ತದೆಂದು ನೀವು ಹೇಳಬಹುದು.

*

ಕೇಂದ್ರ(ಚಕ್ರ)ಗಳಿಗೆ ಬೆನ್ನೆಲುಬು ಆಧಾರ ನೀಡುತ್ತದೆ. ತಾಂತ್ರಿಕ ಸಾಧನೆಯಲ್ಲಿ ಬೆನ್ನೆಲುಬಿನ ಮೂಲಕ ಕುಂಡಲಿನಿ ಮೇಲಕ್ಕೇರಿ ಹೋಗುತ್ತದೆ.

*

ಅದು (ಮೇಲಕ್ಕೇರಿ ಹೋಗುವ, ಲಯಬದ್ಧವಾಗಿ ಹಿಗ್ಗುವ ಹಾಗೂ ಕುಗ್ಗುವ ಚಲನೆಯುಳ್ಳ ನಾಭಿ ಪ್ರದೇಶದಲ್ಲಿಯ ಶಕ್ತಿ) ಕುಂಡಲಿನಿ ಎಂಬುದರ ಅರ್ಥ. ಅದು ಬ್ರಹ್ಮರಂಧ್ರದತ್ತ ಏರಿ ಹೋಗುತ್ತದೆ, – ಇಡಿಯಾಗಿ ಹೋಗುವುದಿಲ್ಲ, ಅದರ ಯಾವುದೋ ಒಂದು ಭಾಗ ಸುತ್ತಿಕೊಂಡಿರುವ ಇಲ್ಲವೆ ವೃತ್ತಾಕಾರದಲ್ಲಿ ಚಲಿಸುತ್ತಿರುವ ಸ್ಥಿತಿಯಿಂದ ಸ್ಪಂದನಕ್ಕೊಳಗಾಗಿ ಮೂಲಾಧಾರದಿಂದ ಬಿಡುಗಡೆ ಪಡೆಯುತ್ತದೆ. ಅದನ್ನು ಯಾವಾಗಲೂ ಹಾಗೆ ಭಾವನೆಗೆ ತಂದುಕೊಳ್ಳಲಾಗುವುದಿಲ್ಲ. ಕೆಲವೊಮ್ಮ ಮನುಷ್ಯ ದೈವೀ ಶಕ್ತಿಯ ಪ್ರವಾಹಗಳು ಮೇಲಕ್ಕೇರಿ ಹೋಗುತ್ತಿರುವ ಇಲ್ಲವೆ ಕೇವಲ ಪ್ರಜ್ಞೆ ಆರೋಹಣ ಮಾಡುತ್ತಿರುವ ಭಾವನೆಯನ್ನು ತಂದುಕೊಳ್ಳುತ್ತಾನೆ. ಆದರೆ ಎಲ್ಲ ಸಂದರ್ಭಗಳಲ್ಲಿ ಚಕ್ರಗಳಲ್ಲಿ ಮುಚ್ಚಿಹಾಕಿಕೊಂಡಿರುವ ಯೌಗಿಕ ಶಕ್ತಿಯನ್ನು ಬಿಡುಗಡೆ ಮಾಡುವುದಾಗಿರುತ್ತದೆ. ಅದು ಮೇಲ್ಗಡೆಗಿರುವ ದೈವೀ ಪ್ರಜ್ಞೆಯತ್ತ ಆರೋಹಣ ಮಾಡುತ್ತದೆ. ಇದು ಮತ್ತು ಇದಕ್ಕೆ ಅನುಗುಣವಾದ ಮೇಲ್ಗಡೆಯಿಂದಾಗುವ ಅವರೋಹಣ ಇವು ಯೌಗಿಕ ಅನುಭವ ಹಾಗೂ ಸಿದ್ಧಿ ಸಾಧ್ಯವಾಗುವಂತೆ ಮಾಡುತ್ತವೆ.

*

ಕುಂಡಲಿನಿ ಯೌಗಿಕ ಶಕ್ತಿಯಾಗಿದ್ದು ಮೂಲಾಧಾರದಲ್ಲಿ ನಿದ್ರಿಸುತ್ತಿರುತ್ತದೆ ಮತ್ತು ಇತರ ಕೇಂದ್ರಗಳಲ್ಲಿ ಸಾಮಾನ್ಯ ಪ್ರಜ್ಞೆಯಿಂದ ಮುಚ್ಚಿಹಾಕಿಕೊಂಡಿರುತ್ತದೆ. ಅದನ್ನು ಮುಕ್ತಗೊಳಿಸಿದಾಗ ಅದು ದೈವೀ ಪ್ರಜ್ಞಾಕೇಂದ್ರದ ಜೊತೆಗೂಡಲು ಮಾರ್ಗದಲ್ಲಿರುವ ಕೇಂದ್ರಗಳ ಮೂಲಕ ಮೇಲಕ್ಕೇರಿ ಹೋಗುತ್ತದೆ.

**(CWSA, 28/230)**

ಶಿರದ ಮೇಲೆ ಕುಂಡಲಿನಿ ಶಕ್ತಿಯಿಲ್ಲ. ಶಿರದ ಮೇಲೆ ವಿಶ್ವಂಭರ ಇಲ್ಲವೆ ದೈವೀ ಪ್ರಜ್ಞೆ ಹಾಗೂ ದೈವೀ ಶಕ್ತಿಗಳಿವೆ. ಕುಂಡಲಿನಿ ವಿಕಾಸಗೊಂಡಿರದ ಸಾಮರ್ಥ್ಯವಾಗಿದ್ದು ಚಕ್ರ(ಕೇಂದ್ರ)ಗಳಲ್ಲಿ ನಿದ್ರಿಸುತ್ತಿರುತ್ತದೆ.

**(CWSA, 29/460–61)**

ತಂತ್ರ ಶಾಸ್ತ್ರದಲ್ಲಿ ವಿಶಿಷ್ಟ ವಿಧಾನವೊಂದರ ಮೂಲಕ ಕೇಂದ್ರಗಳನ್ನು ತೆರೆದಿರಿಸಲಾಗುತ್ತದೆ ಮತ್ತು ಕುಂಡಲಿನಿ ಎಚ್ಚತ್ತುಕೊಂಡು ಮೇಲಕ್ಕೇರಿ ಹೋಗುತ್ತಿರುವುದರ ಕ್ರಿಯೆ ಬೆನ್ನೆಲುಬಿನ ಮೂಲಕ ಭಾವನೆಗೆ ಬರುತ್ತದೆ. ಇಲ್ಲಿ (ಸಮಗ್ರ ಯೋಗದಲ್ಲಿ) ಮೇಲ್ಗಡೆಯಿಂದ ಬರುವ ದೈವೀ ಶಕ್ತಿಯ ಒತ್ತಡ ಕುಂಡಲಿನಿಯನ್ನು ಜಾಗ್ರತಗೊಳಿಸುತ್ತದೆ ಮತ್ತು ಕೇಂದ್ರಗಳನ್ನು ತೆರೆದಿರಿಸುತ್ತದೆ. ಅಲ್ಲಿ ಪ್ರಜ್ಞೆಯ ಆರೋಹಣವಿದ್ದು ಅದು ಉಚ್ಚತರ ಪ್ರಜ್ಞೆಯ ಜೊತೆಗೂಡಲು ಮೇಲಕ್ಕೇರಿ ಹೋಗುತ್ತದೆ. ಇದು ಪುನರಾವರ್ತನೆಗೊಳ್ಳುತ್ತ ಹೋಗುತ್ತದೆ (ಕೆಲವೊಮ್ಮೆ ಅವರೋಹಣದ ಭಾವನೆಯೂ ಬರುತ್ತದೆ.) ಆ ಪುನರಾವರ್ತನೆ ಎಲ್ಲ ಕೇಂದ್ರಗಳು ತೆರೆದುಕೊಳ್ಳುವವರೆಗೆ ಮತ್ತು ಪ್ರಜ್ಞೆ ಮೇಲಕ್ಕೇರಿ ಹೋಗುವವರೆಗೆ ನಡೆಯುತ್ತದೆ. ನಂತರ ಹಂತದಲ್ಲಿ ಅದು (ಪ್ರಜ್ಞೆ) ವಿಶ್ವವ್ಯಾಪಿ ಪ್ರಜ್ಞೆಯಲ್ಲಿ ಮತ್ತು ವಿಶ್ವಂಭರ ದಿವ್ಯಾತ್ಮದಲ್ಲಿ ವಿಸ್ತರಿಸುತ್ತ ಹೋಗುತ್ತದೆ. ಇದು ಸಾಮಾನ್ಯವಾಗಿ ನಡೆದುಬರುವ ವಿಧಾನ, ಆದರೆ ಕೆಲವೊಮ್ಮೆ ಆ ವಿಧಾನ ತೀವ್ರಗತಿಯದಾಗುತ್ತದೆ ಮತ್ತು ಅಲ್ಲಿ ಮೇಲ್ಗಡೆಗೆ ಒಮ್ಮೆಗೆ ಮತ್ತು ನಿಶ್ಚಿತವಾಗಿ ತೆರೆದುಕೊಳ್ಳುವುದಿರುತ್ತದೆ.

*

**ಸಹಸ್ರ ದಲ ಇಲ್ಲವೆ ಸಹಸ್ರಾರ ಇಲ್ಲವೆ ಕಿರೀಟ ಕೇಂದ್ರ**

ಸಹಸ್ರ ಪಕಳೆಗಳಿರುವ ಕಮಲ ಶಿರದ ಮೇಲಿದೆ. ಅದು ಏಳನೆಯ ಮತ್ತು ಅತ್ಯುಚ್ಚ ಕೇಂದ್ರ.



ದೇಹದಲ್ಲಿರುವ ಕೇಂದ್ರಗಳನ್ನು ಮಾತ್ರ ಗಮನಕ್ಕೆ ತೆಗೆದುಕೊಳ್ಳುವವರು ಕೇವಲ ಆರು ಕೇಂದ್ರಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ, ಸಹಸ್ರಾರವನ್ನು ಹೊರಗಿಡುತ್ತಾರೆ.

*

ಸಹಸ್ರ ದಲ ಪದ್ಮದ ಮೂಲಕ ಮಾತ್ರ ಉಚ್ಚತರ ಅಂತರ್ಬೋಧೆ, ಪ್ರಕಾಶಿತ ಮನಸ್ಸು ಮತ್ತು ಅತಿ ಮನಸ್ಸು (overmind) ಇವೆಲ್ಲ ತಮ್ಮ ಕಿರಣಗಳು ಹಾಯ್ದು ಹೋಗುವಂತೆ ಮಾಡುತ್ತವೆಂಬುದು ಸ್ಪಷ್ಟವಿದೆ.

*

ಸಾಮಾನ್ಯ ಮನಸ್ಸು ಹಾಗೂ ಅತಿ ಮನಸ್ಸು ಇವುಗಳ ನಡುವಿರುವ ಎಲ್ಲದರ ಮೇಲೆ ಸಹಸ್ರ ದಲ ಅಧಿಕಾರ ನಡೆಸುತ್ತದೆ – ಹಾಗಾಗಿ ಅದರ ತೆರೆದಿರಿಸಿಕೊಳ್ಳುವಿಕೆಗೆ ಅವಶ್ಯವಾಗಿ ದೀರ್ಘಕಾಲ ಬೇಕಾಗುತ್ತದೆ.

ತನ್ನಷ್ಟಕ್ಕೆ ತಾನೇ ತೆರೆದುಕೊಳ್ಳುವಿಕೆ ಸಂಪರ್ಕವೊಂದನ್ನು ಸೃಷ್ಟಿಸುತ್ತದೆ – ಆ ಕೇಂದ್ರದಲ್ಲಿ ನೆಲೆಸುವುದಕ್ಕಾಗಿ ಮನುಷ್ಯ ಮನಸ್ಸನ್ನು ದಾಟಿ ಹೋಗಬೇಕಾಗುತ್ತದೆ, ಮತ್ತು ಮುಖ್ಯವಾಗಿ ಆಧ್ಯಾತ್ಮಿಕ ಆತ್ಮದಲ್ಲಿ ಜೀವಿಸಲು ಶಕ್ತನಾಗಬೇಕಾಗುತ್ತದೆ.

*

ಅತಿಮಾನಸವು ದೇಹದಲ್ಲಿ ಸಂಘಟಿತವಾಗುವುದಿಲ್ಲ, ಹಾಗಾಗಿ ಅದಕ್ಕೆ ಅಲ್ಲಿ ಪ್ರತ್ಯೇಕ ಚಕ್ರ(ಕೇಂದ್ರ)ವಿರುವುದಿಲ್ಲ, ಆದರೆ ಮನಸ್ಸಿನ ಮೇಲ್ಗಡೆಯಿಂದ ಬರುವುದೆಲ್ಲ ತನ್ನ ಸಂಕ್ರಮಣಕ್ಕಾಗಿ ಸಹಸ್ರಾರವನ್ನು ಉಪಯೋಗಿಸುತ್ತದೆ ಮತ್ತು ಹಾಗಾಗಿ ಅಲ್ಲಿ ಏನೋ ಒಂದನ್ನು ತೆರೆದಿರಿಸುತ್ತದೆ.

*

ಆಜ್ಞಾಚಕ್ರ ತೆರೆದುಕೊಂಡರೆ ಕಿರೀಟ ಕೇಂದ್ರ (ಸಹಸ್ರ ದಲ) ಸಾಕಷ್ಟು ತೆರೆದುಕೊಂಡಿರಲೇಬೇಕು, ಕನಿಷ್ಠ ಪಕ್ಷ ಅದರ ಮೇಲಿರುವ ಉಚ್ಚತರ ಶಕ್ತಿ ಸಾಗಿ ಹೋಗಲು ಅನುವು ಮಾಡಿಕೊಡುವುದಕ್ಕಾಗಿ ಅದು ತೆರೆದುಕೊಂಡಿರುತ್ತದೆ ಎಂಬುದು ಬಹುಮಟ್ಟಿಗೆ ನಿಶ್ಚಿತವಾದದ್ದು. ಚೈತ್ಯಸತ್ತೆಯದು ಬೇರೆ ವಿಷಯ – ಅದು ಕೇಂದ್ರಗಳ ಹಿಂದೆ ನಿಂತಿರುತ್ತದೆ ಮತ್ತು ಅದು ತೆರೆದುಕೊಳ್ಳುವಿಕೆಯ ಕಾಲ ಭಿನ್ನ ಜನರೊಂದಿಗೆ ಭಿನ್ನವಾಗಿರುತ್ತದೆ – ವಾಸ್ತವದಲ್ಲಿ ಕೇಂದ್ರವೊಂದರ ತೆರೆದಿರಿಸಿ–

ಕೊಳ್ಳುವಿಕೆ ಚೈತ್ಯಸತ್ತೆ ಮುಂಭಾಗಕ್ಕೆ ಬರುವುದಕ್ಕಿಂತ ಹೆಚ್ಚಿನ ವಿಷಯವಾಗಿರುವುದಿಲ್ಲ. ಈ ಯೋಗದಲ್ಲಿರುವ ಸಾಮಾನ್ಯ ನಿಯಮ ಮೇಲಿನಿಂದ ಕೆಳಗೆ ಬರುವುದಾಗಿದೆ. ತಯಾರಿಯ ಹಂತದಲ್ಲಿ ವ್ಯತ್ಯಾಸಗಳಿರಬಹುದು. ಉದಾಹರಣೆಗೆ ಹೃದಯ ಕೇಂದ್ರದ ತೆರೆದಿರಿಸಿಕೊಳ್ಳುವಿಕೆ ಮೊದಲು ಆಗಬಹುದು. ಉಚ್ಚತರ ಪ್ರಾಣಿಕ ಕೇಂದ್ರ ಕೂಡ ಮೊದಲು ಕ್ರಿಯಾಶೀಲವಾಗಬಹುದು, ಆದರೆ ಅದರರ್ಥ ಹೆಚ್ಚಿನ ಒದ್ದಾಟ ಮತ್ತು ತೊಂದರೆ ಇರುವುದಾಗಿದೆ.

*

ಚೈತ್ಯಸತ್ತೆ ಹೃದಯ ಕೇಂದ್ರದ ಹಿಂದಿರುತ್ತದೆ – ಕಣ್ಣುಗಳ ಮಧ್ಯದಲ್ಲಿರುವ ಕೇಂದ್ರ (ಆಜ್ಞಾಚಕ್ರ) ಆಂತರಿಕ (ರಹಸ್ಯ) ಯೋಚನೆ, ಸಂಕಲ್ಪ ಹಾಗೂ ದರ್ಶನ ಇವುಗಳ ಕೇಂದ್ರವಾಗಿರುತ್ತದೆ. ಸಾಮಾನ್ಯ ಜನರು ಈ ಆಂತರಿಕ ಇಲ್ಲವೆ ರಹಸ್ಯ ದರ್ಶನವನ್ನು ಚೈತ್ಯಸತ್ತೆಯ ದರ್ಶನ ಎಂದು ಕರೆಯುತ್ತಾರೆ.

*

ಮೂರನೆಯ ಕಣ್ಣೊಂದು ಅಲ್ಲಿ (ಹಣೆಯ ಮಧ್ಯ ಕೇಂದ್ರದಲ್ಲಿ) ತೆರೆದುಕೊಳ್ಳುತ್ತದೆ. ಅದು ರಹಸ್ಯ ದರ್ಶನವನ್ನು ಮತ್ತು ಈ ದರ್ಶನದೊಂದಿಗಿರುವ ರಹಸ್ಯ ಸಾಮರ್ಥ್ಯವನ್ನು ಪ್ರತಿನಿಧಿಸುತ್ತದೆ – ಅದು ಆಜ್ಞಾಚಕ್ರದೊಂದಿಗೆ ಸಂಪರ್ಕ ಹೊಂದಿರುತ್ತದೆ.

*

**ಮನುಷ್ಯ ಜೀವನದಲ್ಲಿ ಕಂಡುಬರುವ ಏಳು ಚಕ್ರಗಳು**

1. ಶಿರದ ಮೇಲಿರುವ ಸಹಸ್ರ ದಲ ಪದ್ಮ, ಅದರ ಆಧಾರ ಮಿದುಳಿನಲ್ಲಿರುತ್ತದೆ. ಅತಿಮಾನಸಕ್ಕಾಗಿ ದೈವೀ ಪ್ರಾಣ–ಮನದಲ್ಲಿ ಆಧಾರ, ಜ್ಞಾನೋದಯ ಪಡೆದ ಮನಸ್ಸಿನ ಪ್ರಾರಂಭದ ಕೇಂದ್ರ.
2. ಹಣೆಯ ಮಧ್ಯದಲ್ಲಿ ಹುಬ್ಬುಗಳ ನಡುವಿರುವ ಕೇಂದ್ರ. ಸಂಕಲ್ಪ, ದರ್ಶನ, ಆಂತರಿಕವಾಗಿ ಮಾನಸಿಕ ರೂಪಕೊಡುವಿಕೆ, ಕ್ರಿಯಾಶೀಲ, ಪ್ರಚೋದಕ ಶಕ್ತಿಯಿರುವ ಮನಸ್ಸು.
3. ಗಂಟಲಿನಲ್ಲಿರುವ ಕೇಂದ್ರ. ಮಾತು, ಬಾಹ್ಯ ಮನಸ್ಸು, ಎಲ್ಲ ಬಾಹ್ಯ ಪ್ರಕಟಪಡಿಸುವಿಕೆ ಮತ್ತು ರೂಪ ನೀಡುವಿಕೆ.



4. ಹೃದಯ–ಕಮಲ, ಬಾಹ್ಯದಲ್ಲಿ ಭಾವನಾತ್ಮಕ ಮನಸ್ಸು, ಪ್ರಾಣಿಕ, ಮಾನಸಿಕ; ಆಂತರಿಕ ಹೃದಯದಲ್ಲಿ ಚೈತ್ಯ ಕೇಂದ್ರ.
5. ನಾಭಿ ಕೇಂದ್ರ. ಸಹಜ ಭವ್ಯ ಪ್ರಾಣಿಕ, ಪ್ರಾಣ ಶಕ್ತಿಯ ಕೇಂದ್ರ.
6. ನಾಭಿ ಮತ್ತು ಮೂಲಾಧಾರ ಇವುಗಳ ನಡುವಿರುವ ಕೇಂದ್ರ. ನಿಮ್ನ ಪ್ರಾಣಿಕ, ಅದು ಮೇಲಿರುವ ಕೇಂದ್ರಗಳನ್ನು ಭೌತಿಕದೊಂದಿಗೆ ಜೋಡಿಸುತ್ತದೆ.
7. ಕೊನೆಯ ಕೇಂದ್ರ ಇಲ್ಲವೆ ಮೂಲಾಧಾರ. ಪ್ರಾಣಿಕದ ಭೌತಿಕ ಆಧಾರ, ಭೌತಿಕದ ಆರಂಭ.

ಕೆಳಗಿರುವುದೆಲ್ಲ ಅವಚೇತನದ ಭೌತಿಕ.

**(CWSA, 11/1342)**

*

**ಚಕ್ರಗಳ ಇಲ್ಲವೆ ಕೇಂದ್ರಗಳ ಕಾರ್ಯವಿಧಾನಗಳು**

ಕೇಂದ್ರಗಳ ಇಲ್ಲವೆ ಚಕ್ರಗಳ ಸಂಖ್ಯೆ ಏಳು.

1. ಶಿರದ ಮೇಲೆ ಸಹಸ್ರ ದಲಗಳಿರುವ ಕಮಲ.
2. ಹಣೆಯ ಮಧ್ಯ ಭಾಗದಲ್ಲಿ – ಆಜ್ಞಾಚಕ್ರ (ಸಂಕಲ್ಪ, ದರ್ಶನ, ಪ್ರಚೋದಕ ಶಕ್ತಿಯ ಯೋಚನೆ).
3. ಗಂಟಲಿನಲ್ಲಿರುವ ಕೇಂದ್ರ – ಮನಸ್ಸನ್ನು ಬಾಹ್ಯೀಕರಿಸುವುದು.
4. ಹೃದಯ ಕಮಲ – ಭಾವನಾತ್ಮಕ ಕೇಂದ್ರ. ಚೈತ್ಯ ಅದರ ಹಿಂದಿರುತ್ತದೆ.
5. ನಾಭಿ – ಉಚ್ಚತರ ಪ್ರಾಣಿಕ (ಸಹಜವಾದದ್ದು).
6. ನಾಭಿಯ ಕೆಳಗೆ – ನಿಮ್ನ ಪ್ರಾಣಿಕ.
7. ಮೂಲಾಧಾರ – ಭೌತಿಕ.

ಈ ಎಲ್ಲ ಕೇಂದ್ರಗಳು ದೇಹದ ಮಧ್ಯದಲ್ಲಿವೆ, ಅವು ಬೆನ್ನೆಲುಬಿಗೆ ಅಂಟಿ–ಕೊಂಡಿರುತ್ತವೆಂದು ಭಾವಿಸಲಾಗಿದೆ, ಆದರೆ ವಾಸ್ತವದಲ್ಲಿ ಈ ಎಲ್ಲವೂ ಸೂಕ್ಷ್ಮ ದೇಹದಲ್ಲಿವೆ, ಆದಾಗ್ಯೂ ಪ್ರಜ್ಞೆ ಎಚ್ಚತ್ತುಕೊಂಡಾಗ ಅವುಗಳ ಚಟುವಟಿಕೆ ಭೌತಿಕ ಶರೀರದಲ್ಲಿ ನಡೆಯುತ್ತಿದೆಯೇನೋ ಎಂಬ ಭಾವನೆ ಮನುಷ್ಯನಿಗೆ ಬರುತ್ತದೆ.

**(CWSA, 11/1341)**

*



## ಶಕ್ತಿ ಉಪಾಸನಾ

ಶ್ರೀ ಅರವಿಂದರು "ಯೌಗಿಕ ಸಾಧನೆ" ಎಂಬ ಲೇಖನವನ್ನು ಪ್ರಕಟಿಸಲು ಅನುಮತಿ ನೀಡಿದ್ದರು, ಆದರೆ ಅವರು ಅದನ್ನು ತಮ್ಮದೇ ಕೃತಿ ಎಂದು ಭಾವಿಸಿರಲಿಲ್ಲ, 1934 ರಲ್ಲಿ ಬರೆದ ಒಂದು ಪತ್ರದಲ್ಲಿ ಅವರು ಬರೆದದ್ದು ಹೀಗಿದೆ: "ಯೌಗಿಕ ಸಾಧನ" ಶ್ರೀ ಅರವಿಂದರು ಬರೆದ ಲೇಖನವಲ್ಲ, ಆದರೆ ಅದನ್ನು ಅವರ ಒಂದು ಟಿಪ್ಪಣಿಯೊಂದಿಗೆ ಪ್ರಕಟಿಸಲಾಗಿತ್ತು. ಆ ಟಿಪ್ಪಣಿಯ ಕೊನೆಯ ಭಾಗ ಹೀಗಿದೆ: ಇಲ್ಲಿ ಕೊನೆಯದಾಗಿ ಸೂಚಿಸಲಾದ ವಿಶಿಷ್ಟ ಯೋಗದ ಗುರಿ ವೈಯಕ್ತಿಕ ಸಂಕಲ್ಪವನ್ನು ದೃಢೀಕರಿಸುವುದಾಗಿಲ್ಲ, ಆದರೆ ವೈಯಕ್ತಿಕ ಸಂಕಲ್ಪವನ್ನು ಸಮರ್ಪಣ ಮಾಡುವುದಾಗಿದೆ, ಆ ಸಮರ್ಪಣ ಅನಂತ ದೈವೀ ಸತ್ತೆಯ ದಿಶೆಯಲ್ಲಿ ಹಾಗೂ ನಿಯಂತ್ರಣದಲ್ಲಿ ಕೈಕೊಂಡ ಪರಿಪೂರ್ಣ, ಕಾದಿರಿಸಿಕೊಂಡಿರದ ಹಾಗೂ ಹೃತ್ಪೂರ್ವಕವಾದ ಸಮರ್ಪಣವಾಗಿರಬೇಕು. ಅದರ ಉದ್ದೇಶಕ್ಕಾಗಿ ವಿಧಿಸಲಾದ ಪದ್ಧತಿ ಇಲ್ಲವೆ ಆಧಾರದ ತರಬೇತು ಹೀಗಿರಬೇಕು: ಮೊದಲನೆಯದಾಗಿ ಆತ್ಮೋನ್ನತಿ ಸಾಧಿಸಿರದ ಮನುಷ್ಯನ ಕೂಗಾಟ ಮಾಡುವ ಆಸೆಗಳು ಹಾಗೂ ಪ್ರಚೋದನೆಗಳು, ಮೊಂಡುತನದ ಗರ್ವ ಹಾಗೂ ಅಹಂಮನ್ಯತೆ, ಸ್ವಯಂಪೂರ್ಣ ತರ್ಕ ಹಾಗೂ ಕಲ್ಪನೆ ಇವೆಲ್ಲವುಗಳ ಮೇಲೆ ಅವನು ಸ್ವಾಧೀನತೆ ಪಡೆಯಬೇಕು, ಅದರಿಂದಾಗಿ ಅವು ಸಮರ್ಪಣೆಯ ಪರಿಪೂರ್ಣತೆಯ ಮಧ್ಯೆ ಪ್ರವೇಶಿಸ–ದಂತಾಗುವುದು; ಎರಡನೆಯದಾಗಿ ಬಲವತ್ತರವಾದ, ಸರ್ವಶಕ್ತವಾದ ಹಾಗೂ ಪರಿಣಾಮಕಾರಿಯಾದ ಸಂಕಲ್ಪವನ್ನು ವಶಪಡಿಸಿಕೊಂಡು ಅದನ್ನು ಯಜ್ಞ ರೂಪದಲ್ಲಿ ಅತ್ಯಂತ ದೈವೀ ಉಚ್ಚನಾದವನಿಗೆ ಸಮರ್ಪಣೆ ಮಾಡಬೇಕು. ಮತ್ತು ಆ ಸಮರ್ಪಣೆ ದುರ್ಬಲ, ಚಿತ್ತವಿಕ್ಷೇಪಗೊಂಡ, ಅಜ್ಞಾನಿಯಾದ ಮತ್ತು ಆತ್ಮವಿಶ್ವಾಸ–ವಿಲ್ಲದ ಏನೋ ಒಂದಕ್ಕೆ ಆಗಿರಬಾರದು. ಸಿದ್ಧಯೋಗಿಯ ಕರ್ಮ ಇರಬೇಕಾದುದು



ಹೀಗೆ: ಏಕೈಕ ಪರಮೋಚ್ಚ ದೈವೀ ಶಕ್ತಿಯ ಸಂಕಲ್ಪಕ್ಕನುಸಾರವಾಗಿ, ಇಡಿಯಾಗಿ ಅವಳ ಚೈತನ್ಯದಿಂದ ಉಪಯೋಗಿಸಲಾದ ಹಾಗೂ ಪ್ರಚೋದಿಸಲಾದ ಕರ್ಮ–ವಾಗಿರಬೇಕು, ಅದು ಸೂರ್ಯ ಹಾಗೂ ನಕ್ಷತ್ರಗಳು, ಆಕಸ್ಮಿಕ ಆಘಾತ ಹಾಗೂ ಬಿರುಗಾಳಿ, ಮಂದಮಾರುತ, ಚಂದ್ರ ಇಲ್ಲವೆ ಹೂವುಗಳು, ಅಗ್ನಿ ಮತ್ತು ಪೃಥ್ವಿಯ ಧೂಳು ಕೈಕೊಳ್ಳುವಂತಹ ಸ್ಥಿರತೆ ಹಾಗೂ ಪ್ರಕಾಶಗಳಿದ್ದದ್ದು, ಇಲ್ಲವೆ ಸರ್ವಶಕ್ತ ಮತ್ತು ಭೀಕರವಾದದ್ದು, ಇಲ್ಲವೆ ಮೃದು ಮಧುರ ಹಾಗೂ ಉಪಯುಕ್ತವಾದದ್ದು, ಉದಾತ್ತವಾದದ್ದು ಇಲ್ಲವೆ ನಮ್ರವಾದದ್ದು ಆಗಿರುವಂತಹ ಕರ್ಮವಾಗಿರಬೇಕು, ಅದರ ಬಾಹ್ಯ ತೋರಿಕೆ ಏನೇ ಆಗಿರಲಿ ಅದನ್ನು ಯಾವಾಗಲೂ, ಪರಿಪೂರ್ಣ ಶಾಂತಿ, ಸ್ವ–ಸಮರ್ಪಣ ಮತ್ತು ಸ್ವ–ಜ್ಞಾನ ಇವುಗಳ ಆಧಾರದ ಮೇಲೆ ಕೈಕೊಳ್ಳಬೇಕು.

**(CWSA, 11/1398–99)**

*

### ದೈವೀ ಸಾಮರ್ಥ್ಯದ ನಿಬಂಧನೆಗಳು

ಚಿತ್ತದ ಅಶುದ್ಧಿ, ಯೋಚನೆಯಲ್ಲಿ, ಮನೋಭಾವದಲ್ಲಿ ಅಹಂಕಾರ, ಸಿದ್ಧಿಗಳನ್ನು ಉಪಯೋಗಿಸುವುದರಲ್ಲಿ ಆಸೆಯ ಪ್ರಾಬಲ್ಯ ಇರುವವರೆಗೆ ಸಾಮರ್ಥ್ಯದ ಸಿದ್ಧಿಗಳಲ್ಲಿ ಯಾವುದೂ ಪರಿಪೂರ್ಣವಾಗಿ ಕಾರ್ಯ ಮಾಡದು ಎಂಬುದನ್ನು ಗಮನಿಸಬೇಕು. ಅಂತಹ ಪರಿಸ್ಥಿತಿಗಳಡಿಯಲ್ಲಿ ಸಾಂದರ್ಭಿಕ ಉಪಯುಕ್ತತೆ ಮತ್ತು ಸಾಮರ್ಥ್ಯದ ಅನಿಯತ ಪರಿಣಾಮಕಾರಿತ್ವವಿರಬಹುದು, ಅದನ್ನು ಹೊಂದುವುದು ಯೋಗ್ಯವಾಗಿರುವುದಿಲ್ಲ, ಆದರೆ ಮನಸ್ಸು ತನ್ನ ಸಂಸ್ಕಾರಗಳನ್ನು, ರೂಢಿಗತ ವಿಧಾನಗಳನ್ನು ಬಿಟ್ಟುಕೊಡುವಂತೆ ಮತ್ತು ವಿಜ್ಞಾನಮಯಿ ಶಕ್ತಿಯ ಚಟುವಟಿಕೆಯನ್ನು ಸ್ವೀಕರಿಸುವಂತೆ ಅದಕ್ಕೆ ತರಬೇತು ನೀಡುವುದಕ್ಕೆ ಮಾತ್ರ ಉಪಯುಕ್ತವಾಗಬಹುದು, ಇಲ್ಲವೆ ಅಲ್ಲಿ ತಾಂತ್ರಿಕ ವಿಧಾನಗಳಿಂದ ಸ್ಥಿರಗೊಳಿಸಿದ ಸೀಮಿತ ಸಾಮರ್ಥ್ಯಗಳ ಕ್ರಮಬದ್ಧ ಮತ್ತು ಪರಿಣಾಮಕಾರಿ ಉಪಯುಕ್ತತೆ ಇರಬಹುದು, ಪೂರ್ಣ ಯೋಗದ ಸಾಧಕರು ಎರಡನೆಯದನ್ನು ದೂರವಿಡಬೇಕು.

*

### ಜ್ಞಾನಕ್ಕಾಗಿ ನಿಬಂಧನೆಗಳು

ಅಂತಃಕರಣದ ಸಂಪೂರ್ಣ ಶುದ್ಧಿ, ವಿಶೇಷವಾಗಿ ಆಸೆಯನ್ನು, ಮತ್ತು ಬುದ್ಧಿಯ ವಿಶುದ್ಧತೆಯನು ತೊರೆದುಬಿಡುವುದು, ಮನಸ್ಸಿನ ಪರಿಪೂರ್ಣ ನಿಷ್ಕ್ರಿಯತೆ

ಮತ್ತು ಕೊನೆಯದಾಗಿ ವಿಜ್ಞಾನದ ಸಾಮರ್ಥ್ಯಗಳ ಪರಿಪೂರ್ಣಗೊಳಿಸಿದ ಕ್ರಿಯೆ ಇವುಗಳಿಂದ ಮಾತ್ರ ಪರಿಪೂರ್ಣ ಜ್ಞಾನ ಮತ್ತು ತ್ರಿಕಾಲದೃಷ್ಟಿ ಇವು ಸಾಧ್ಯವಾಗುವವು ಎಂಬುದನ್ನು ಕೂಡ ಗಮನಿಸಬೇಕು. ಈ ಉಚ್ಚತರ ಸಾಮರ್ಥ್ಯದ ಅಪರಿಪೂರ್ಣ, ಕ್ರಮಬದ್ಧವಲ್ಲದ ಕ್ರಿಯೆ ಯಾವಾಗಲೂ ಸಾಧ್ಯವಾಗುವಂತಹದು ಮತ್ತು ಯೋಗಿಗಳಾಗಲಿ, ಸಾಧಕರಾಗಲಿ ಆಗಿರದ ಹಲವಾರು ಜನರನ್ನು ಅದು ವಶದಲ್ಲಿಟ್ಟುಕೊಂಡಿರುತ್ತದೆ.

**(CWSA, 11/21–22)**

*

## ತಂತ್ರದಲ್ಲಿ ಸಾಧನೆಯನ್ನು ಯೋಗ್ಯವಾದ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗುವುದು

ತಂತ್ರದಲ್ಲಿ ಸಾಧನೆಯನ್ನು ಯೋಗ್ಯವಾದ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗುವುದು ಬಹಳಷ್ಟು ಜನರು ಕೈಕೊಳ್ಳುತ್ತಿರುವುದಕ್ಕೆ ಹಾಗೂ ನೀನು ಕೈಕೊಂಡದ್ದಕ್ಕೆ ತದ್ವಿರುದ್ಧವಾಗಿದೆ. ಜನರು ದೇಹ ಹಾಗೂ ಪ್ರಾಣ ಇವುಗಳಿಂದ ಪ್ರಾರಂಭ ಮಾಡುತ್ತಾರೆ ಮತ್ತು ಅಲ್ಲಿಂದ ಚಿತ್ತ ಹಾಗೂ ಮನಸ್ಸುಗಳತ್ತ ಸಾಗುತ್ತಾರೆ ಮತ್ತು ಬುದ್ಧಿ ಹಾಗೂ ಸಂಕಲ್ಪಗಳೊಂದಿಗೆ ಮುಕ್ತಾಯ ಮಾಡುತ್ತಾರೆ. ನಿಜವಾದ ಕ್ರಮ ಸಂಕಲ್ಪದಿಂದ ಪ್ರಾರಂಭಿಸುವುದಾಗಿದೆ ಮತ್ತು ದೇಹದೊಂದಿಗೆ ಮುಕ್ತಾಯ–ಗೊಳಿಸುವುದಾಗಿದೆ. ಮನುಷ್ಯ ಸಂಕಲ್ಪದಿಂದ ಪ್ರಾರಂಭಿಸಿದರೆ ಆಸನ, ಪ್ರಾಣಾಯಾಮ, ಕುಂಭಕ, ಚಿತ್ತಶುದ್ಧಿ, ಪೂರ್ವ ತಯಾರಿ ರೂಪದ ಯಾವುದೊಂದು ಇವುಗಳ ಆವಶ್ಯಕತೆ ಇರುವುದಿಲ್ಲ. ಯೋಗಕ್ಕೆ ಸಂಬಂಧಿಸಿದ ವಿಷಯವನ್ನು ಕುರಿತು ಅದನ್ನೇ ತೋರಿಸಿಕೊಡಲು ಶ್ರೀ ರಾಮಕೃಷ್ಣರು ಬಂದಿದ್ದರು. “ಶಕ್ತಿ ಉಪಾಸನೆಯನ್ನು ಮೊದಲು ಕೈಕೊಳ್ಳಿರಿ, ಶಕ್ತಿಯನ್ನು ದೊರಕಿಸಿರಿ, ಅದು ನಿಮಗೆ ಸತ್‌ನ್ನು ಕೊಡುತ್ತದೆ” ಎಂದು ಹೇಳಿದರು. ಸಂಕಲ್ಪ ಮತ್ತು ಶಕ್ತಿ ಇವು ಯೋಗಿಗೆ ಮೊದಲು ಅವಶ್ಯವಾಗಿರುವ ಸಂಗತಿಗಳು. ಆ ಕಾರಣದಿಂದಾಗಿಯೇ ಅವರು, ಯಾವಾಗಲೂ, “ನೀನು ಬ್ರಹ್ಮನ್ ಆಗಿರುವಿ ಎಂಬುದನ್ನು ನೆನಪಿನಲ್ಲಿಟ್ಟುಕೋ” ಎಂದು ಹೇಳುತ್ತಿದ್ದರು. ಅವರು ಸ್ವಾಮಿ ವಿವೇಕಾನಂದರಿಗೆ ನೀಡಿದ ಪ್ರಮುಖ ಸಂದೇಶ ಅದೇ ಆಗಿತ್ತು. ನೀನು ಆಯ್ದುಕೊಂಡರೆ ನೀನು ಈಶ್ವರ, ಶುದ್ಧ, ಸಿದ್ಧ ಮತ್ತು ಉಳಿದೆಲ್ಲವೂ ಆಗಿರುವಿ ಇಲ್ಲವೆ ಅದಕ್ಕೆ ತದ್ವಿರುದ್ಧವಾದದ್ದನ್ನು ನೀನು ಆಯ್ದುಕೊಳ್ಳಬಹುದು. ಮೊದಲ ಆವಶ್ಯಕತೆ ಎಂದರೆ ನಿನ್ನಲ್ಲಿಯೇ ನೀನು ನಂಬಿಕೆಯನ್ನು ಇಟ್ಟುಕೊಳ್ಳುವು–ದಾಗಿದೆ, ಎರಡನೆಯದಾಗಿ ದೇವನಲ್ಲಿ, ಮೂರನೆಯದಾಗಿ ಕಾಳಿಯಲ್ಲಿ ನಂಬಿಕೆ



ಇರಿಸುವುದಾಗಿದೆ. ಏಕೆಂದರೆ ಈ ವಿಷಯಗಳು ಜಗತ್ತನ್ನು ರೂಪಿಸುತ್ತವೆ. ಮೊದಲು ಸಂಕಲ್ಪಕ್ಕೆ ಶಿಕ್ಷಣ ನೀಡು, ಸಂಕಲ್ಪದ ಮೂಲಕ ಜ್ಞಾನಕ್ಕೆ ಶಿಕ್ಷಣ ನೀಡು, ಜ್ಞಾನದ ಮೂಲಕ ಚಿತ್ತವನ್ನು ಪರಿಶುದ್ಧಗೊಳಿಸು, ಪ್ರಾಣವನ್ನು ನಿಯಂತ್ರಿಸು ಮತ್ತು ಮನಸ್ಸನ್ನು ಸ್ಥಿರಗೊಳಿಸು. ಈ ಎಲ್ಲ ಉಪಕರಣಗಳ ಮೂಲಕ ದೇಹ ಅಮರವಾಗುವಂತೆ ಮಾಡು. ಅದು ನಿಜವಾದ ಯೋಗ, ಮಹಾಪಂಥ. ಅದೇ ನಿಜವಾದ ಹಾಗೂ ಏಕೈಕವಾದ ತಂತ್ರ. ವೇದಾಂತ ಬುದ್ಧಿಯಿಂದ ಪ್ರಾರಂಭ ಮಾಡುತ್ತದೆ, ತಂತ್ರ ಶಕ್ತಿಯಿಂದ ಪ್ರಾರಂಭ ಮಾಡುತ್ತದೆ.

**(CWSA, 11/1372)**

*

## ದೈವೀ ಶಕ್ತಿ ನಿಮ್ಮಲ್ಲಿದೆ

ಇರುವ ಪ್ರಶ್ನೆ ಪ್ರಾರಂಭ ಹೇಗೆ ಮಾಡಬೇಕು ಎಂಬುದಾಗಿದೆ. ಆ ದೈವೀ ಶಕ್ತಿ ನಿಮ್ಮಲ್ಲಿದೆ. ಅದು ಕಾರ್ಯ ಮಾಡುವುದಕ್ಕೆ ಅನುವು ಮಾಡಿಕೊಡಿರಿ ಮತ್ತು ನೀವು ಸರಿಯಾದ ಮನೋಭಾವ ಹೊಂದಿರುವುದರ ಮೂಲಕ ಅದಕ್ಕೆ ಸಹಾಯ ಮಾಡಿರಿ. ನೀವೇ ಆ ಶಕ್ತಿ, ಅನುಮಂತಾ, ಮತ್ತು ಭರ್ತಾ ಆಗಿದ್ದೀರಿ. ಅನುಮಂತರಾಗಿ ಆಜ್ಞೆ ನೀಡಿರಿ. ಸಾಕ್ಷಿಯಾಗಿ ಅದು ಪರಿಣಾಮವನ್ನು ಕಾರ್ಯಗತಗೊಳಿಸುವುದನ್ನು ಗಮನಿಸಿರಿ, ಭೋಕ್ತಾ ಆಗಿ ಪರಿಣಾಮದ ಸಂತೋಷ ಪಡೆಯಿರಿ, ಭರ್ತಾ ಆಗಿ ಆಧಾರವನ್ನು ಕಾಪಾಡಿ ಅದಕ್ಕೆ ಸಹಾಯ ಮಾಡಿರಿ. ತಾಮಸಿಕ ಉದಾಸೀನತೆಯಿಂದ ಇಲ್ಲವೆ ರಾಜಸಿಕ ಬಂಡಾಯದಿಂದ ಅದನ್ನು ಹಾಳುಮಾಡಬೇಡಿರಿ. ನಿಮ್ಮ ದೈವೀ ಸಂಕಲ್ಪ ಎಂದೆಂದಿಗೂ ವಿಫಲವಾಗುವುದಿಲ್ಲ ಎಂಬುದರ ಬಗ್ಗೆ ನಿಶ್ಚಿತತೆಯಿಂದಿರಿ. ನೀವೇ ಜ್ಞಾತಾ: ನಿಮ್ಮೆದುರಿಗೆ ತಾನಾಗಿ ತಲೆದೋರಿದ ಎಲ್ಲ ಜ್ಞಾನವನ್ನು ಸ್ವೀಕರಿಸಿರಿ. ನಾನು ಇಲ್ಲಿ ವರ್ಣಿಸಿದ ಮನೋಭಾವವನ್ನು ನೀನು ಆಯ್ದುಕೋ, ಸಾಧನೆಯ ಇಲ್ಲವೆ ಜೀವನದ ಪ್ರತಿಯೊಂದು ವ್ಯಕ್ತಿಗತ ಕಾರ್ಯಕ್ಕೆ ನೀನು ಅದನ್ನು ಅನ್ವಯಿಸು: ನೀನು ಬೇರೇನೂ ಕೈಕೊಳ್ಳುವುದಿರುವುದಿಲ್ಲ. ಉಳಿದದ್ದನ್ನು ಕಾಳಿ ಕೈಕೊಳ್ಳುತ್ತಾಳೆ. ಕ್ಷೋಭೆಗೊಳಗಾಗುವುದು ಬೇಡ, ತಳಮಳಗೊಳ್ಳುವುದು ಬೇಡ, ಅವಸರಿಸುವುದು ಬೇಡ, ನಿಮ್ಮೆದುರಿಗೆ ಎಲ್ಲ ಶಾಶ್ವತತೆ ಇದೆ, ಅವಸರದಲ್ಲಿರುವುದೇಕೆ? ತಾಮಸಿಕ–ವಾಗುವುದು ಮಾತ್ರ ಬೇಡ, ಆಲಸ್ಯತನದಿಂದ ಕಾಲಹರಣ ಮಾಡುವುದು ಬೇಡ.

**(Record of Yoga, CWSA, 11/1372)**

*

## ಸ್ಥೂಲ ಹಾಗೂ ಸೂಕ್ಷ್ಮ ಶರೀರ ಇವುಗಳ ನಡುವೆ ಹೊಂದಾಣಿಕೆ

ಇಂದು ನಾನು ಶಕ್ತಿ ಇಲ್ಲವೆ ದೈವೀ ಸಂಕಲ್ಪ ಕುರಿತು ಮಾತನಾಡುವವನಿದ್ದೇನೆ, ಏಕೆಂದರೆ ಅದು ಯೋಗದ ತಳಹದಿಯಾಗಿದೆ. ಶಕ್ತಿಯ ಸ್ಥಾನ ಶಿರದ ಮೇಲಿರುವ ಸಹಸ್ರಾರದಲ್ಲಿದೆ, ಮತ್ತು ಆ ಆಸನದಿಂದ ಅದು ಕಾರ್ಯಕೈಕೊಳ್ಳುತ್ತದೆ. ಅದರ ಕೆಳಗೆ ಮಿದುಳಿನ ತುತ್ತ ತುದಿಯಲ್ಲಿ ಉಚ್ಚತರ ಬುದ್ಧಿ ಇದೆ ಮತ್ತು ಅದರ ಕೆಳಗೆ ಮಧ್ಯದ ಹಂತದಲ್ಲಿ ನೆಲೆಸಿರುವ ನಿಮ್ಮ ಬುದ್ಧಿಯ ತರ್ಕವಿದೆ, ಮತ್ತು ಅದರ ಕೆಳಗೆ, ಮಿದುಳಿನ ತಳದಲ್ಲಿ ಮನಸ್ಸಿನೊಡನೆ ಸಂಪರ್ಕ ಸಾಧಿಸುವ ಅಂಗವಿದೆ. ಈ ಅಂಗ ತಿಳಿವಳಿಕೆಯದು ಎಂದು ನಾವು ಹೇಳಬಹುದು. ಜ್ಞಾನ, ತರ್ಕ ಮತ್ತು ತಿಳಿವಳಿಕೆ ಇವು ಮಿದುಳಿನ ಮೂರು ಭಾಗಗಳು. ಈ ಕಾರ್ಯವಿಧಾನಗಳು ಸೂಕ್ಷ್ಮ ಶರೀರದಲ್ಲಿವೆ, ಆದರೆ ಅವು ತಮಗೆ ಅನುಗುಣವಾದ ಭೌತಿಕ ಮಿದುಳಿನ ಭಾಗಗಳೊಂದಿಗೆ ಸಂಪರ್ಕ ಪಡೆದಿವೆ.

ಎದೆಯಲ್ಲಿ ಹೃದಯವಿರುವ ಭಾಗದ ಮೇಲೆ ಮನಸ್ಸಿದೆ, ಎಂದರೆ ಸಂವೇದನೆ ಹಾಗೂ ಅದಕ್ಕೆ ಅಧೀನವಾದ ಐದು ಇಂದ್ರಿಯಗಳಿರುವ ಅಂಗ ಅದಾಗಿದೆ. ಮನಸ್ಸಿನ ಕೆಳಗೆ ಹೃದಯ ಹಾಗೂ ಅದರ ಕೆಳಗಿರುವ ನಾಭಿ ಇವುಗಳ ನಡುವೆ ಚಿತ್ತವಿದೆ. ಆ ಬಿಂದುವಿನಿಂದ ನಾಭಿಯವರೆಗೆ ಮತ್ತು ಅದರ ಕೆಳಗೆ ಅದು ಚೈತ್ಯ ಇಲ್ಲವೆ ಸೂಕ್ಷ್ಮ ಪ್ರಾಣವಾಗಿದೆ. ಇವೆಲ್ಲವೂ ಸೂಕ್ಷ್ಮ ದೇಹದಲ್ಲಿವೆ, ಆದರೆ ಆ ಬಿಂದುಗಳಲ್ಲಿ ಸ್ಥೂಲ ದೇಹದ ಸಂಪರ್ಕದಲ್ಲಿವೆ. ಸ್ಥೂಲ ದೇಹದಲ್ಲಿಯೇ ಸ್ವತಃ ಎರಡು ಕಾರ್ಯವಿಧಾನಗಳಿವೆ: ಭೌತಿಕ ಪ್ರಾಣ ಇಲ್ಲವೆ ನರವ್ಯೂಹ ಮತ್ತು ಅನ್ನ ಇಲ್ಲವೆ ಭೌತಿಕ ದೇಹ.

**(CWSA, 11/1373)**

*

## ಸಂಕಲ್ಪ ದೇಹದ ಜೀವಂತ ಯಜಮಾನ

ಸಂಕಲ್ಪ ಈಶ್ವರನ ಅಂಗ ಇಲ್ಲವೆ ದೇಹದ ಜೀವಂತ ಯಜಮಾನ. ಅದು ಈ ಎಲ್ಲ ಕಾರ್ಯವಿಧಾನಗಳ ಮೂಲಕ ಕಾರ್ಯ ಕೈಕೊಳ್ಳುತ್ತದೆ, ಯೋಚನೆ ಮತ್ತು ಜ್ಞಾನ ಇವುಗಳನ್ನು ಬುದ್ಧಿಯ ಮೂಲಕ, ಸಂವೇದನೆಗಳನ್ನು ಮನಸ್ಸಿನ ಮೂಲಕ, ಚಿತ್ತದ ಮೂಲಕ ಭಾವನೆಗಳನ್ನು, ಸಂತೋಷವನ್ನು ಪ್ರಾಣದ ಮೂಲಕ ತಿಳಿದು–ಕೊಳ್ಳಲಾಗುತ್ತದೆ: ಪ್ರತಿಯೊಂದು ಅಂಗದಲ್ಲಿ ಅದರ ಕ್ಷಮತೆಗಳಿಗೆ ಅನುಗುಣವಾಗಿ



ಶಕ್ತಿ ಪರಿಪೂರ್ಣವಾಗಿ ಕಾರ್ಯಕೈಕೊಂಡಾಗ ಶಕ್ತಿಯ ಕಾರ್ಯ ಪರಿಪೂರ್ಣ ಹಾಗೂ ವಿಫಲವಾಗದಂತಹದು ಆಗುತ್ತದೆ. ಆದರೆ ಅಲ್ಲಿ ದೌರ್ಬಲ್ಯವಿರುವುದಕ್ಕೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಅಂಗಗಳ ಗೊಂದಲವಿರುತ್ತದೆ. ಸಂವೇದನೆ, ಭಾವನೆ ಮತ್ತು ಯೋಚನೆ ಇವುಗಳಲ್ಲಿ ಪ್ರಾಣ ಮಧ್ಯೆ ಪ್ರವೇಶಿಸಿದರೆ ಆಗ ಮನುಷ್ಯ ಪ್ರಾಣದ ಎಂದರೆ ಆಸೆಗಳ ಗುಲಾಮನಾಗುತ್ತಾನೆ. ಸಂವೇದನೆ ಹಾಗೂ ಯೋಚನೆ ಇವುಗಳಲ್ಲಿ ಚಿತ್ತ ಮಧ್ಯೆ ಪ್ರವೇಶಿಸಿದರೆ, ಆಗ ಸಂವೇದನೆಗಳನ್ನು ಹಾಗೂ ಯೋಚನೆಗಳನ್ನು ಭಾವನೆಗಳು ಹಾಗೂ ಅವುಗಳಿಗೆ ಅನುಗುಣವಾದ ಬಯಕೆಗಳು ಮಿಥ್ಯೆಯಾಗುವಂತೆ ಮಾಡುತ್ತವೆ. ಉದಾಹರಣೆಗೆ ಪ್ರೇಮ ಬುದ್ಧಿಯ ಮಧ್ಯೆ ಪ್ರವೇಶಿಸಿದರೆ ಮನುಷ್ಯ ತಾನು ಪ್ರೀತಿಸುವ ವ್ಯಕ್ತಿಯನ್ನು ಕುರಿತು ಇರುವ ಸತ್ಯ ಅರಿತುಕೊಳ್ಳದೆ ಅದಕ್ಕೆ ಕುರುಡನಾಗುತ್ತಾನೆ, ಆ ವ್ಯಕ್ತಿಯ ಸಂಬಂಧದಲ್ಲಿ ಯಾವುದು ಸರಿ, ಯಾವುದು ತಪ್ಪು, ಕರ್ತವ್ಯ ಯಾವುದು, ಅಕರ್ತವ್ಯ ಯಾವುದು ಎಂಬವುಗಳಲ್ಲಿ ಭಿನ್ನತೆ ಕಂಡುಕೊಳ್ಳಲು ಶಕ್ತನಾಗುವುದಿಲ್ಲ. ಅವನು ಹೆಚ್ಚಿನ ಇಲ್ಲವೆ ಕಡಿಮೆ ರೀತಿಯಲ್ಲಿ ಪ್ರೇಮ, ಸಿಟ್ಟು, ಹಗೆತನ, ಮರುಕ, ಸೇಡು ಇತ್ಯಾದಿ ಭಾವನೆಗಳ ಗುಲಾಮನಾಗುತ್ತಾನೆ. ಮನಸ್ಸು ತರ್ಕದ ಮಧ್ಯೆ ಪ್ರವೇಶಿಸಿದರೆ ತನ್ನ ಸಂವೇದನೆಗಳು ಕೇವಲ ವಿಚಾರಗಳಿಗಾಗಿ, ನಿಜವಾದ ವಾದಗಳಿಗಾಗಿ ಇವೆ ಎಂದು ತಪ್ಪು ಅರ್ಥ ಮಾಡಿಕೊಳ್ಳುತ್ತಾನೆ. ತಾನು ನೋಡಿದ್ದನ್ನು ಹಾಗೂ ಕೇಳಿದ್ದನ್ನು ತೀರ್ಮಾನ–ಕ್ಕೊಳಪಡಿಸುವುದರ ಬದಲಾಗಿ ಅವನು ನೋಡಿದ್ದರ ಹಾಗೂ ಕೇಳಿದ್ದರ ಮೂಲಕ ತೀರ್ಮಾನಕ್ಕೆ ಬರುತ್ತಾನೆ. ಕಾರಣ, ಕಲ್ಪನೆ, ನೆನಪು ಹಾಗೂ ತರ್ಕ ಇವು ಜ್ಞಾನದ ಮಧ್ಯೆ ಪ್ರವೇಶಿಸಿದರೆ ಮನುಷ್ಯ ಉಚ್ಚತರ ಜ್ಞಾನ ಪಡೆದುಕೊಳ್ಳುವುದರಲ್ಲಿ ತಡೆಯುಂಟಾದುದನ್ನು ಕಂಡುಕೊಳ್ಳುತ್ತಾನೆ, ಸಂಭಾವ್ಯತೆಗಳು ಹಾಗೂ ಸಾಧ್ಯತೆಗಳು ಇರುವ ಕೊನೆರಹಿತ ವೃತ್ತದಲ್ಲಿ ಅಲೆದಾಡುತ್ತಾನೆ. ಕೊನೆಯದಾಗಿ ಹೇಳುವುದಾದರೆ ಬುದ್ಧಿ ಸಂಕಲ್ಪದ ಮಧ್ಯೆ ಪ್ರವೇಶಿಸಿದರೆ ಮನುಷ್ಯ ಸರ್ವಸಾಮರ್ಥ್ಯದ ಬಳಿ ಸಾಗುವುದರ ಬದಲಾಗಿ ತನ್ನ ಸೀಮಿತ ಜ್ಞಾನದ ಸಾಮರ್ಥ್ಯದಿಂದ ಸೀಮಿತತೆಗೆ ಒಳಗಾಗುತ್ತಾನೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಒಂದು ಯಂತ್ರ ಇಲ್ಲವೆ ಉಪಕರಣವನ್ನು ಅದಕ್ಕೆ ಯೋಗ್ಯವಲ್ಲದ ಕಾರ್ಯದಲ್ಲಿ, ಯಾವುದಕ್ಕಾಗಿ ಅದನ್ನು ತಯಾರಿಸಲಾಗಿದೆಯೋ ಹೊಂದಿಸಲಾಗಿದೆಯೋ ಅಂತಹದಲ್ಲದ ಕಾರ್ಯದಲ್ಲಿ ತೊಡಗಿಸಿದಾಗ, ಆಗ ಅದು ಆ ಕಾರ್ಯವನ್ನು ಮಾಡಲಾಗುವುದಿಲ್ಲ ಇಲ್ಲವೆ ಕೆಟ್ಟ ರೀತಿಯಲ್ಲಿ ಕೈಕೊಳ್ಳುತ್ತದೆ, ಧರ್ಮ ಸಂಕರವನ್ನು ಸೃಷ್ಟಿಸಲಾಗುತ್ತದೆ. ನಾನು ಈಗ ಇಲ್ಲಿ ವರ್ಣಿಸಿದ್ದು ಜ್ಞಾನ ಪಡೆಯುವ ಮೊದಲು ಜನರು ಹೊಂದಿರುವ

ಸರ್ವಸಾಧಾರಣ ಸ್ಥಿತಿಯಾಗಿರುತ್ತದೆ. ಅದೆಲ್ಲವೂ ಧರ್ಮ ಸಂಕರ, ಕಾರ್ಯ–ವಿಧಾನಗಳ ಗೊಂದಲ, ಕೆಟ್ಟ ಆಡಳಿತ, ಅದಕ್ಷ ಹಾಗೂ ಆಜ್ಞಾನದ ಆಡಳಿತ. ನಿಜವಾದ ಮಂತ್ರಿಯ ಸಂಕಲ್ಪವನ್ನು ನಿಮ್ನತರ ಅಧಿಕಾರಿಗಳ ಕೈಗೊಂಬೆಯನ್ನಾಗಿ ಮಾಡಿ ಪ್ರತಿಯಾಗಿ ಕೊಡುವುದಾಗಿರುತ್ತದೆ. ಆ ಅಧಿಕಾರಿಗಳಲ್ಲಿ ಪ್ರತಿಯೊಬ್ಬನು ತನ್ನದೇ ಸ್ವಾರ್ಥದ ಗುರಿಗಳಿಗಾಗಿ ಕಾರ್ಯ ಮಾಡುತ್ತಾನೆ, ಪ್ರತಿಯೊಬ್ಬನು ತನ್ನದೇ ಲಾಭಕ್ಕಾಗಿ ಇತರರಿಗೆ ಅಡ್ಡಿಯನ್ನುಂಟು ಮಾಡುತ್ತ ಇಲ್ಲವೆ ಅಪ್ರಾಮಾಣಿಕತೆಯಿಂದ ಇನ್ನೊಬ್ಬರ ಕೈಯಲ್ಲಿ ಆಟವಾಡುತ್ತ ಯಜಮಾನ ಈಶ್ವರನಿಗೆ ಕೇಡುಂಟು ಮಾಡುತ್ತ ಇರುತ್ತಾನೆ. ಅವನು ಈಶ್ವರನಾಗಿರುವುದು ನಿಂತುಹೋಗಿ ಅನೀಶನಾಗುವಂತಾಗುತ್ತದೆ, ತನ್ನ ಸೇವಕರ ಕೈಗೊಂಬೆಯಾಗುತ್ತಾನೆ, ಬೆಪ್ಪನಾಗುತ್ತಾನೆ. ಅದಕ್ಕೆ ಅವನು ಅನುವು ಮಾಡಿಕೊಡುವುದು ಏಕೆ? ಅದು ಅಜ್ಞಾನದ ಕಾರಣದಿಂದಾಗಿ. ಅವನಿಗೆ ತಿಳಿದಿರುವುದಿಲ್ಲ. ತನ್ನೊಂದಿಗೆ ಮಂತ್ರಿಗಳು, ಅಧಿಕಾರಿಗಳು ಹಾಗೂ ಅವರ ಮೇಲೆ ಜೋತುಬಿದ್ದ ಲಕ್ಷಾನುಗಟ್ಟಲೆ ಜನರು ಏನು ಮಾಡುತ್ತಿದ್ದಾರೆಂಬುದನ್ನು ಅವನು ಅರಿತಿರುವುದಿಲ್ಲ. ಈ ಅಜ್ಞಾನವೆಂದರೆ ಏನು? ಅದು ತನ್ನದೇ ನಿಜವಾದ ಸ್ವಭಾವ, ಸ್ಥಾನಮಾನ, ಮತ್ತು ಅಧಿಕಾರ ಇವುಗಳನ್ನು ಗುರುತಿಸಲು ಅಶಕ್ತನಾಗಿರುವುದಾಗಿದೆ. ತನ್ನ ದೊರೆತನದ ಚಟುವಟಿಕೆಯ ಚಿಕ್ಕ ಭಾಗವಾದ ದೇಹದಲ್ಲಿ ಆಳವಾಗಿ ಅಭಿರುಚಿ ಹೊಂದುವುದರೊಂದಿಗೆ ಅವನು ಪ್ರಾರಂಭಿಸಿದ. "ಅದು ನನ್ನ ಸಾಮ್ರಾಜ್ಯ" ಎಂದು ಅವನು ಯೋಚಿಸಿದ. ಅವನು ತನ್ನ ದೈಹಿಕ ಕಾರ್ಯವಿಧಾನಗಳ ಉಪಕರಣವಾದ. ಅದೇ ರೀತಿಯಲ್ಲಿ ನರಗಳ, ಸಂವೇದನಾತ್ಮಕ, ಭಾವನಾತ್ಮಕ ಮತ್ತು ಮಾನಸಿಕ ಭಾಗಗಳ ಉಪಕರಣವಾದ, ಅವನು ತನ್ನನ್ನು ಅವುಗಳಲ್ಲಿ ಪ್ರತಿಯೊಂದರ ಜೊತೆಗೆ ಗುರುತಿಸಿಕೊಳ್ಳುತ್ತಾನೆ. ತಾನು ಅವುಗಳಿಂದ ಭಿನ್ನನಾದವನು ಎಂಬುದನ್ನು, ಅವುಗಳಿಗಿಂತ ಬಹಳಷ್ಟು ಶ್ರೇಷ್ಠನಾದವನು, ಬಲಿಷ್ಠನಾದವನು ಎಂಬುದನ್ನು ಅವನು ಮರೆತುಬಿಡುತ್ತಾನೆ. ಅವನು ಕೈಕೊಳ್ಳಬೇಕಾದುದೇನೆಂದರೆ ಅಧಿಕಾರವನ್ನು ಸ್ವಾಧೀನಪಡಿಸಿಕೊಳ್ಳಬೇಕು, ತಾನು ಈಶ್ವರ, ರಾಜ, ಪ್ರಭು, ದೇವನೇ ಸ್ವತಃ ಎಂಬುದನ್ನು ನೆನಪಿಗೆ ತಂದುಕೊಳ್ಳಬೇಕು.

ಈ ತಿಳಿವಳಿಕೆಯೊಂದಿಗೆ ತಾನು ಸರ್ವಸಾಮರ್ಥ್ಯವುಳ್ಳವನು ಎಂದು ಅವನು ನೆನಪಿಗೆ ತಂದುಕೊಳ್ಳಬೇಕು. ಸಂಕಲ್ಪ ಅವನ ಬಲಾಢ್ಯ ಮಂತ್ರಿ.

**(CWSA, 11/1374)**

*



## ಸಂಕಲ್ಪದ ತಪಸ್ಸು

ಮನುಷ್ಯ ಸಂಕಲ್ಪಕ್ಕೆ ಆಧಾರ ಹಾಗೂ ನಿರ್ದೇಶನ ನೀಡಲಿ, ಆಗ ಸಂಕಲ್ಪ ಆಡಳಿತದಲ್ಲಿ ಸುವ್ಯವಸ್ಥೆಯನ್ನು ಒಳತರುತ್ತದೆ ಮತ್ತು ಪ್ರತಿಯೊಬ್ಬ ಅಧಿಕಾರಿ ವಿಧೇಯನಾಗಿ, ಪರಿಪೂರ್ಣವಾಗಿ ತನ್ನದೇ ಕರ್ತವ್ಯ ಕೈಕೊಳ್ಳುವಂತೆ ಅವನ ಮೇಲೆ ಒತ್ತಡ ತರುತ್ತದೆ. ಸಹಜವಾಗಿ ಅದು ಒಮ್ಮೆಗೆ ಆಗುವುದಿಲ್ಲ. ಅದಕ್ಕೆ ಸಮಯ ಬೇಕಾಗುತ್ತದೆ. ಅಧಿಕಾರಿಗಳು ಗೊಂದಲಕ್ಕೀಡಾದ ಕಾರ್ಯ ಮತ್ತು ದುರಾಡಳಿತ ಇವುಗಳಿಗೆ ಎಷ್ಟೊಂದು ರೂಢಿಸಿಕೊಂಡಿರುತ್ತಾರೆ ಎಂದರೆ ಮೊದಲಿಗೆ ಸರಿಯಾಗಿ ಕಾರ್ಯ ಮಾಡುವುದನ್ನು ಇಷ್ಟಪಡುವುದಿಲ್ಲ, ಮತ್ತು ಎರಡನೆಯದಾಗಿ ಅವರು ಅದನ್ನು ಬಯಸಿದರೂ ಅದು ಅವರಿಗೆ ಕಠಿಣವಾಗಿರುತ್ತದೆಂದು ಕಂಡುಕೊಳ್ಳುವರು. ಉದಾಹರಣೆಗೆ ನೀವು ನಿಮ್ಮ ಸಂಕಲ್ಪವನ್ನು ಉಪಯೋಗಿಸುತ್ತೀರಿ, ಆಗ ಏನು ಸಂಭವಿಸಬಹುದು? ಮೊದಲು ನೀವು ಅದನ್ನು ಪ್ರಾಣದ ಮೂಲಕ, ಆಸೆಯ ಮೂಲಕ, ಇಚ್ಛೆಯ ಮೂಲಕ, ಭರವಸೆಯ ಮೂಲಕ ಉಪಯೋಗಿಸಲು ಪ್ರಯತ್ನಿಸುತ್ತೀರಿ ಇಲ್ಲವೆ ನೀವು ಚಿತ್ತದ ಮೂಲಕ ಭಾವನೆ, ಆತುರ, ನಿರೀಕ್ಷೆಗಳೊಂದಿಗೆ ಉಪಯೋಗಿಸುತ್ತೀರಿ, ಇಲ್ಲವೆ ನೀವು ಮನಸ್ಸಿನ ಮೂಲಕ ಚೇಷ್ಟಾ, ಹೋರಾಟ, ಪ್ರಯತ್ನ ಇವುಗಳನ್ನು ಉಪಯೋಗಿಸಿ ನೀವು ನಿಯಂತ್ರಿಸಲು ಬಯಸಿದ್ದರ ಜೊತೆಗೆ, ಭೌತಿಕವಾಗಿ ಕುಸ್ತಿ ಹಿಡಿಯುತ್ತಿರುವ ರೀತಿಯಲ್ಲಿ ವರ್ತಿಸುತ್ತೀರಿ. ಇಲ್ಲವೆ ಬುದ್ಧಿಯ ಮೂಲಕ ಉಪಯೋಗಿಸುತ್ತೀರಿ, ಯೋಚನೆಯ ಮೂಲಕ ನಿಮಗೆ ಸ್ವಾರಸ್ಯಕರವಾಗಿರುವ ವಿಷಯದ ಮೇಲೆ ಪ್ರಾಬಲ್ಯ ಸಾಧಿಸಲು "ಇದಿರಲಿ" "ಅದು ಸಂಭವಿಸಲಿ", ಇತ್ಯಾದಿಯಾಗಿ ಯೋಚಿಸುತ್ತೀರಿ. ಸಂಕಲ್ಪದ ಸಾಮರ್ಥ್ಯವನ್ನು ಸ್ವಾಧೀನಪಡಿಸಿಕೊಳ್ಳಲು ಯೋಗಿಗಳು ಈ ಎಲ್ಲ ವಿಧಾನಗಳನ್ನು ಉಪಯೋಗಿಸುತ್ತಾರೆ. ಹಟಯೋಗಿ ಪ್ರಾಣ ಮತ್ತು ದೇಹಗಳನ್ನು ಉಪಯೋಗಿಸುತ್ತಾನೆ, ರಾಜಯೋಗಿ ಹೃದಯ, ಮನಸ್ಸು ಹಾಗೂ ಬುದ್ಧಿಗಳನ್ನು ಉಪಯೋಗಿಸುತ್ತಾನೆ, ಆದರೆ ಅತ್ಯಂತ ಒಳ್ಳೆಯ ವಿಧಾನ ಇದಾವುದೂ ಅಲ್ಲ. ಇವುಗಳಲ್ಲಿ ಕೊನೆಯದೂ ಕೂಡ ಅತ್ಯಂತ ಒಳ್ಳೆಯದು ಎನಿಸುವುದರಲ್ಲಿ ಎರಡನೆ ದರ್ಜೆಯದು ಮತ್ತು ಅದು ಹೋರಾಟ, ವಿಫಲತೆ, ಮೇಲಿಂದ ಮೇಲೆ ಉಂಟಾಗುವ ನಿರಾಶೆ ಇವುಗಳನ್ನೆಲ್ಲ ಹೇರುತ್ತದೆ. ಸಂಕಲ್ಪ ಇವೆಲ್ಲವುಗಳಿಲ್ಲದೆ ಸಹಸ್ರ ದಲದಿಂದ ಪ್ರಯತ್ನವಿಲ್ಲದೆ, ಭಾವನೆ ಆತುರಗಳಿಲ್ಲದೆ, ಆಸೆಯಿಲ್ಲದೆ ವಿಷಯದ ಮೇಲೆ ನೇರವಾಗಿ ಕಾರ್ಯ ಮಾಡಿದಾಗ ಮಾತ್ರ ಅದು ಪರಿಪೂರ್ಣವಾಗಿರುತ್ತದೆ.

ಪ್ರತಿಯೊಂದು ಕಾರ್ಯವಿಧಾನ ಅದಕ್ಕಾಗಿಯೆ ಇದೆ, ಮತ್ತು ಸಂಕಲ್ಪ ಅದರದೇ ಕಾರ್ಯವಿಧಾನ. ಅದು ಈಶ್ವರನಿಗೆ ಯಾವಾಗಲೂ ವಿಧೇಯವಾಗಿರುತ್ತದೆ. ಆದರೆ ಅದು ತನ್ನಲ್ಲಿಯೇ ಕಾರ್ಯ ಮಾಡುತ್ತದೆ, ಅದು ಉಳಿದವುಗಳನ್ನು ಉಪಯೋಗಿಸುತ್ತದೆ, ಅದು ಅವುಗಳ ಉಪಯೋಗಕ್ಕೆ ಒಳಗಾಗಬಾರದು. ...

ಸಂಕಲ್ಪ ಸರ್ವಸಮರ್ಥವಾಗಿರುತ್ತದೆ ಮತ್ತು ಅದನ್ನು ತಾಳ್ಮೆಯಿಂದ, ಸ್ಥಿರತೆಯಿಂದ ಮತ್ತು ವೀರೋಚಿತವಾಗಿ ಉಪಯೋಗಿಸಿದರೆ ಜಯಶಾಲಿ–ಯಾಗುತ್ತದೆ. ಏಕೆಂದರೆ ಸಂಕಲ್ಪ ಸ್ವತಃ ಕಾಳಿಯೇ ಆಗಿದೆ, ಇದನ್ನು ನಾನು ಮತ್ತೆ ಹೇಳುತ್ತಿದ್ದೇನೆ. ಹಾಗಾಗಿ ಕೊನೆಗೆ ಅದು ತನ್ನ ಕ್ರಿಯೆಯ ಮೂಲಕ ಹೊಸ ನಿಯಮಗಳು, ರೂಢಿಗಳು ಇಲ್ಲವೆ ಪ್ರವೃತ್ತಿಗಳು ಇವುಗಳನ್ನೆಲ್ಲ ಸ್ಥಾಪಿಸುತ್ತದೆ, ಅವು ಹಳೆಯವುಗಳ ಜೊತೆಗೆ ಹೋರಾಡುತ್ತವೆ ಮತ್ತು ಕ್ರಮೇಣ ಜಯ ಸಾಧಿಸುತ್ತವೆ. ಆಗ ಸಂಭವಿಸುವುದೇನೆಂದರೆ ಹಳೆಯದನ್ನು ಕೆಳಗೆ ಕೆಡವಿ ಹಾಕಿದ್ದಾಗಲೂ ಕೂಡ, ದುರ್ಬಲಗೊಳಿಸಿದ್ದರೂ ಕೂಡ, ಮತ್ತು ಅದು ಇನ್ನು ಮುಂದೆ ಸ್ವಭಾವದ ನಿಜವಾದ ಭಾಗವಾಗಿರದೆ ಹೋಗಿದ್ದರೂ ಕೂಡ ಅದು ಆಧಾರದಿಂದ ಹೊರಗೆ ಹೋಗುವುದನ್ನು ವಿರೋಧಿಸುತ್ತದೆ. ಆ ಹೊಸ ನಿಯಮಗಳಿಗೆ ಶಕ್ತಿಗಳ ಇಲ್ಲವೆ ಆಧ್ಯಾತ್ಮಿಕ ಸತ್ತೆಗಳ ಒಂದು ಸೈನ್ಯ ಆಧಾರ ನೀಡುತ್ತದೆ, ಅವರು ನಿಮ್ಮನ್ನು ಸುತ್ತುವರಿದಿದ್ದಾರೆ ಮತ್ತು ಅವರು ನಿಮ್ಮ ಅನುಭವಗಳು ಹಾಗೂ ಸಂತೋಷ ಪಡುವಿಕೆಗಳ ಮೇಲೆ ಜೀವಿಸುತ್ತಾರೆ. ಪ್ರತಿರೋಧದ ನಿಯಮ ಯೋಗದ ಎರಡನೆಯ ಅವಧಿಯನ್ನು ಗುರುತಿಸುತ್ತದೆ ಮತ್ತು ಸಂಕಲ್ಪ ಅದಾಗಲೆ 'ಸಿದ್ಧ'ವಾಗಿರದೆ, ಆಧಾರ ಶುದ್ಧವಾಗಿರದೆ ಇದ್ದರೆ ಆ ಅವಧಿ ಸಾಧಕನಿಗೆ ಕಿರುಕುಳದ್ದು, ಮತ್ತು ತೊಂದರೆ ಕೊಡುವಂತಹದು ಆಗುತ್ತದೆ. ಏಕೆಂದರೆ ಪ್ರತಿರೋಧದ ಕ್ಷಮತೆಗೆ ಕೊನೆಯೇ ಇಲ್ಲ ಎಂಬಂತೆ ತೋರಿಬರುತ್ತದೆ.

ಸಂಕಲ್ಪಕ್ಕೆ ನಂಬಿಕೆ ಇಲ್ಲವೆ ಜ್ಞಾನದ ಆಧಾರ ದೊರಕಿದರೆ ಅದು ವಿಜಯಿಯಾಗಲೇಬೇಕು. ಆಗಲೂ ಕೂಡ ಹೊರಗೆ ತಳ್ಳಲಾದ ರೂಢಿಗಳು ಹಾಗೂ ಪ್ರವೃತ್ತಿಗಳು ಆ ವ್ಯವಸ್ಥೆಯಲ್ಲಿ ಮರು ಪ್ರವೇಶ ಮಾಡಲು, ಕಳೆದುಕೊಂಡ ಸಾಮರ್ಥ್ಯದ ಹಾಗೂ ಸಂತೋಷ ಪಡೆಯುವಿಕೆಯ ಆಸನಗಳನ್ನು ಮತ್ತೆ ದೊರಕಿಸಲು ಹೆಣಗುವುದನ್ನು ಮುಂದುವರಿಸುತ್ತಲೇ ಇರುತ್ತವೆ. ಇದನ್ನು 'ಮತ್ತೆ ಬರುವಿಕೆ' (recurrence) ಎಂದು ಕರೆಯುತ್ತಾರೆ. ಸಂಕಲ್ಪ ಸಿದ್ಧ ಹಾಗೂ ಆಧಾರ



ಶುದ್ಧ ಆದ ಪ್ರಮಾಣದಲ್ಲಿ 'ಮತ್ತೆ ಬರುವಿಕೆ' ದುರ್ಬಲವಾಗುತ್ತದೆ, ಪುನರಾವರ್ತನೆ ಕಡಿಮೆಯಾಗುತ್ತದೆ ಇಲ್ಲವೆ ಅದು ಬಂದಾಗ ಕಡಿಮೆ ಸುದೀರ್ಘವಾಗಿರುತ್ತದೆ. ಆದರೆ ಅಶುದ್ಧ ಆಧಾರದಲ್ಲಿ ಇಲ್ಲವೆ ಅಪರಿಪೂರ್ಣ ಸಂಕಲ್ಪದಲ್ಲಿ ಪ್ರತಿರೋಧದ ಹಾಗೆ ಮತ್ತೆ ಬರುವಿಕೆ ಸುದೀರ್ಘ ಹಾಗೂ ತೊಂದರೆದಾಯಕ ಆಗಿರುತ್ತದೆ. ಇನ್ನೊಂದೆಡೆಗೆ ಮೂರು ಅನುಕೂಲಕರ ನಿಯಮಗಳಿವೆ. ಹೊಸ ರೂಢಿ ಅಥವಾ ಪ್ರವೃತ್ತಿ ಒಮ್ಮೆ ಸ್ಥಾಪಿತಗೊಂಡಾಗ, ಆ ನಿಯಮವೆಂದರೆ ಅದು ಬಲ ಹಾಗೂ ಪರಿಪೂರ್ಣತೆಗಳತ್ತ ಅಭಿವೃದ್ಧಿ ಹೊಂದುವುದಾಗಿದೆ. ಅದು ತನ್ನನ್ನು ಸ್ಥಾಪಿಸಲು ಹೆಣಗುತ್ತಿರುವವರೆಗೆ ಯೋಗಿ ಯಾವುದೇ ಸಮಯದಲ್ಲಿ ಭ್ರಷ್ಟನಾಗಬಹುದು, ಎಂದರೆ ಅವನು ದೋಷ, ದೌರ್ಬಲ್ಯ ಇಲ್ಲವೆ ಅಸಹನೆ ಇವುಗಳಿಂದ ಹೋರಾಟವನ್ನು ಬಿಟ್ಟುಕೊಡಬಹುದು. ಯೋಗಿಗೆ ಇರುವ ಪತನ ಅದೊಂದೇ. ವಿಫಲತೆ, ತಾತ್ಕಾಲಿಕ ಸೋಲು ಭ್ರಂಶವಲ್ಲ, ಆದರೆ ಅವನು ಹೋರಾಟವನ್ನು ಬಿಟ್ಟುಕೊಡಬಾರದು. ಒಮ್ಮೆ ಸರಿಯಾದ ಪ್ರವೃತ್ತಿ ಸ್ಥಾಪಿತಗೊಂಡಾಗ, ಪಾರಮ್ಯ (Supremacy) ಹಾಗೂ ಅದರ ಭೋಗದ ಸಂತೋಷ ಪಡೆಯುವವರೆಗೆ, ಅದನ್ನು ಯಾರೂ ಹಾಳು ಮಾಡಲಾರರು.

**(CWSA, 11/1378)**

*

**ಮನುಷ್ಯನಲ್ಲಿರುವ ದೈವೀ ಶಕ್ತಿ**

ಆದಾಗ್ಯೂ, ಸಂಕಲ್ಪ ಮೊದಲಿಗೆ, ತುಲನಾತ್ಮಕವಾಗಿ, ದುರ್ಬಲವಾಗಿದ್ದಾಗ, ಇಲ್ಲವೆ ಆಚರಣೆಗೆ ಒಳಗಾಗದೆ ಇದ್ದಾಗ ಪ್ರಗತಿ ನಿಧಾನಗತಿಯದು ಆಗಲೇಬೇಕು. ಸಂಕಲ್ಪದ ಪರಿಪೂರ್ಣತೆ ಆಧಾರದ ಪರಿಶುದ್ಧತೆಯನ್ನು ತಂದ ಪ್ರಮಾಣದಲ್ಲಿ ಪ್ರಗತಿ ತೀವ್ರಗತಿಯದು ಆಗುತ್ತದೆ. ಜಗತ್ತಿನಲ್ಲಿ ಪ್ರತಿಯೊಂದನ್ನು ಒಂದು ವಿಧಾನದ ಮೂಲಕ ಕೈಕೊಳ್ಳಲಾಗುತ್ತದೆ. ವಿಧಾನದ ಅರ್ಥ ಗುರುತಿಸಲಾದ ಕೆಲವೊಂದು ಹಂತಗಳ ಮೂಲಕ ಕ್ರಿಯೆಗಳ ಶ್ರೇಣಿ ಒಂದು ವಿಶಿಷ್ಟ ಪರಿಣಾಮದತ್ತ ಕೊಂಡೊಯ್ಯುವುದಾಗಿದೆ. ಈ ಹಂತಗಳನ್ನು ನಿಧಾನವಾಗಿ ಇಲ್ಲವೆ ಶೀಘ್ರಗತಿಯಿಂದ ದಾಟಿಕೊಂಡು ಹೋಗಬಹುದು, ಆದರೆ ಎಲ್ಲಿಯವರೆಗೆ ಕ್ರಮಕ್ರಮವಾಗಿ ವಿಧಾನಗಳ ನಿಯಮ ಪ್ರಚಲಿತವಾಗಿರುತ್ತದೆಯೋ ಎಲ್ಲ ಹಂತಗಳನ್ನು ಒಂದರ ನಂತರ ಒಂದರಂತೆ ಹಾಗೂ ಪ್ರಜ್ಞಾಪೂರ್ವಕವಾಗಿ ದಾಟಿಕೊಂಡು ಹೋಗಬೇಕಾಗುತ್ತದೆ.

ನೀವು ದಾಟಿ ಹೋಗಬೇಕಾದ ಮೈಲುಗಲ್ಲುಗಳು ಹಲವಾರಿರುತ್ತವೆ; ಆದರೆ ನೀವು ಅವುಗಳನ್ನು ನಡೆದಾಡುತ್ತ, ಚಕ್ಕಡಿಯಲ್ಲಿ, ರೇಲ್ವೆ ಬೋಗಿಯಲ್ಲಿ ಕುಳಿತು ದಾಟಿಕೊಂಡು ಹೋಗಬೇಕಾಗುವುದು, ಆದರೆ ನೀವು ದಾಟಿಕೊಂಡು ಹೋಗಲೇಬೇಕು. ಆದಾಗ್ಯೂ ಬೆಳೆಯುತ್ತಿರುವ ಸಂಕಲ್ಪದ ಬಲದೊಂದಿಗೆ ನೀವು ನಿಧಾನಗತಿಯ ವಿಧಾನವನ್ನು ತೀವ್ರಗತಿಯದನ್ನಾಗಿ ಮಾಡಬಹುದು. ಒಂದು ಸಮಯ ಬರುತ್ತದೆ, ಆಗ ಕಾಳಿ ಸಾಮಾನ್ಯ ಮನುಷ್ಯನ ಮಿತಿಗಳಾಚೆಗೆ ಸಾಗಲು ಪ್ರಾರಂಭಿಸುತ್ತಾಳೆ ಮತ್ತು ಅವಳು ಕೇವಲ ಮನುಷ್ಯನ ಶಕ್ತಿಯಾಗಿರುವುದಿಲ್ಲ, ಆದರೆ ಮನುಷ್ಯನಲ್ಲಿರುವ ದೇವನ ಶಕ್ತಿಯಾಗಿರುತ್ತಾಳೆ. ಆಗ ನಿಧಾನಗತಿಯ ವಿಧಾನಗಳ ಸ್ಥಾನದಲ್ಲಿ ಏಕಾಗ್ರಗೊಂಡ ವಿಧಾನಗಳು ಬರುತ್ತವೆ. ಅದು ಒಂದು ಮೈಲುಗಲ್ಲಿನಿಂದ ಅದರ ಮುಂದಿನ ಇನ್ನೊಂದು ಮೈಲುಗಲ್ಲಿನವರೆಗೆ ಪ್ರಯಾಣ ಮಾಡುವುದರ ಬದಲಾಗಿ ಕೊನೆಯವರೆಗೆ ಮೊದಲನೆಯ ಮೈಲುಗಲ್ಲಿನಿಂದ ಮೂರನೆಯ ಮೈಲುಗಲ್ಲಿನತ್ತ ನೆಗೆತ ಮಾಡುವುದು ಇತ್ಯಾದಿಯ ರೂಪದಲ್ಲಿರುತ್ತದೆ: ಬೇರೆ ಶಬ್ದಗಳಲ್ಲಿ ಹೇಳುವುದಾದರೆ ವಿಧಾನ ಅದೇ ಆಗಿ ಉಳಿದುಕೊಳ್ಳುತ್ತದೆ, ಆದರೆ ಕೆಲವೊಂದು ಹಂತಗಳಿಂದ ಮುಕ್ತಿಪಡೆದ ಹಾಗಿರುತ್ತದೆ. ವಾಸ್ತವದಲ್ಲಿ ಅವುಗಳ ಮೇಲೆ ಎಷ್ಟೊಂದು ಹಗುರಾಗಿ ಸಾಗಿ ಹೋಗಲಾಗುತ್ತದೆ ಎಂದರೆ ಅವುಗಳನ್ನು ಗಮನಕ್ಕೆ ತಂದುಕೊಳ್ಳುವುದನ್ನು ತಪ್ಪಿಸಿಕೊಳ್ಳಲಾಗುತ್ತದೆ, ಅದಕ್ಕೆ ಕಡಿಮೆ ಸಮಯ ಸಾಕಾಗುತ್ತದೆ. ಆದ್ದರಿಂದ ಅದನ್ನು ಏಕಾಗ್ರಗೊಂಡ ಇಲ್ಲವೆ ಸಂಕ್ಷೇಪಿಸಿದ ವಿಧಾನ ಎಂದು ಕರೆಯಲಾಗುತ್ತದೆ.

**(CWSA, 11/1378)** **– ಶ್ರೀ ಅರವಿಂದರು**

*

**10–9–1926**

**ಪ್ರಶ್ನೆ :** *ತಂತ್ರದಲ್ಲಿ ಸಾಂಕೇತಿಕತೆ ಇದೆ ಎಂದು ತೋರಿಬರುತ್ತದೆ: ಅಲ್ಲಿ ಭಿನ್ನ ಚಕ್ರಗಳಿವೆ, ಕೇಂದ್ರಗಳಿವೆ – ಅವು ಒಂದರ ನಂತರ ಒಂದರಂತೆ ತೆರೆದುಕೊಳ್ಳುತ್ತವೆ.*

**ಶ್ರೀ ಅರವಿಂದರು :** ಯಾವುದು ಮೊದಲು ತೆರೆದುಕೊಳ್ಳಬೇಕು ಎಂಬುದಕ್ಕೆ ನಿರ್ದಿಷ್ಟ ನಿಯಮವಿಲ್ಲ. ಹೃದಯ ಚೈತ್ಯ ಕೇಂದ್ರವಾಗಿದೆ ಮತ್ತು ಅದು ಮೊದಲು ತೆರೆದುಕೊಂಡರೆ ಅದು ಬಹಳ ಒಳ್ಳೆಯ ತೆರೆದಿರಿಸಿಕೊಳ್ಳುವಿಕೆ.

**(Evening Talks)**

*



# ಸಮಗ್ರ ಯೋಗ ಹಾಗೂ ತಂತ್ರ

## ಸಮಗ್ರ ಯೋಗದಲ್ಲಿ ವೇದಾಂತ ಮತ್ತು ತಂತ್ರ ಇವುಗಳ ಸಮನ್ವಯ

ನಾವು ಅನುಸರಿಸುತ್ತ ಬಂದಿರುವ ಸಮನ್ವಯದ ವಿಧಾನದಲ್ಲಿ ತತ್ವದ ಮತ್ತೊಂದು ಸುಳಿವನ್ನು ಬೆಂಬತ್ತಲಾಗಿದೆ, ಅದನ್ನು ಯೋಗದ ಸಾಧ್ಯತೆಗಳ ಮತ್ತೊಂದು ದೃಷ್ಟಿಕೋನದಿಂದ ಊಹಿಸಲಾಗಿದೆ. ತಂತ್ರದ ಗುರಿಯತ್ತ ತಲುಪಲು ಇದು ವೇದಾಂತದ ವಿಧಾನದಿಂದ ಪ್ರಾರಂಭವಾಗುತ್ತದೆ. ತಾಂತ್ರಿಕ ವಿಧಾನದಲ್ಲಿ ಶಕ್ತಿ ಎಲ್ಲ ಮಹತ್ವ ಪಡೆದಿದೆ, ಆತ್ಮವನ್ನು ಕಂಡುಹಿಡಿಯುವುದಕ್ಕೆ ಬೀಗದ ಕೈಯಾಗುತ್ತದೆ, ಈ ಸಮನ್ವಯದಲ್ಲಿ ಆತ್ಮ ಎಲ್ಲ ಮಹತ್ವವುಳ್ಳ ವಿಷಯ, ಅದು ಶಕ್ತಿಯನ್ನು ಕೈಗೆತ್ತಿಕೊಳ್ಳುವುದರ ರಹಸ್ಯವಾಗಿರುತ್ತದೆ. ತಾಂತ್ರಿಕ ವಿಧಾನ ಆರೋಹಣದ ಏಣಿಯ ತಳದಿಂದ ಪ್ರಾರಂಭವಾಗುತ್ತದೆ ಮತ್ತು ಅದರ ಮೇಲೆ ಬೇರೆ, ಬೇರೆ ದರ್ಜೆಗಳತ್ತ ಮೇಲಕ್ಕೇರಿ ಶಿಖರದತ್ತ ಹೋಗುತ್ತದೆ. ಹಾಗಾಗಿ ಅದರ ಪ್ರಾರಂಭದ ಒತ್ತು ಎಚ್ಚತ್ತುಕೊಂಡ ಶಕ್ತಿಯ ಕ್ರಿಯೆಯ ಮೇಲಿರುತ್ತದೆ, ಆ ಶಕ್ತಿ ದೇಹದ ನರಗಳು ಹಾಗೂ ಕೇಂದ್ರಗಳು ಇವುಗಳ ಮೇಲಿರುತ್ತದೆ; ಆರು ಕಮಲಗಳನ್ನು ತೆರೆದಿರಿಸುವುದು ಆತ್ಮದ ಸಾಮರ್ಥ್ಯದ ಪಂಕ್ತಿಗಳನ್ನು ತೆರೆದಿರಿಸುವುದಾಗಿರುತ್ತದೆ. ನಮ್ಮ ಸಮನ್ವಯ ಮನುಷ್ಯನನ್ನು ದೇಹದಲ್ಲಿರುವ ಆತ್ಮ ಎಂದು ತಿಳಿಯುವುದರ ಬದಲಾಗಿ ಮನಸ್ಸಿನಲ್ಲಿರುವ ಆತ್ಮ ಎಂದು ಮತ್ತು ಆ ಹಂತದಿಂದ ಪ್ರಾರಂಭಿಸಲು ಅವನಲ್ಲಿ ಕ್ಷಮತೆ ಇದೆ ಎಂದು ಸ್ವೀಕರಿಸುತ್ತದೆ; ಆ ಕ್ಷಮತೆಯಿಂದಾಗಿ ಮನಸ್ಸಿನಲ್ಲಿರುವ ಆತ್ಮದ ಸಾಮರ್ಥ್ಯದಿಂದ ತನ್ನನ್ನು ನೇರವಾಗಿ ಉಚ್ಚತರ ಆಧ್ಯಾತ್ಮಿಕ ಶಕ್ತಿ ಹಾಗೂ ಸತ್ತೆಗೆ ತೆರೆದುಕೊಳ್ಳಲು ಸಾಧ್ಯವಾಗುತ್ತದೆ, ಮತ್ತು ಅದರ ಮೂಲಕ ಆ ರೀತಿ ಆ ಶಕ್ತಿಯನ್ನು ವಶವರ್ತಿ ಮಾಡಿಕೊಂಡು ಮತ್ತು ಕ್ರಿಯೆಯಲ್ಲಿ ತೆಗೆದು–ಕೊಂಡು ಬಂದು ಇಡೀ ಸ್ವಭಾವವನ್ನು ಪರಿಪೂರ್ಣಗೊಳಿಸುವಂತಾಗುತ್ತದೆ. ಆ ಕಾರಣದಿಂದಾಗಿ ನಮ್ಮ ಪ್ರಾರಂಭದ ಒತ್ತು ಮನಸ್ಸಿನಲ್ಲಿರುವ ಆತ್ಮದ ಸಾಮರ್ಥ್ಯಗಳನ್ನು ಉಪಯೋಗಿಸುವುದರಲ್ಲಿದೆ ಮತ್ತು ಆತ್ಮದಲ್ಲಿರುವ ಕೀಲಿಗಳಲ್ಲಿ, ಜ್ಞಾನ, ಕರ್ಮ ಹಾಗೂ ಭಕ್ತಿಗಳ ಮೂರು ಬಗೆಯ ಬೀಗದ ಕೈಗಳನ್ನು ತಿರುಗಿಸುವುದರಲ್ಲಿದೆ. ಹಟ ಯೋಗದ ವಿಧಾನಗಳನ್ನು ಕೈಬಿಡಬಹುದು, ಆದಾಗ್ಯೂ ಅವುಗಳ ಭಾಗಶಃ ಉಪಯೋಗಕ್ಕೆ ಅಡ್ಡಿಯಿರುವುದಿಲ್ಲ – ರಾಜ ಯೋಗದ ಸಂಕಲ್ಪ ಕೇವಲ ಔಪಚಾರಿಕ ಅಂಶವಾಗಿ ಒಳಗೆ ಪ್ರವೇಶ ಮಾಡುತ್ತದೆ. ಆಧ್ಯಾತ್ಮಿಕ ಸಾಮರ್ಥ್ಯ ಹಾಗೂ ಸತ್ತೆ ಇವುಗಳ ಅತ್ಯಂತ ಹೆಚ್ಚಿನ ಅಭಿವೃದ್ಧಿಯನ್ನು ಅತಿ ಚಿಕ್ಕ ಮಾರ್ಗದಿಂದ

ತಲುಪುವುದು ಮತ್ತು ಮಾನವ ಜೀವನದ ಇಡೀ ವ್ಯಾಪ್ತಿಯಲ್ಲಿರುವ ಮುಕ್ತವಾದ ಸ್ವಭಾವವನ್ನು ದೈವೀಕರಣಗೊಳಿಸುವುದು ನಮ್ಮ ಸ್ಫೂರ್ತಿನೀಡುವ ಉದ್ದೇಶವಾಗಿದೆ. **(CWSA, 23/612–13)**

*

**ಕುಂಡಲಿನಿ, ಚಕ್ರಗಳು ಹಾಗೂ ಸಮಗ್ರ ಯೋಗ**

ಈ ಯೋಗದಲ್ಲಿ ದೈವೀ ಶಕ್ತಿಯ ಆರೋಹಣ ಹಾಗೂ ಅವರೋಹಣಗಳು, ತಂತ್ರ ಗ್ರಂಥಗಳಲ್ಲಿ ವಿಧಿಸಿ ಇಡಲಾದ ವಿವರಗಳನ್ನು ಅವಶ್ಯವಾದ ವಾಚೋ ವಿಧೇಯವಾಗಿ ಹೇಳುವುದು (reproduction) ಇಲ್ಲದೆ, ತಮ್ಮದೇ ರೀತಿಯಲ್ಲಿ ನೆರವೇರಿಸಿಕೊಳ್ಳುವವು. ಬಹಳಷ್ಟು ಜನರು ಕೇಂದ್ರಗಳ ಬಗ್ಗೆ ಅರಿವುಳ್ಳವರಾಗುವರು, ಆದರೆ ಇತರರು ಸರಳವಾಗಿ ಸರ್ವಸಾಧಾರಣ ರೀತಿಯಲ್ಲಿ ಹಂತದಿಂದ ಹಂತಕ್ಕೆ ಆಗುವ ಆರೋಹಣ ಮತ್ತು ಅವರೋಹಣದ ಬಗ್ಗೆ, ಆದರೆ ಹೆಚ್ಚಾಗಿ ಕೇಂದ್ರದಿಂದ ಕೇಂದ್ರಕ್ಕಾಗಿರುವ ಆರೋಹಣದ ಬಗ್ಗೆ ಅಲ್ಲ, ಭಾವನೆ ತಂದುಕೊಳ್ಳುವರು, ಎಂದರೆ ದೈವೀ ಶಕ್ತಿ ಮೊದಲು ಶಿರದ ಮೇಲೆ ಅವರೋಹಣ ಮಾಡುವುದನ್ನು, ನಂತರ ಹೃದಯದತ್ತ, ಆ ನಂತರ ನಾಭಿ ಮತ್ತು ಅದಕ್ಕೂ ಕೆಳಗಿರುವುದರತ್ತ ಅವರೋಹಣ ಮಾಡುವುದನ್ನು ಭಾವನೆಗೆ ತಂದುಕೊಳ್ಳುತ್ತಾರೆ. ತಾಂತ್ರಿಕ ವರ್ಣನೆಯ ಪ್ರಕಾರ ಕೇಂದ್ರಗಳಲ್ಲಿರುವ ದೇವತೆಗಳ ಬಗ್ಗೆ ಅರಿವುಳ್ಳವರಾಗುವ ಆವಶ್ಯಕತೆ ಇಲ್ಲ, ಆದರೆ ಭಿನ್ನ ಕೇಂದ್ರಗಳಲ್ಲಿ ಶ್ರೀಮಾತೆಯವರು ಇರುವುದನ್ನು ಕೆಲವರು ಭಾವನೆಗೆ ತಂದುಕೊಳ್ಳುತ್ತಾರೆ. ಈ ವಿಷಯಗಳಲ್ಲಿ ನಮ್ಮ ಸಾಧನೆ ಗ್ರಂಥಗಳಲ್ಲಿ ಕೊಟ್ಟ ಜ್ಞಾನಕ್ಕೆ ಭದ್ರವಾಗಿ ಅಂಟಿಕೊಳ್ಳುವುದಿಲ್ಲ, ಆದರೆ ಹಿಂದಿರುವ ಕೇಂದ್ರ ಸತ್ಯವನ್ನು ಕಾಪಾಡಿಕೊಂಡು ಬರುತ್ತದೆ ಮತ್ತು ಅದನ್ನು ಸ್ವತಂತ್ರವಾಗಿ, ಹಳೆಯ ರೂಪಗಳು ಹಾಗೂ ಸಂಕೇತಗಳಿಗೆ ಅಧೀನವಾಗದೆ, ಸಿದ್ಧಿಸಿಕೊಳ್ಳುತ್ತದೆ. ಕೇಂದ್ರಗಳಿಗೇ ಸ್ವತಃ ತಾಂತ್ರಿಕ ಗ್ರಂಥಗಳಲ್ಲಿ ಕೊಟ್ಟ ಅರ್ಥ ವಿವರಣೆಗಿಂತ ಭಿನ್ನವಾದ ಅರ್ಥ ವಿವರಣೆ ಇಲ್ಲಿದೆ.

ಎಚ್ಚತ್ತುಕೊಂಡ ಕುಂಡಲಿನಿ ಕೇಂದ್ರಗಳ ಮೂಲಕ ಮೇಲಕ್ಕೇರಿ ಹೋಗುವ ಮತ್ತು ಕೇಂದ್ರಗಳನ್ನು ಶುದ್ಧೀಕರಣಕ್ಕೆ ಒಳಪಡಿಸುವ ವಿಧಾನ ತಾಂತ್ರಿಕ ಜ್ಞಾನಕ್ಕೆ ಸೇರಿದುದಾಗಿದೆ. ನಮ್ಮ ಯೋಗದಲ್ಲಿ ವಿಧಿಸಿದ ವಿಧಾನದ ಮೂಲಕ ಕೇಂದ್ರಗಳನ್ನು ತೆರೆದಿರಿಸುವುದು ಹಾಗೂ ಶುದ್ಧೀಕರಣಕ್ಕೆ ಒಳಪಡಿಸುವುದು ಕೂಡ ಇಲ್ಲ. ಬೇರೊಂದು ವಿಧಾನವನ್ನು ಉಪಯೋಗಿಸಲಾಗುತ್ತದೆ, ಆದಾಗ್ಯೂ ಮೇಲ್ಗಡೆಗಿರುವ



ಉಚ್ಚತರ ಪ್ರಜ್ಞೆಯನ್ನು ಕೂಡಿಕೊಳ್ಳಲು ಹಂತದಿಂದ ಹಂತಕ್ಕೆ, ಹಂತಗಳ ಮೂಲಕ ಪ್ರಜ್ಞೆಯ ಆರೋಹಣವಿದೆ, ಅಲ್ಲಿ ಕೇಂದ್ರಗಳು ಹಾಗೂ ಸ್ತರಗಳು ತೆರೆದು–ಕೊಳ್ಳುವುದಿದೆ (ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಸ್ತರಗಳು), ಈ ಸ್ತರಗಳು ಕೇಂದ್ರಗಳ ಅಧೀನದಲ್ಲಿರುತ್ತವೆ. ಆಧ್ಯಾತ್ಮಿಕ ಪರಿವರ್ತನೆಯ ಮುಖ್ಯ ಬೀಗದ ಕೈಯಾದ ಅವರೋಹಣವಿದೆ. ಹಾಗಾಗಿ ಈ ಯೋಗದಲ್ಲಿ ಪರಿವರ್ತನೆಯ ವಿಧಾನದ ಹಿಂದೆ ತಾಂತ್ರಿಕ ಜ್ಞಾನವಿದೆ ಎಂದು ನಾನು ಹೇಳಿದ್ದೇನೆ.

ಸಮಗ್ರ ಯೋಗದಲ್ಲಿ ಸಂಕಲ್ಪಿಸಿ ಚಕ್ರಗಳನ್ನು ತೆರೆದಿರಿಸುವುದು ಇರುವುದಿಲ್ಲ. ದೈವೀ ಶಕ್ತಿಯ ಅವರೋಹಣದಿಂದ ಅವು ತಾವೇ ತೆರೆದುಕೊಳ್ಳುತ್ತವೆ. ತಾಂತ್ರಿಕ ಶಿಸ್ತುಪಾಲನೆಯಲ್ಲಿ ಅವು ಕೆಳಗಿನಿಂದ ಮೇಲ್ಗಡೆಯತ್ತ ತೆರೆದುಕೊಳ್ಳುತ್ತವೆ, ಮೂಲಾಧಾರ ಮೊದಲು ತೆರೆದುಕೊಳ್ಳುತ್ತದೆ – ನಮ್ಮ ಯೋಗದಲ್ಲಿ ಅವು ಮೇಲ್ಗಡೆಯಿಂದ ಕೆಳಗಡೆಗೆ ತೆರೆದುಕೊಳ್ಳುತ್ತವೆ. ಆದರೆ ಮೂಲಾಧಾರದಿಂದ ಶಕ್ತಿಯ ಆರೋಹಣ ಸಂಭವಿಸಲೇಬೇಕು.

*

ಕುಂಡಲಿನಿಯ ಆರೋಹಣ – ಅದರ ಅವರೋಹಣ ನನಗೆ ತಿಳಿದ ಮಟ್ಟಿಗೆ ಇಲ್ಲ – ಗುರುತಿಸಲಾದ ಇಂದ್ರಿಯಗ್ರಾಹ್ಯ ವಿಷಯ; ಅದಕ್ಕೆ ಅನುಗುಣವಾದದ್ದು ನಮ್ಮ ಯೋಗದಲ್ಲಿದೆ: ಅದು ಉಚ್ಚತರ ಪ್ರಜ್ಞೆಯನ್ನು ಭೇಟಿ ಮಾಡಲು ಪ್ರಜ್ಞೆ ಪ್ರಾಣಿಕ ಇಲ್ಲವೆ ಭೌತಿಕ ಸ್ತರದಿಂದ ಆರೋಹಣ ಮಾಡುತ್ತಿರುವ ಭಾವನೆ ತಂದು–ಕೊಳ್ಳುವುದಾಗಿದೆ, ಇದು ಅವಶ್ಯವಾಗಿ ಚಕ್ರಗಳ ಮೂಲಕ ಆಗಬೇಕಾಗಿರುವುದಿಲ್ಲ, ಆದರೆ ಬಹಳಷ್ಟು ಸಲ ಇಡೀ ದೇಹದಲ್ಲಿ ಅದರ ಬಗ್ಗೆ ಭಾವನೆ ಬರುತ್ತದೆ. ಹಾಗೆಯೇ ಉಚ್ಚತರ ಪ್ರಜ್ಞೆಯ ಅವರೋಹಣ ಅವಶ್ಯವಾಗಿ ಇಲ್ಲವೆ ಸಾಮಾನ್ಯವಾಗಿ ಚಕ್ರಗಳ ಮೂಲಕ ಭಾವನೆಗೆ ಬರುವುದಿಲ್ಲ, ಆದರೆ ಇಡೀ ಶಿರವನ್ನು, ಕುತ್ತಿಗೆಯನ್ನು ಎದೆ, ಹೊಟ್ಟೆ, ದೇಹ ಇವೆಲ್ಲವನ್ನೂ ಆವರಿಸಿಕೊಂಡ ಭಾವನೆ ಬರುತ್ತದೆ.

*

ತಂತ್ರ ಪದ್ಧತಿಯಲ್ಲಿ ಒಂದು ವಿಶೇಷ ವಿಧಾನದಿಂದ ಚಕ್ರಗಳನ್ನು ತೆರೆದಿರಿಸಲಾಗುತ್ತದೆ ಹಾಗೂ ಕುಂಡಲಿನಿಯನ್ನು ಜಾಗ್ರತಗೊಳಿಸಲಾಗುತ್ತದೆ, ಅದರ ಆರೋಹಣದ ಕ್ರಿಯೆಯ ಬಗ್ಗೆ ಬೆನ್ನೆಲುಬಿನ ಮೂಲಕ ಭಾವನೆ ತಂದು–ಕೊಳ್ಳಲಾಗುತ್ತದೆ. ನಮ್ಮ ಯೋಗದಲ್ಲಿ ಮೇಲ್ಗಡೆಗಿರುವ ದೈವೀ ಶಕ್ತಿಯ ಒತ್ತಡ ಕುಂಡಲಿನಿಯನ್ನು ಜಾಗ್ರತಗೊಳಿಸುತ್ತದೆ ಮತ್ತು ಕೇಂದ್ರಗಳನ್ನು ತೆರೆದಿರಿಸುತ್ತದೆ.

ಅಲ್ಲಿ ಮೇಲ್ಗಡೆಗಿರುವ ಉಚ್ಚತರ ಪ್ರಜ್ಞೆಯನ್ನು ಕೂಡಿಕೊಳ್ಳುವವರೆಗೆ ಮೇಲ್ಗಡೆ ಸಾಗುವ ಪ್ರಜ್ಞೆಯ ಆರೋಹಣವಿರುತ್ತದೆ. ಇದು ತನ್ನನ್ನು ಪುನರಾವರ್ತಿಸುತ್ತದೆ (ಕೆಲವೊಮ್ಮೆ ಅವರೋಹಣವಾಗುತ್ತಿರುವುದರ ಭಾವನೆ ಕೂಡ ಬರುತ್ತದೆ), ಈ ಪುನರಾವರ್ತನೆ ಎಲ್ಲ ಕೇಂದ್ರಗಳು ತೆರೆದುಕೊಳ್ಳುವವರೆಗೆ ಮತ್ತು ಪ್ರಜ್ಞೆ ದೇಹದ ಮೇಲೇರಿ ಹೋಗುವವರೆಗೆ ಇರುತ್ತದೆ. ನಂತರದ ಹಂತದಲ್ಲಿ ಅದು ಮೇಲ್ಗಡೆ ಉಳಿದುಕೊಳ್ಳುತ್ತದೆ ಮತ್ತು ವಿಶ್ವವ್ಯಾಪಿ ಪ್ರಜ್ಞೆ ಮತ್ತು ವಿಶ್ವಂಭರ ದಿವ್ಯಾತ್ಮ ಇವುಗಳಲ್ಲಿ ವಿಸ್ತರಿಸುತ್ತ ಹೋಗುತ್ತದೆ. ಇದು ಸಾಮಾನ್ಯವಾಗಿ ಆಗುವ ಮುಂದುವರಿಕೆ, ಆದರೆ ಕೆಲವೊಮ್ಮೆ ಆ ವಿಧಾನ ಹೆಚ್ಚು ತೀವ್ರಗತಿಯದಾಗುತ್ತದೆ ಮತ್ತು ಮೇಲ್ಗಡೆಯಲ್ಲಿ ಒಮ್ಮೆಗೆ ಆಗುವ ಮತ್ತು ನಿರ್ಧಾರಕ ತೆರೆದಿರಿಸಿಕೊಳ್ಳುವಿಕೆ ಇರುತ್ತದೆ.

*

ಅದು ಸುತ್ತಿಕೊಳ್ಳುವ ಹಾಗೂ ಲಯಬದ್ಧವಾಗಿ ಕಂಪಿಸುವ ಚಲನೆಯಿಂದ ಏರಿ ಹೋಗುವ ನಾಭಿ ಪ್ರದೇಶದಲ್ಲಿರುವ ಒಂದು ಶಕ್ತಿ ಬ್ರಹ್ಮರಂಧ್ರದತ್ತ ಮೇಲಕ್ಕೇರಿ ಹೋಗುವ ಕುಂಡಲಿನಿ ಎಂಬುದರ ಅರ್ಥ.– ಇಡಿಯದಾಗಿ ಅಲ್ಲ, ಆದರೆ ಮೂಲಾಧಾರದಿಂದ ಅದರ ಒಂದಿಷ್ಟನ್ನು ಬಿಡುಗಡೆ ಮಾಡಲಾಗಿರುತ್ತದೆ, ಅದು ಸುತ್ತುತ್ತ ಕಂಪನಗಳೊಂದಿಗೆ ಮೇಲ್ಗಡೆ ಸಾಗುತ್ತದೆ. ಆ ರೀತಿಯ ಭಾವನೆ ಯಾವಾಗಲೂ ಬರುವುದಿಲ್ಲ. ಕೆಲವೊಮ್ಮೆ ಮನುಷ್ಯ ಸರಳ ರೀತಿಯಲ್ಲಿ ಒಂದು ಬಗೆಯ ತರಂಗಗಳು ಇಲ್ಲವೆ ದೈವೀ ಶಕ್ತಿ ಮೇಲಕ್ಕೇರುತ್ತಿರುವುದರ ಇಲ್ಲವೆ ಪ್ರಜ್ಞೆಯ ಆರೋಹಣದ ಚಲನೆಯಿರುವುದರ ಭಾವನೆ ತಂದುಕೊಳ್ಳುತ್ತಾನೆ. ಆದರೆ ಎಲ್ಲ ಸಂದರ್ಭಗಳಲ್ಲಿ, ಚಕ್ರಗಳಲ್ಲಿ ಮುಚ್ಚಿದ ಯೌಗಿಕ ಪ್ರಜ್ಞೆಯನ್ನು ಬಿಡುಗಡೆ ಮಾಡುವುದಾಗಿರುತ್ತದೆ, ಮತ್ತು ಅದರ ಆರೋಹಣ ಮೇಲ್ಗಡೆಗಿರುವ ದೈವೀ ಪ್ರಜ್ಞೆಯನ್ನು ಭೇಟಿ ಮಾಡುವುದಕ್ಕಾಗಿ ಇರುತ್ತದೆ. ಇದು ಮತ್ತು ಇದಕ್ಕೆ ಅನುಗುಣವಾದ ಮೇಲ್ಗಡೆಯಿಂದಾಗುವ ಅವರೋಹಣ ಇವು ಯೌಗಿಕ ಅನುಭವ ಹಾಗೂ ಸಿದ್ಧಿ ಸಾಧ್ಯವಾಗುವಂತೆ ಮಾಡುತ್ತವೆ.

*

ಕುಂಡಲಿನಿ ಮೂಲಾಧಾರದಲ್ಲಿ ನಿದ್ರಿಸುತ್ತಿರುವ ಯೌಗಿಕ ಶಕ್ತಿಯಾಗಿದೆ, ಬೇರೆ ಕೇಂದ್ರಗಳಲ್ಲಿ ಅದು ಸರ್ವಸಾಧಾರಣ ಪ್ರಜ್ಞೆಯ ಆವರಣಕ್ಕೊಳಗಾಗಿದೆ. ಅದನ್ನು ಮುಕ್ತಗೊಳಿಸಿದಾಗ ಮೇಲ್ಗಡೆಗಿರುವ ಬ್ರಾಹ್ಮಿಕ ಪ್ರಜ್ಞೆಯನ್ನು ಕೂಡಿಕೊಳ್ಳಲು ಮೇಲಕ್ಕೇರಿ ಹೋಗುತ್ತದೆ. ಕೇಂದ್ರಗಳ ಮೂಲಕ ಸಾಗಿ ಹೋಗುತ್ತದೆ.

*



ಶಿರದ ಮೇಲೆ ಯಾವುದೇ ಬಗೆಯ ಕುಂಡಲಿನಿ ಶಕ್ತಿ ಇಲ್ಲ. ಶಿರದ ಮೇಲೆ ವಿಶ್ವಂಭರ ಇಲ್ಲವೆ ದೈವೀ ಪ್ರಜ್ಞೆ ಮತ್ತು ದೈವೀ ಶಕ್ತಿ ಇವೆ. ಕುಂಡಲಿನಿ ಅವ್ಯಕ್ತ ಸಾಮರ್ಥ್ಯವಾಗಿದ್ದು ಚಕ್ರಗಳಲ್ಲಿ ನಿದ್ರಿಸುತ್ತಿರುತ್ತದೆ.

*

ಕುಂಡಲಿನಿಯೊಳಗಿರುವ ಶಕ್ತಿ ಶ್ರೀಮಾತೆಯವರದಾಗಿದೆ.

**– ಶ್ರೀ ಅರವಿಂದರು**

*

**ಲೈಂಗಿಕ ಪ್ರಚೋದನೆಯ ಮೇಲೆ ಪ್ರಭುತ್ವ ಸಾಧಿಸುವುದರ ಆವಶ್ಯಕತೆ**

**ಪ್ರಶ್ನೆ :** *ನಮ್ಮ ಯೋಗದಲ್ಲಿ ನಾವು ಸ್ವಭಾವದ ನಿಮ್ನತರ ಚಲನೆಯನ್ನು ನಿಲ್ಲಿಸಬೇಕು, ಅದು ಸಾಧನೆಗೆ ಅಡೆತಡೆ ಉಂಟುಮಾಡುತ್ತದೆ, ಆದರೆ ತಾಂತ್ರಿಕರು, ಅವರಲ್ಲಿಯೂ ವಿಶೇಷವಾಗಿ ವೀರಸಾಧಕರು ಈ ಅಡೆತಡೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ ಮತ್ತು ಇವುಗಳ ಸಹಾಯ ಪಡೆದು ಅವರು ಆಧ್ಯಾತ್ಮಿಕ ಜೀವನದ ನಿರ್ಮಾಣ ಮಾಡುತ್ತಾರೆ.*

**ಶ್ರೀ ಅ :** ಲೈಂಗಿಕ ಕ್ರಿಯೆ ನೀತಿಬೋಧಕರು ನಂಬಿರುವಷ್ಟರ ಮಟ್ಟಿಗೆ ಸ್ವತಃ ಅದರಲ್ಲಿಯೇ ಕೆಟ್ಟದ್ದಾಗಿರುವುದಿಲ್ಲ ಅದು ಸ್ವಭಾವದ ಒಂದು ಚಲನೆ. ಅದು ಕೆಟ್ಟದ್ದಾದುದೂ ಅಲ್ಲ, ಒಳ್ಳೆಯದೂ ಅಲ್ಲ, ಆದರೆ ಯೌಗಿಕ ದೃಷ್ಟಿಕೋನದಿಂದ ಲೈಂಗಿಕ ಚಲನೆ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ಶಕ್ತಿಯಾಗಿದೆ ಮತ್ತು ಅದನ್ನು ಸರಿಯಾಗಿ ಉಪಯೋಗಿಸಿದರೆ ಸತ್ತೆಯನ್ನು ಪುನಸ್ಸೃಷ್ಟಿ ಮಾಡುವುದಕ್ಕೆ, ಅದರ ಆತ್ಮೋನ್ನತಿಗೆ ಅದು ಸಹಾಯ ಮಾಡುತ್ತದೆ. ಆದರೆ ಸಾಮಾನ್ಯ ರೀತಿಯಲ್ಲಿ ಅದರಲ್ಲಿ ಲೋಲುಪರಾದರೆ ಎರಡು ಕಾರಣಗಳಿಂದಾಗಿ ಅದು ಅತಿ ದೊಡ್ಡ ಅಡೆತಡೆ–ಯಾಗುತ್ತದೆ. ಮೊದಲನೆಯದಾಗಿ ಲೈಂಗಿಕ ಕ್ರಿಯೆ ಪ್ರಾಣಿಕ ಶಕ್ತಿಯ ದೊಡ್ಡ ಹಾನಿಯನ್ನು ಒಳಗೊಳ್ಳುತ್ತದೆ, ಅದು ಮೃತ್ಯುವಿನತ್ತ ಸಾಗುವ ಚಲನೆ, ಆದಾಗ್ಯೂ ಹೊಸ ಜೀವನದ ಸೃಷ್ಟಿಯ ಮೂಲಕ ನಷ್ಟ ತುಂಬಿಕೊಡುತ್ತದೆ. ಅದು ಮೃತ್ಯುವಿನತ್ತ ಒಂದು ಚಲನೆ ಎಂಬುದನ್ನು ಆ ಕ್ರಿಯೆಯ ನಂತರ ಉಂಟಾಗುವ ದಣಿವು ಸಿದ್ಧಪಡಿಸುತ್ತದೆ. ಹಲವಾರು ಜನರು ಅದರ ಬಗ್ಗೆ ಜುಗುಪ್ಸೆಯ ಭಾವನೆ ತಂದುಕೊಳ್ಳುತ್ತಾರೆ.

ಎರಡನೆಯ ಕಾರಣ ಹೀಗಿದೆ: ಸಾಮಾನ್ಯ ರೀತಿಯ ಲೈಂಗಿಕ ಕ್ರಿಯೆಯ ಜೊತೆಗಿರುವ ಉದ್ರೇಕ ಮನುಷ್ಯನ ಚೈತ್ಯಾತ್ಮಿಕ ಸಾಧ್ಯತೆಗಳನ್ನು ಹಾಳು ಮಾಡುತ್ತದೆ. ಪ್ರಜ್ಞೆಯ ಉಚ್ಚತರ ಕೇಂದ್ರಗಳಿಂದ ಅವನು ಪ್ರತ್ಯೇಕಗೊಳ್ಳುತ್ತಾನೆ, ಸಂಬಂಧ ಕಡಿದುಕೊಳ್ಳುತ್ತಾನೆ ಮತ್ತು ಕೆಳಮುಖವಾಗಿ ಸಾಗುತ್ತಾನೆ. ಜನರು ಹೇಳುತ್ತಾರೆ: ಅವುಗಳ ಮೂಲಕ ಭೋಗವನ್ನು ಕೈಗೆತ್ತಿಕೊಂಡು ದೈವೀ ಶಕ್ತಿಯ ಮನೋ–ಭಾವವನ್ನು ಇಟ್ಟುಕೊಳ್ಳುತ್ತೇವೆ ಎಂದು, ಆದರೆ ಅದು ಮಾತನಾಡುವ ಒಂದು ರೀತಿ. ಜನರು ನಿಮ್ನತರ ಚಲನೆಗಳಲ್ಲಿ ಲೋಲುಪರಾಗುತ್ತಾರೆ, ವಿರೋಧೀ ಶಕ್ತಿಗಳಿಗೆ ಶರಣಾಗುತ್ತಾರೆ ಮತ್ತು ಅದೇ ವೇಳೆಗೆ ತಾವು ಯೋಗಿಗಳೆಂದು ಹೇಳಿಕೊಳ್ಳುತ್ತಾರೆ. ಬಹಳಷ್ಟು ಸಲ ವೇದಾಂತಿಕ ಮನೋಭಾವವನ್ನು ಬಹಳಷ್ಟು ಸಲ ವಿರೋಧೀ ಶಕ್ತಿಗಳಿಗೆ ಶರಣಾಗುವುದಕ್ಕೆ ಒಂದು ನೆಪವನ್ನಾಗಿ ಮಾಡುತ್ತಾರೆ. "ಇದೆಲ್ಲವೂ ಮಾಯೆ, ಭ್ರಮೆ, ಅಲ್ಲಿ ಸದ್ಗುಣವೂ ಇಲ್ಲ, ಪಾಪವಿಲ್ಲ, ಒಳ್ಳೆಯದಿಲ್ಲ, ಅನಿಷ್ಟವಿಲ್ಲ" ಎಂದು ಅವರು ಹೇಳುತ್ತಾರೆ ಮತ್ತು ತಮ್ಮನ್ನು ನಿಮ್ನತರ ಪ್ರಾಣಿಕ ಶಕ್ತಿಗಳಿಗೆ ಕೊಟ್ಟುಕೊಳ್ಳುತ್ತಾರೆ.

**ಪ್ರಶ್ನೆ :** *ಸ್ವಭಾವದ ನಿಮ್ನತರ ಚಲನೆಗಳು ಸ್ವತಃ ವಿರೋಧಿ ಸ್ವರೂಪದವಾಗಿರುವ–ದಿಲ್ಲವೆ?*

**ಶ್ರೀ ಅ :** ಇಲ್ಲ, ಅವು ವಿರೋಧಿ ಶಕ್ತಿಗಳಿಗೆ ಒಂದು ತೆರೆದಿರುಸುವಿಕೆಯನ್ನು ಅರ್ಪಿಸುತ್ತವೆ ಮತ್ತು ವಿರೋಧಿ ಶಕ್ತಿಗಳು ಈ ನಿಮ್ನತರ ಚಲನೆಗಳನ್ನು ತಮ್ಮದೇ ಉದ್ದೇಶಕ್ಕಾಗಿ ಬಳಸುತ್ತವೆ.

**ಪ್ರಶ್ನೆ :** *ಲೈಂಗಿಕ ಕ್ರಿಯೆಯ ಕೆಳಮಟ್ಟಕ್ಕಿಳಿಸುವ ಪರಿಣಾಮಗಳನ್ನು ಕುರಿತು ಹೇಳುವುದಾದರೆ ಲಗ್ನ ಹಾಗೂ ಕಾನೂನಿನ ಅನುಮತಿ ಇವು ಯಾವುದೇ ಬಗೆಯ ವ್ಯತ್ಯಾಸವನ್ನುಂಟು ಮಾಡುವವೇ?*

**ಶ್ರೀ ಅ :** ಎಳ್ಳಷ್ಟೂ ಇಲ್ಲ. ಈ ನೈತಿಕ ಕಟ್ಟಳೆಗಳು ಸಮಾಜವನ್ನು ಕಾಪಾಡಿಕೊಂಡು ಬರುವುದಕ್ಕಾಗಿ, ಜನ್ಮತಾಳಿದ ಮಕ್ಕಳ ಯೋಗಕ್ಷೇಮಕ್ಕಾಗಿ ಇವೆ, ಆದರೆ ಯೌಗಿಕ ಜೀವನವನ್ನು ಕುರಿತು ಹೇಳುವುದಾದರೆ ಮನುಷ್ಯ ತನ್ನ ಪತ್ನಿಯೊಂದಿಗೆ ನಡೆಸುವ ಲೈಂಗಿಕ ಕ್ರಿಯೆ ಬೇರೆ ಯಾವ ಸ್ತ್ರೀಯೊಂದಿಗೆ ನಡೆಸುವಷ್ಟೇ ಹಾನಿಕಾರಕವಾಗಿದೆ.

**(ಸಾಯಂಕಾಲದ ಮಾತುಕತೆಗಳು: ಪು. 118–19)**

*



## ಲೈಂಗಿಕ ಪ್ರಚೋದನೆಯನ್ನು ರೂಪಾಂತರಗೊಳಿಸುವುದರ ಆವಶ್ಯಕತೆ

ಒರಟು ಭೌತಿಕ ಲೈಂಗಿಕ ಪ್ರಚೋದನೆಯ ಲೋಲುಪತೆ ಎಂಬುದರ ಹೊರತಾಗಿ ಲೈಂಗಿಕ ತತ್ವದ ಎಲ್ಲ ಗುರುತಿಸುವಿಕೆಯನ್ನು ಪೃಥ್ವಿಯ ಮೇಲಿನ ದೈವೀ ಜೀವನದಿಂದ ಪ್ರತ್ಯೇಕವಾಗಿರಿಸಲಿಲ್ಲ, ಅದು ಜೀವನದಲ್ಲಿದೆ, ಹೆಚ್ಚಿನ ಪಾತ್ರ ವಹಿಸುತ್ತದೆ ಮತ್ತು ಅದರೊಂದಿಗೆ ವ್ಯವಹರಿಸಬೇಕಾಗಿದೆ, ಅದನ್ನು ಸರಳವಾಗಿ ಅಲಕ್ಷಿಸಲಾಗದು, ಕೇವಲ ಅದುಮಲಾಗದು, ಇಲ್ಲವೆ ಕೆಳಗೆ ಹಿಡಿದಿಡಲಾಗದು, ಇಲ್ಲವೆ ಕಣ್ಣಿಗೆ ಕಾಣದ ರೀತಿಯಲ್ಲಿ ದೂರ ಇರಿಸಲಾಗದು. ಮೊದಲನೆಯದಾಗಿ ಅದರ ಒಂದು ಮುಖದಲ್ಲಿ ಅದು ಒಂದು ವಿಶ್ವವ್ಯಾಪಿ, ದೈವಿಕವಾದದ್ದು ಎಂದು ಎನಿಸಿಕೊಳ್ಳುವ ತತ್ವ: ಅದು ಈಶ್ವರ ಮತ್ತು ಶಕ್ತಿ ಇವರ ಆಧ್ಯಾತ್ಮಿಕ ರೂಪ ತೆಗೆದುಕೊಳ್ಳುತ್ತದೆ ಮತ್ತು ಅದರ ಹೊರತಾಗಿ ಪುರುಷ ಹಾಗೂ ಪ್ರಕೃತಿ ಇವರ ಜಗತ್ತಿನ ತತ್ವವೆಂದು ಯಾವುದೇ ಜಗತ್ತಿನ ಸೃಷ್ಟಿ ಮತ್ತು ಪ್ರಕಟಣೆ ಇರುತ್ತಿರಲಿಲ್ಲ, ಅವರಿಬ್ಬರೂ ಸೃಷ್ಟಿಗಾಗಿ ಅವಶ್ಯವಾಗಿದ್ದಾರೆ, ಸೃಷ್ಟಿಯ ಮನೋವೈಜ್ಞಾನಿಕ ಕಾರ್ಯಗತಿಯ ಲೀಲೆಗಾಗಿ ಅವರ ಜೊತೆಗಾರಿಕೆ, ಅವರಲ್ಲಿ ವಿನಿಮಯ ಅವಶ್ಯವಾಗಿವೆ. ಮತ್ತು ಆತ್ಮ ಹಾಗೂ ಪ್ರಕೃತಿ ಎಂದು ಅವರ ಪ್ರಕಟಣೆಯಲ್ಲಿರುವುದು ಲೀಲೆಯ ಇಡೀ ವಿಧಾನಕ್ಕೆ ಅವಶ್ಯವಾಗಿದೆ. ದೈವೀ ಜೀವನದಲ್ಲಿ ಒಂದು ಅವತಾರ ಇಲ್ಲವೆ ಕನಿಷ್ಠ ಪಕ್ಷ, ಯಾವುದೊಂದು ರೂಪದಲ್ಲಿ ಆ ಎರಡೂ ಸಾಮರ್ಥ್ಯಗಳ ಸಾನ್ನಿಧ್ಯ ಇಲ್ಲವೆ ದೇಹಧಾರಣೆ ಮಾಡಿದವರ ಇಲ್ಲವೆ ಪ್ರತಿನಿಧಿಗಳ ಮೂಲಕ ಪ್ರಾರಂಭಗೊಳಿಸುವ ಪ್ರಭಾವ ಸೃಷ್ಟಿ ಸಾಧ್ಯವಾಗುವಂತೆ ಮಾಡುವುದಕ್ಕಾಗಿ ಅತ್ಯವಶ್ಯವಾಗಿರುತ್ತದೆ. ಮಾನಸಿಕ ಮತ್ತು ಪ್ರಾಣಿಕ ಸ್ತರಗಳ ಮೇಲೆ ಅದರ ಮಾನವ ಕ್ರಿಯೆಯಲ್ಲಿ ಲೈಂಗಿಕತೆ, ಒಟ್ಟಿನಲ್ಲಿ ದೈವಿಕವಲ್ಲದ ತತ್ವವಲ್ಲ, ಅದರ ಉದಾತ್ತವಾದ ಮುಖಗಳು ಹಾಗೂ ಆದರ್ಶಗಳಿವೆ, ಇವುಗಳನ್ನು ಹೊಸ ಮತ್ತು ಹೆಚ್ಚು ವಿಶಾಲವಾದ ಜೀವನದಲ್ಲಿ ಯಾವ ರೀತಿಯಲ್ಲಿ ಹಾಗೂ ಎಷ್ಟರಮಟ್ಟಿಗೆ ಒಪ್ಪಿಕೊಳ್ಳಬೇಕೆಂಬುದನ್ನು ನೋಡಬೇಕಾಗಿದೆ. ಲೈಂಗಿಕ ಆಸೆಯ ಹಾಗೂ ಪ್ರಚೋದನೆಯ ಎಲ್ಲ ಒರಟು ಪಶುಸದೃಶ ಲೋಲುಪತೆಯನ್ನು ತೊಡೆದು ಹಾಕಬೇಕಾಗುವುದು, ಅದು ಉಚ್ಚತರ ಜೀವನಕ್ಕೆ ತಯಾರಾಗಿರದೇ ಇದ್ದವರ ಮತ್ತು ಸಂಪೂರ್ಣ ಆಧ್ಯಾತ್ಮಿಕ ಜೀವನಕ್ಕೆ ತಯಾರಾಗಿರದೇ ಇದ್ದವರ ಮಧ್ಯದಲ್ಲಿ ನಡೆದುಕೊಂಡು ಹೋಗಬಹುದು. ಸಂಪೂರ್ಣ ಆಧ್ಯಾತ್ಮಿಕ ಜೀವನಕ್ಕಾಗಿ ಅಭೀಪ್ಸೆ ಪಟ್ಟವರು, ಆದರೆ ಅದನ್ನು ಅದರ ಪೂರ್ಣತೆಯಲ್ಲಿ ಕೈಗೆತ್ತಿಕೊಳ್ಳಲು ಅಸಮರ್ಥರಾದವರಲ್ಲಿ ಲೈಂಗಿಕತೆ ಸಂಸ್ಕರಣಕ್ಕೆ

ಒಳಗಾಗಬೇಕು, ಆಧ್ಯಾತ್ಮಿಕ ಇಲ್ಲವೆ ಚೈತ್ಯಾತ್ಮಿಕ ಪ್ರಚೋದನೆಗೆ ಲೈಂಗಿಕತೆ ಅಧೀನವಾಗಬೇಕು ಮತ್ತು ಅದರ ಹೆಚ್ಚು ಹಗುರಾದ, ಕ್ಷುದ್ರ ಇಲ್ಲವೆ ಕೆಳ ದರ್ಜೆಗಿಳಿದ ಎಲ್ಲ ರೂಪಗಳನ್ನು ತೊರೆಯಬೇಕು ಮತ್ತು ಆದರ್ಶದ ಪರಿಶುದ್ಧತೆಯ ಸ್ಪರ್ಶದ ಭಾವನೆ ತಂದುಕೊಳ್ಳಬೇಕು.

**(CWSA, 13/543–44)**

*

**ದೈವೀ ಶಕ್ತಿ, ಪುರುಷ ಮತ್ತು ಸ್ತ್ರೀ ಇವರ ನಡುವಿರುವ ಆಧ್ಯಾತ್ಮಿಕ ಸಂಬಂಧ**

ಪುರುಷ ಮತ್ತು ಸ್ತ್ರೀ ಇವರ ನಡುವೆ ಆಧ್ಯಾತ್ಮಿಕ ಸಂಬಂಧವನ್ನು ಸಿದ್ಧಿಸಿಕೊಳ್ಳುವುದು ಅತ್ಯಂತ ಕಠಿಣವಾದದ್ದು. ಉಚ್ಚತರ ದೈವೀ ಜೀವನವನ್ನು, ದೈವೀ ಪ್ರಜ್ಞೆ ಹಾಗೂ ದೈವೀ ಸತ್ಯವನ್ನು ಅರಸುವ ಪುರುಷ, ಅವನ ಶಕ್ತಿಯಾಗಲಿರುವ ಸರಿಯಾದ ಮಾದರಿಯ ಸ್ತ್ರೀಯನ್ನು ಭೇಟಿ ಮಾಡಿದರೆ, ಅವನು ಪ್ರಕಟಿಸಬೇಕಾದ ಜೀವನ ಶ್ರೀಮಂತಗೊಳ್ಳುತ್ತದೆ ಮತ್ತು ತುಂಬಿಕೊಳ್ಳುತ್ತದೆ. ಇಂತಹದಿದ್ದಾಗಲೂ ಕೂಡ ಅವರಿಬ್ಬರ ನಡುವೆ ಚೈತ್ಯಾತ್ಮಿಕ ಏಕತೆ ಇರುತ್ತದೆ. ಪ್ರಾರಂಭದ ದೆಸೆಯಲ್ಲಿ ಸರಿಯಾದ ರೀತಿಯ ಚೈತ್ಯಾತ್ಮಿಕ ಏಕತೆ ಇದ್ದವರಲ್ಲಿ ಆಧ್ಯಾತ್ಮಿಕ ಸಂಬಂಧ ಕ್ರಮೇಣ ಅಭಿವೃದ್ಧಿ ಹೊಂದಬಹುದು ಮತ್ತು ತನ್ನನ್ನು ಪ್ರಕಟಿಸಬಹುದು.

ಆಧ್ಯಾತ್ಮಿಕ ಏಕತೆಯಲ್ಲಿ ಶಕ್ತಿಯಾದ ಸ್ತ್ರೀ ನಿಜವಾಗಿ ದೈವೀ ಸಾಮರ್ಥ್ಯ–ವಾಗಿರಬೇಕು – ಎಂದರೆ ಸಾಮರ್ಥ್ಯಪೂರ್ಣ ವ್ಯಕ್ತಿ ವಿಶಿಷ್ಟತೆ ಅವಳದಾಗಿರಬೇಕು, ಪುರುಷನಿಂದ ಅವಳು ಸರಿಯಾದ ರೀತಿಯಲ್ಲಿ ಸಹಾಯ ಪಡೆಯಬಲ್ಲವಳಾಗಿರ–ಬೇಕು. ಪ್ರತಿಯೊಬ್ಬರೂ ಇನ್ನೊಬ್ಬರಿಗೆ ನಿಜವಾದ ಸಹಾಯ ನೀಡುವವರಾಗಿರಬೇಕು: ಈ ಸಂಬಂಧವನ್ನು ಸಿದ್ಧಿಸಿಕೊಳ್ಳುವುದು ಅತ್ಯಂತ ಕಠಿಣವಾದದ್ದು. ಸಾಧಕನಿಗೆ ಈ ತೊಂದರೆಗಳು ಬರುತ್ತವೆ. ಆತ್ಮದಲ್ಲಿ ಪರಿಪೂರ್ಣಗೊಂಡ ಸಿದ್ಧ ಪುರುಷನಿಗೆ ತೊಂದರೆ ಇರುವುದಿಲ್ಲ. ಅವನ ದೈವೀ ಶಕ್ತಿ ಅಲ್ಲಿದ್ದರೆ ಅವಳೆಲ್ಲಿದ್ದಾಳೆ ಎಂಬುದು ಅವನಿಗೆ ತಿಳಿದಿರುತ್ತದೆ ಮತ್ತು ಅವನು ಅವಳನ್ನು ಪಡೆಯುತ್ತಾನೆ.

**ಪ್ರಶ್ನೆ :** *ಅತಿಮಾನಸ ಯೋಗಕ್ಕೆ ದೈವೀ ಶಕ್ತಿ ಅವಶ್ಯವಾಗಿದೆಯೆ?*

**ಶ್ರೀ ಅ :** ಯೋಗಕ್ಕೆ ದೈವೀ ಶಕ್ತಿಯ ಆವಶ್ಯಕತೆ ಇರುವುದಿಲ್ಲ. ದೈವೀ ಶಕ್ತಿಯಿಲ್ಲದೆ ಸಂಪೂರ್ಣ ಜ್ಞಾನ, ಪ್ರಜ್ಞೆ ಮತ್ತು ಸಾಮರ್ಥ್ಯ ಹಾಗೂ ಆನಂದಗಳನ್ನು



ಸಿದ್ಧಿಸಿಕೊಳ್ಳಬಹುದು. ಆದರೆ ಈ ಅಂಶಗಳನ್ನು ಜೀವನದಲ್ಲಿ ತರಬೇಕಾದರೆ, ಪ್ರಕಟಗೊಳಿಸಬೇಕಾದರೆ, ಆಗ ದೈವೀ ಶಕ್ತಿಯ ಆವಶ್ಯಕತೆ ಉಂಟಾಗುವುದು. ದೈವೀ ಶಕ್ತಿ ಇರದೆ ಹೋದರೆ ಮನುಷ್ಯ ತನ್ನ ಜೀವನದಲ್ಲಿರುವ ದೈವೀ ಜ್ಞಾನ, ಸಾಮರ್ಥ್ಯ, ಆನಂದ ಇತ್ಯಾದಿಗಳನ್ನು ಕೆಳಗಿಳಿಸಿ ತರಲಾರ, ಆ ಸಂದರ್ಭದಲ್ಲಿ ಅವನು ಕೇವಲ ಭವಿಷ್ಯತ್ತಿನ ಕಾಲದಲ್ಲಿ ಕೈಕೊಳ್ಳಬೇಕಾದ ಕಾರ್ಯಕ್ಕೆ ಮಾರ್ಗವನ್ನೊಂದನ್ನು ತಯಾರಿಸಬಲ್ಲ.

**(ಸಾಯಂಕಾಲದ ಮಾತುಕತೆಗಳು, ಎ.ಬಿ. ಪುರಾಣಿ)**

*

ನಿಮ್ನತರ ಸ್ವಭಾವದಿಂದ ದೈವೀ ಸ್ವಭಾವದಲ್ಲಿ ಏರಿ ಹೋಗುವುದರ ಯೋಗ ಇದಾಗಿದೆ. ಉಚ್ಚತರ ಸ್ವಭಾವ ಎಂದರೆ ಏನು ಎಂಬುದನ್ನು ನೀವು ನಂತರ ತಿಳಿದುಕೊಳ್ಳುವಿರಿ. ನೀವು ಅದಕ್ಕೆ ಯೋಗ್ಯರಾಗಬೇಕಾಗಿದೆ...

ಮದುವೆ ಮಾಡಿಕೊಂಡಿರುವ ಜೀವನ, ಶಾಸ್ತ್ರ ಇತ್ಯಾದಿಗಳಿರುವ ನಿಮ್ಮವೇ ವಿಚಾರಗಳು ಅಪಾಯಕಾರಿಯಾಗಿವೆ ಮತ್ತು ನೀವು ಈ ವಿಚಾರಗಳನ್ನು ಅನುಸರಿಸಿದರೆ ಯೋಗದಿಂದ ಪತನಗೊಳ್ಳುವ ಪ್ರತಿಯೊಂದು ಅವಕಾಶವಿರುತ್ತದೆ. ಅವುಗಳೆಲ್ಲ ಮಾನಸಿಕ ರಚನೆಗಳು. ಪುರುಷ ಹಾಗೂ ಸ್ತ್ರೀ ಇವರಿಬ್ಬರೂ ಅಭೀಪ್ಸೆ ಪಡುವವರಾಗಿದ್ದಾಗ ಒಬ್ಬರು ಇನ್ನೊಬ್ಬರಿಗೆ ಸಾಧನೆಯಲ್ಲಿ ಹಾಗೂ ಆಧ್ಯಾತ್ಮಿಕ ಪ್ರಯತ್ನದಲ್ಲಿ ಸಹಾಯ ಮಾಡುವುದು ಮೊದಲ ವಿಷಯವಾಗಿರುತ್ತದೆ. ಅವರು ತಮ್ಮ ಶಕ್ತಿಗಳನ್ನು ವಿನಿಮಯ ಮಾಡಿಕೊಳ್ಳಬೇಕು ಮತ್ತು ಒಬ್ಬರು ಇನ್ನೊಬ್ಬರಿಗೆ ಉಚ್ಚತರ ಪ್ರಜ್ಞೆಯಲ್ಲಿ ಏರಿ ಹೋಗುವುದಕ್ಕೆ ಸಹಾಯ ಮಾಡಬೇಕು.

ಎರಡನೆಯದು ಪ್ರೇಮದ ಪ್ರಶ್ನೆಯಾಗಿರುತ್ತದೆ. 'ಪ್ರೇಮ' ಎಂದು ಬಹಳಷ್ಟು ಜನರು ಕರೆಯುವುದು ಮೇಲ್ಮೈಯಲ್ಲಿರುವ ವಿಷಯವಾಗಿರುತ್ತದೆ, ಮತ್ತು ಹೆಚ್ಚಿನ ಮಟ್ಟದಲ್ಲಿ ಕಾಮಾತುರತೆಯ ಪ್ರಾಣಿಕ ಹಾತೊರೆತವಾಗಿರುತ್ತದೆ. ಅದನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು. ಅದಕ್ಕೂ ಹೆಚ್ಚು ಆಳವಾದ ಸಂಬಂಧ ಒಂದಿದೆ: ಅದು ಆತ್ಮದ್ದಾಗಿದೆ. ಅದು ತನ್ನಷ್ಟಕ್ಕೆ ತಾನೇ ಅಂತರಂಗದಿಂದ ಬರುತ್ತದೆ. ಅದು ಅವರಿಬ್ಬರಲ್ಲಿ ಆದರ್ಶ ಏಕತೆಯಾಗಿ ಪ್ರಕಟವಾಗುತ್ತದೆ ಮನಸ್ಸಿನಲ್ಲಿ ಏಕತೆ, ಆತ್ಮದ ಏಕತೆ ಇವೆಲ್ಲ ಆಗಿರುತ್ತದೆ. ಆ ಸಂಬಂಧ ಸಂಪೂರ್ಣ ಶಾಂತಿಯಿಂದ ಕೂಡಿರುತ್ತದೆ, ವಿಶಾಲವಾಗಿರುತ್ತದೆ, ಪವಿತ್ರವಾಗಿರುತ್ತದೆ. ಗಂಡಸು ಮತ್ತು ಮಹಿಳೆ

ಇವರ ನಡುವೆ ದೈವೀ ಪುರುಷ ಮತ್ತು ದೈವೀ ಶಕ್ತಿ ಇವರ ಸಾಧ್ಯವಾಗಬಹುದಾದ ಸಂಬಂಧವಿರುತ್ತದೆ. ಆದರೆ ಆ ಸಂಬಂಧ ಸಾಮಾಜಿಕವಾದದ್ದಲ್ಲ. ಸಾಮಾನ್ಯವಾದದ್ದಲ್ಲ. ಮನುಷ್ಯ ಒಬ್ಬ ಸ್ತ್ರೀಯೊಡನೆ ಮದುವೆ ಮಾಡಿಕೊಂಡಿದ್ದಾನೆ ಎಂಬ ಕಾರಣದಿಂದಾಗಿ ಅವಶ್ಯವಾಗಿ ಅವನ ಹೆಂಡತಿ ಅವನ ದೈವೀ ಶಕ್ತಿಯಾಗಿರುವುದಿಲ್ಲ.

ನೀವು ಇವೆಲ್ಲ ಸಂಬಂಧಗಳನ್ನು ಅರಿತುಕೊಳ್ಳದೇ ಇರುವವರೆಗೆ, ಅನುಭವಕ್ಕೆ ತಂದುಕೊಳ್ಳದೇ ಇರುವವರೆಗೆ, ಸಾಧ್ಯವಾಗಬಹುದಾದ ಇನ್ನೊಂದು ಬಗೆಯ, ಮಿತ್ರರ ನಡುವಿರುವ ರೀತಿಯ ಸಂಬಂಧವಿದೆ. ಎಂದರೆ ನೀವು ನಿಮ್ಮ ಹೆಂಡತಿಯೊಡನೆ, ಮಿತ್ರರೊಬ್ಬರ ಜೊತೆಗೆ ಇರುವ ರೀತಿಯಲ್ಲಿ ಇರಬೇಕು, ಅವಳಿಗೆ ಜೀವನದಲ್ಲಿ ಅದೇ ಬಗೆಯ ಗುರಿ ಇರಬೇಕು, ಅಲ್ಲಿ ಮೈತ್ರಿಯ ಹೊರತಾಗಿ ಬೇರಾವ ಸಂಬಂಧ ಇರಬಾರದು.

**(ಸಾಯಂಕಾಲದ ಮಾತುಕತೆಗಳು, p. 156–57)** **– ಶ್ರೀ ಅರವಿಂದರು**

*



*The effective manifestation of Ishwara and Ishwari in union.*

*M.*



# ದೈವೀ ಮಾತೆಯಾಗಿರುವ ದೇವ

## ದೇವನ ದೈವೀ ಮಾತೆ

ಅನನ್ಯಳಾದ ಮೂಲ ವಿಶ್ವಾತೀತ ದೈವೀಶಕ್ತಿ ಶ್ರೀಮಾತೆ ಎಲ್ಲ ಜಗತ್ತುಗಳ ಮೇಲಿದ್ದುಕೊಂಡಿದ್ದಾಳೆ ಮತ್ತು ತನ್ನ ಸನಾತನ ಪ್ರಜ್ಞೆಯಲ್ಲಿ ಪರಮೋಚ್ಚ ಭಗವಂತನನ್ನು ಧಾರಣ ಮಾಡಿದ್ದಾಳೆ. ಏಕಾಕಿಯಾಗಿ, ಸರ್ವತಂತ್ರ ಸ್ವತಂತ್ರ ದೈವೀ ಸಾಮರ್ಥ್ಯಕ್ಕೆ ಮತ್ತು ಅನಿರ್ವಚನೀಯ ದೈವೀ ಸಾಮರ್ಥ್ಯಕ್ಕೆ ಆಶ್ರಯ ನೀಡಿದ್ದಾಳೆ. ಪ್ರಕಟಿಸಬೇಕಾಗಿರುವ ದೈವೀ ಸತ್ಯಗಳನ್ನು ಒಳಗೊಳ್ಳುತ್ತ ಇಲ್ಲವೆ ಅವುಗಳಿಗೆ ಕರೆ ಕೊಡುತ್ತ ಅವುಗಳನ್ನು ದೈವೀ ರಹಸ್ಯದಿಂದ ಕೆಳಗಿಳಿಸಿ ತರುತ್ತಾಳೆ, ಆ ರಹಸ್ಯದಲ್ಲಿ ಆ ಸತ್ಯಗಳು ಅವಳ ಅನಂತ ಪ್ರಜ್ಞೆಯ ಪ್ರಕಾಶದಲ್ಲಿ ಅಡಗಿಕೊಂಡಿರುವಂತಹ–ವಾಗಿರುತ್ತವೆ. ಆ ಸತ್ಯಗಳಿಗೆ ಅವಳು ತನ್ನ ಸರ್ವ ಸಾಮರ್ಥ್ಯದಿಂದ ಒಂದೊಂದು ರೂಪವನ್ನು, ಅಪಾರ ಪ್ರಾಣಶಕ್ತಿಯನ್ನು, ವಿಶ್ವದಲ್ಲಿ ಒಂದೊಂದು ದೇಹವನ್ನು ಕೊಡುತ್ತಾಳೆ. ಪರಮೋಚ್ಚನು ಅವಳಲ್ಲಿ ಎಲ್ಲ ಕಾಲದಲ್ಲಿ ಸನಾತನ ಸಚ್ಚಿದಾನಂದನೆಂದು ಪ್ರಕಟನಾಗಿದ್ದಾನೆ. ಜಗತ್ತುಗಳಲ್ಲಿ, ದೈವೀ ಸ್ತರಗಳಲ್ಲಿ, ದೇವರುಗಳಲ್ಲಿ ಹಾಗೂ ಅವರ ಚೈತನ್ಯಗಳಲ್ಲಿ ಅವಳ ಮೂಲಕ ಅವನು ಈಶ್ವರ–ಶಕ್ತಿ ಎಂಬ ಏಕ ಮತ್ತು ದ್ವಿವಿಧ ಪ್ರಜ್ಞೆಯೆಂದು ಮತ್ತು ಪುರುಷ–ಪ್ರಕೃತಿಯ ತತ್ವವೆಂದು ಪ್ರಕಟನಾಗಿದ್ದಾನೆ. ಮತ್ತು ಆಕೆಯಿಂದಾಗಿಯೇ ತಿಳಿದುಬಂದ ಹಾಗೂ ತಿಳಿದು ಬಂದಿರದ ಜಗತ್ತುಗಳಲ್ಲಿ ಆಕಾರ ತಳೆದಿದ್ದಾನೆ. ಎಲ್ಲವೂ ಅವಳು ಪರಮೋಚ್ಚನೊಡನೆ ನಡೆಸಿರುವ ಲೀಲೆ. ಎಲ್ಲವೂ ಅವಳಿಂದಾದ ಸನಾತನನ ರಹಸ್ಯಗಳ, ಅನಂತನ ಪವಾಡಗಳ ಪ್ರಕಟಣೆ. ಎಲ್ಲವೂ ಅವಳೇ ಆಗಿದ್ದಾಳೆ, ಏಕೆಂದರೆ ಎಲ್ಲರೂ ದೈವೀ ಪ್ರಜ್ಞಾ–ಶಕ್ತಿಯ ಅಂಶ ಹಾಗೂ ಭಾಗಗಳಾಗಿದ್ದಾರೆ. ಅವಳು ನಿರ್ಧರಿಸಿದುದರ ಹಾಗೂ ಅದಕ್ಕೆ ಪರಮೋಚ್ಚನು ಅನುಮತಿ ನೀಡಿದುದರ ಹೊರತಾಗಿ ಇಲ್ಲಿ ಅಥವಾ ಬೇರೆಡೆಯಲ್ಲಿ ಇನ್ನೇನೂ ಇರಲಾರದು. ಪರಮೋಚ್ಚನಿಂದ ಚಾಲನೆಗೊಳಗಾಗಿ ಅವಳು ಗ್ರಹಿಸಿದುದರ ಮತ್ತು ತನ್ನ ಸೃಷ್ಟಿಸುವ ಆನಂದದಲ್ಲಿ ಬೀಜರೂಪದಲ್ಲಿ ಎರಕ ನೀಡಿದುದರ ಹೊರತಾಗಿ ಬೇರೇನೂ ಆಕಾರ ತಳೆಯಲಾರದು.

ವಿಶ್ವಂಭರ ಮಾತೆಯಾದ ಮಹಾಶಕ್ತಿ ಪರಮೋಚ್ಚನಿಂದ ಬಂದದ್ದನ್ನೆಲ್ಲ ತನ್ನ ವಿಶ್ವಾತೀತ ಪ್ರಜ್ಞೆಯ ಮೂಲಕ ಕಾರ್ಯಗತಗೊಳಿಸುತ್ತಾಳೆ ಮತ್ತು ತಾನು ರಚಿಸಿದ ಜಗತ್ತುಗಳಲ್ಲಿ ಪ್ರವೇಶಿಸುತ್ತಾಳೆ, ಅವಳ ಸಾನ್ನಿಧ್ಯ ದೈವೀ ಮನೋಧರ್ಮದಿಂದ

ಎಲ್ಲವನ್ನೂ ಪೋಷಿಸುವ ದೈವೀಶಕ್ತಿ ಹಾಗೂ ಆನಂದಗಳಿಂದ ಅವುಗಳನ್ನು ತುಂಬಿಕೊಳ್ಳುತ್ತದೆ ಮತ್ತು ಅವುಗಳಿಗೆ ಆಧಾರ ನೀಡುತ್ತದೆ, ಈ ಶಕ್ತಿ, ಆನಂದಗಳಿಲ್ಲದೆ ಆ ಜಗತ್ತುಗಳು ಅಸ್ತಿತ್ವದಲ್ಲಿರಲಾರವು. ನಾವು ಪ್ರಕೃತಿ ಎಂದು ಕರೆಯುವುದು ಅತ್ಯಂತ ಬಾಹ್ಯದಲ್ಲಿರುವ ಅವಳ ಕಾರ್ಯನಿರ್ವಾಹಕ ಮುಖ. ಅವಳು ತನ್ನ ವಿಧಾನಗಳ ಹಾಗೂ ಶಕ್ತಿಗಳ ಸಾಮರಸ್ಯವನ್ನು ಯೋಗ್ಯ ಹಾಗೂ ಕ್ರಮಬದ್ಧ ರೀತಿಯಲ್ಲಿ ವ್ಯವಸ್ಥೆಗೆ ಒಳಪಡಿಸುತ್ತಾಳೆ, ಪ್ರಕೃತಿಯ ಕಾರ್ಯಾಚರಣೆಗಳಿಗೆ ಪ್ರಚೋದನೆ ನೀಡುತ್ತಾಳೆ, ಕಾಣಬಹುದಾದ ಇಲ್ಲವೆ ಅನುಭವಕ್ಕೆ ತಂದುಕೊಳ್ಳಬಹುದಾದ ಇಲ್ಲವೆ ಜೀವನದ ಚಲನೆಯಲ್ಲಿ ಇರಿಸಬಹುದಾದ ಎಲ್ಲದರಲ್ಲಿ ರಹಸ್ಯವಾಗಿ ಇಲ್ಲವೆ ಪ್ರಕಟವಾಗಿ ಚಲಿಸುತ್ತಾಳೆ. ಜಗತ್ತುಗಳಲ್ಲಿ ಪ್ರತಿಯೊಂದು ಆ ಜಗತ್ತುಗಳ ಹಾಗೂ ವಿಶ್ವದ ಮಹಾಶಕ್ತಿಯ ಒಂದು ಲೀಲೆಯಲ್ಲದೆ ಬೇರೇನಲ್ಲ. ಅವಳು ಅಲ್ಲಿ ವಿಶ್ವವ್ಯಾಪಿ ದಿವ್ಯಾತ್ಮ ಹಾಗೂ ವಿಶ್ವಾತೀತ ಮಾತೆಯ ದೈವೀ ವ್ಯಕ್ತಿವಿಶಿಷ್ಟತೆಯುಳ್ಳವಳಾಗಿ ಇರುತ್ತಾಳೆ. ಪ್ರತಿಯೊಂದೂ ತನ್ನ ದರ್ಶನದಲ್ಲಿ ಕಂಡುಕೊಂಡ ಏನೋ ಒಂದು, ಅದನ್ನು ಅವಳು ತನ್ನ ಸೌಂದರ್ಯಭರಿತ ಹೃದಯದಲ್ಲಿ, ಸಾಮರ್ಥ್ಯದಲ್ಲಿ ಕೂಡಿಟ್ಟುಕೊಂಡಿರುತ್ತಾಳೆ, ತನ್ನ ಆನಂದದಲ್ಲಿ ಸೃಷ್ಟಿಸಿರುತ್ತಾಳೆ.

*

## ದೈವೀ ಮಾತೆಯ ಯಜ್ಞಾಹುತಿ

ಶ್ರೀಮಾತೆ ಮೇಲ್ಗಡೆಗಿದ್ದುಕೊಂಡು ಎಲ್ಲದರ ಮೇಲೆ ಆಳಿಕೆ ನಡೆಸುವುದಿಲ್ಲ, ಆದರೆ ಕಡಿಮೆ ದರ್ಜೆಯುಳ್ಳ ಮೂರು ವಿಧದ ವಿಶ್ವದಲ್ಲಿ ಕೆಳಗಿಳಿದು ಬರುತ್ತಾಳೆ. ಅವೈಯಕ್ತಿಕವಾಗಿ ಇಲ್ಲಿರುವ ಎಲ್ಲ ವಸ್ತು–ವಿಷಯಗಳು, ಅವಿದ್ಯೆಯ ಚಲನೆಗಳೂ ಕೂಡ, ಪರದೆಯ ಹಿಂದಿರುವ ಸಾಮರ್ಥ್ಯ ರೂಪದಲ್ಲಿ, ಅವಳೇ ಆಗಿದ್ದಾಳೆ. ಕುಂದಿದ ದ್ರವ್ಯದಲ್ಲಿ ಅವಳ ಸೃಷ್ಟಿಗಳು, ಅವಳ ಪ್ರಕೃತಿ–ದೇಹ, ಪ್ರಕೃತಿ–ಶಕ್ತಿ ಇವೆಲ್ಲ ಅಸ್ತಿತ್ವದಲ್ಲಿರಲು ಕಾರಣವೆಂದರೆ ಪರಮೋಚ್ಚನ ರಹಸ್ಯ ಆಜ್ಞೆಯಿಂದ ಪ್ರೇರಿತಳಾಗಿ, ಅನಂತದ ಸಾಧ್ಯತೆಗಳಲ್ಲಿದ್ದ ಏನೋ ಒಂದನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಳು ಶ್ರೇಷ್ಠ ಯಜ್ಞಾಹುತಿಯಾಗಲು ಒಪ್ಪಿಕೊಂಡಿದ್ದಾಳೆ, ಅವಿದ್ಯೆಯ ಆತ್ಮ ಮತ್ತು ರೂಪಗಳ ಮುಖವಾಡವನ್ನು ಧರಿಸಿಕೊಂಡಿದ್ದಾಳೆ. ವ್ಯಕ್ತಿಗತವಾಗಿಯೂ ಕೂಡ ಈ ಗಾಢಾಂಧಕಾರದಲ್ಲಿ ಇಳಿದು ಅದನ್ನು ದೈವೀ ಪ್ರಕಾಶದತ್ತ ಕೊಂಡೊಯ್ಯಲು, ಮಿಥ್ಯೆ ದೋಷಗಳಲ್ಲಿಳಿದು ಅವುಗಳನ್ನು ದೈವೀ ಸತ್ಯವನ್ನಾಗಿ ಪರಿವರ್ತಿಸಲು, ಮೃತ್ಯುವಿನಲ್ಲಿಳಿದು ಅದನ್ನು ದೇವ ಸದೃಶ ಜೀವನವನ್ನಾಗಿಸುವ ತಿರುವುಕೊಡಲು, ನೋವು ಹಾಗೂ ಹಟಮಾರಿ ದುಃಖಗಳಿರುವ ಈ ಜಗತ್ತಿನಲ್ಲಿ ಅವು ಪರಿವರ್ತನೆಗೊಳಗಾಗುವ ಅವಳ ಘನತೆವೆತ್ತ ದಿವ್ಯಾನಂದದ ಅತ್ಯಂತ ಸಂತಸದಲ್ಲಿ ಕೊನೆಗೊಳ್ಳುವಂತೆ ಮಾಡಲು ಅವಳು ದೊಡ್ಡ ಮನಸ್ಸು ಮಾಡಿದ್ದಾಳೆ. ಅವಳು ತನ್ನ ಮಕ್ಕಳಿಗಾಗಿರುವ ಆಳವಾದ ಹಾಗೂ ಶ್ರೇಷ್ಠ ಪ್ರೇಮದಿಂದಾಗಿ ತನ್ನ ಮೇಲೆ ಮಬ್ಬಾದ ನಿಲುವಂಗಿಯದನ್ನು ಧರಿಸಲು, ಪೀಡಾಕಾರಕ ಪ್ರಭಾವವಿರುವ ಗಾಢಾಂಧಕಾರದ ಸಾಮರ್ಥ್ಯಗಳು ಹಾಗೂ ಮಿಥ್ಯೆ ಇವುಗಳ ಆಕ್ರಮಣವನ್ನು ಸಹಿಸಿಕೊಳ್ಳಲು, ಮೃತ್ಯುವೇ ಆಗಿರುವ ಜನ್ಮ ತಳೆದು ಅದರ ಮೂಲಕ ಹಾಯ್ದು ಹೋಗಲು ಒಪ್ಪಿಕೊಂಡಿದ್ದಾಳೆ; ಸೃಷ್ಟಿಯ ತೀವ್ರ ಯಾತನೆಯನ್ನು, ದುಃಖಗಳನ್ನು, ಮತ್ತು ವೇದನೆಗಳನ್ನು ತನ್ನ ಮೇಲೆ ತೆಗೆದುಕೊಂಡಿದ್ದಾಳೆ, ಏಕೆಂದರೆ ಈ ರೀತಿಯಲ್ಲಿ ಮಾತ್ರ ಅವುಗಳನ್ನು ದೈವೀ ಪ್ರಕಾಶ, ಸತ್ಯ, ಸಂತೋಷ ಮತ್ತು ಶಾಶ್ವತ ಜೀವನ ಇವುಗಳತ್ತ ಎತ್ತಬಹುದು ಎಂದು ತೋರಿಬಂದಿತು. ಇದು ಶ್ರೇಷ್ಠ ಆಹುತಿಯಾಗಿದ್ದು ಇದನ್ನು ಕೆಲವೊಮ್ಮೆ ಪುರುಷನ ಆಹುತಿ ಎಂದು ಕರೆಯಲಾಗುತ್ತದೆ, ಆದರೆ ಅದು ಆಳವಾದ ರೀತಿಯಲ್ಲಾದ ಪ್ರಕೃತಿಯ ಆಹುತಿ, ದೈವೀ ಮಾತೆ ಯಜ್ಞಕ್ಕೆ ಅರ್ಪಿಸಿದ ಆಹುತಿಯಾಗಿದೆ.



*

## ದೈವೀ ಶಕ್ತಿ ಮತ್ತು ದೈವೀ ಸಾಮರ್ಥ್ಯ

**ಪ್ರಶ್ನೆ :** *ದೈವೀ ಶಕ್ತಿ ಮತ್ತು ದೈವೀ ಸಾಮರ್ಥ್ಯ ಈ ಶಬ್ದಗಳ ನಡುವಿರುವ ವ್ಯತ್ಯಾಸವೇನು?*

**ಶ್ರೀಮಾತೆ :** ದೈವೀ ಸಾಮರ್ಥ್ಯ ದೈವೀ ಶಕ್ತಿಯ ಒಂದು ಭಾಗ ಮಾತ್ರ, ಅದು ದೈವೀ ಶಕ್ತಿಯ ಒಂದು ಗುಣಲಕ್ಷಣ. ಶ್ರೀ ಅರವಿಂದರು ಇಲ್ಲಿ ಶಕ್ತಿ ಶಬ್ದವನ್ನು 'ಚಿತ್–ತಪಸ್, ಸೃಷ್ಟ್ಯಾತ್ಮಕ ಸಾಮರ್ಥ್ಯ, ಸೃಷ್ಟ್ಯಾತ್ಮಕ ಪ್ರಜ್ಞೆ' ಎಂಬ ಅರ್ಥದಲ್ಲಿ ಉಪಯೋಗಿಸಿದ್ದಾರೆ. ಹಾಗಾಗಿ, ದೈವೀ ಸಾಮರ್ಥ್ಯ ದೈವೀ ಶಕ್ತಿಯ ಭಾಗ ಮಾತ್ರವಾಗಿರುತ್ತದೆ.

*

## ಜಗನ್ಮಾತೆ ಹಾಗೂ ಅವಳ ನಾಲ್ಕು ಮುಖಗಳು

**ಪ್ರಶ್ನೆ :** *ಮಧುರ ಮಾತೆಯವರೆ, ಜಗನ್ಮಾತೆಯ ನಾಲ್ಕು ಮುಖಗಳಲ್ಲಿ (ಪ್ರಕಟಣೆಗಳಲ್ಲಿ) ಮಹಾ ಸರಸ್ವತಿ ಅತಿ ಚಿಕ್ಕವಳು ಆಗಿರುವುದು ಹೇಗೆ?*

**ಶ್ರೀಮಾತೆ :** ಏಕೆಂದರೆ ಅವಳ ಕಾರ್ಯ ಕೊನೆಗೆ ಬಂದಿತು. (ಮೌನ) ಇಲ್ಲಿ ಕೊಟ್ಟ ಈ ಕ್ರಮದಲ್ಲಿ ಅವರು ಪ್ರಕಟವಾದರು. ಈ ಮುಖಗಳು ಜಗನ್ಮಾತೆಯ ನಾಲ್ಕು ಗುಣ ಲಕ್ಷಣಗಳ ಹಾಗಿವೆ. ಅವರು ಕಾರ್ಯದ ಆವಶ್ಯಕತೆಗೆ ಅನುಸಾರವಾಗಿ, ಒಬ್ಬರ ನಂತರ ಒಬ್ಬರಂತೆ ಪ್ರಕಟವಾದರು. ಪರಿಪೂರ್ಣತೆಯ ಆವಶ್ಯಕತೆ ಕೊನೆಯದಾಗಿತ್ತು. ಹಾಗಾಗಿ ಅವಳು ಅತಿ ಚಿಕ್ಕವಳಾದಳು.

**ಪ್ರಶ್ನೆ :** *ಆದರೆ ಈ ನಾಲ್ಕು ದೇವಿಯರಲ್ಲಿ ಒಬ್ಬರಿಂದ ಇನ್ನೊಬ್ಬರು ಸ್ವತಂತ್ರ–ರಾಗಿರುವರೆ?*

**ಶ್ರೀಮಾತೆ :** ಒಂದಿಷ್ಟರ ಮಟ್ಟಿಗೆ, ಆದರೆ ಇಡಿಯಾಗಿ ಅಲ್ಲ. ಆ ವಿಷಯ, ಯಾವಾಗಲೂ, ಅದೇ ಆಗಿರುತ್ತದೆ. ಅಲ್ಲಿ ಸ್ವಾತಂತ್ರ್ಯವಿರುತ್ತದೆ, ಅದು ಕೆಲವೊಂದು ಸಮಯದಲ್ಲಿ ಇಡಿಯಾದದ್ದೆಂದು ತೋರಿಬರುತ್ತದೆ, ಮತ್ತು ಅದೇ ಸಮಯದಲ್ಲಿ ಬಹಳ ಹತ್ತಿರದ, ಪರಿಪೂರ್ಣವಾದದ್ದೆಂದೆನಿಸುವ ಕೊಂಡಿ ಇರುತ್ತದೆ. ಭೌತಿಕ ಜಗತ್ತಿರುವ ಇಲ್ಲಿ ಮಹಾಶಕ್ತಿ ಪ್ರಧಾನ ಪ್ರಜ್ಞೆಯುಳ್ಳವಳಾಗಿರುತ್ತಾಳೆ. ಅವಳಿಗೆ ಭಿನ್ನ ಮುಖಗಳ ಕಾರ್ಯವನ್ನು ನಿಯಂತ್ರಿಸುವ ಸಾಮರ್ಥ್ಯ ಯಾವಾಗಲೂ ಇರುತ್ತದೆ – ಆದಾಗ್ಯೂ ಆ ಮುಖಗಳು ಹೆಚ್ಚಿನ ಮಟ್ಟಿಗೆ ಸ್ವತಂತ್ರವಾಗಿರುತ್ತವೆ ಮತ್ತು ತಮ್ಮದೇ ಅಭೀಪ್ಸೆಗಳಿಗನುಸಾರವಾಗಿ ಕಾರ್ಯ ಕೈಕೊಳ್ಳುತ್ತವೆ ಮತ್ತು ಆದಾಗ್ಯೂ ಮಹಾಶಕ್ತಿ ಅವುಗಳನ್ನು ನಿಯಂತ್ರಿಸಬಲ್ಲಳು.

ಕಾಳಿಯ ಉದಾಹರಣೆ ತೆಗೆದುಕೊಳ್ಳೋಣ. ಕಾಳಿ ಮಧ್ಯೆ ಪ್ರವೇಶಿಸಬೇಕೆಂದು ನಿರ್ಧರಿಸುತ್ತಾಳೆ, ಮತ್ತು ಸ್ವಾಭಾವಿಕವಾಗಿ, ಮಹಾಶಕ್ತಿಯಲ್ಲಿ ವಿಷಯಗಳನ್ನು ಕುರಿತು ಇಡಿಯಾದ, ಸಾರ್ವತ್ರಿಕ ರೂಪದ ದರ್ಶನವಿರುವುದರಿಂದ, ಆ ಕ್ಷಣ ಸಮಯೋಚಿತವಾಗಿಲ್ಲ ಇಲ್ಲವೆ ಬೇಗನೆ ಬಂದಿದೆ ಎಂದು ಅವಳು ಕಂಡುಕೊಂಡರೆ, ಅವಳು, ಬಹಳ ಸುಲಭವಾಗಿ, ಮಹಾಕಾಳಿಯ ಮೇಲೆ ಒತ್ತಾಯ ತಂದು "ಸ್ಥಿರವಾಗಿ ಉಳಿದುಕೋ" ಎಂದು ಅವಳಿಗೆ ಹೇಳಬಲ್ಲಳು. ಮತ್ತು ಮಹಾಕಾಳಿ ನಿಶ್ಚಲವಾಗಿ ಉಳಿದುಕೊಳ್ಳುವ ನಿರ್ಬಂಧಕ್ಕೆ ಒಳಗಾಗುತ್ತಾಳೆ: ಆದಾಗ್ಯೂ ಅವಳು ಸ್ವತಂತ್ರವಾಗಿ ಕಾರ್ಯ ಕೈಕೊಳ್ಳುತ್ತಾಳೆ.

**(CWSA, 6/289)**

*





**ಪರಮೋಚ್ಚ ದೇವಿ, ಮಹಾಶಕ್ತಿಯ ಹೆಜ್ಜೆಗಳು ಹಾಗೂ ಸ್ತರಗಳು**

ಪರಮೋಚ್ಚ ದೇವಿ, ಪರಮೋಚ್ಚ ಹಾಗೂ ಮೂಲ ಮಹಾಶಕ್ತಿ ಎಲ್ಲವನ್ನೂ ಸೃಷ್ಟಿಸಿದ್ದಾಳೆ, ಎಲ್ಲವೂ ಅವಳಿಂದ ಮುಂದುವರಿದು ಸಾಗುತ್ತದೆ. ಎಲ್ಲವೂ ಅವಳ ಮೂಲಕ ಜೀವಿಸುತ್ತದೆ, ಅವಳು ಎಲ್ಲದರಲ್ಲೂ ಜೀವಿಸುವ ಹಾಗೆ ಎಲ್ಲವೂ ಅವಳಲ್ಲಿ ಜೀವಿಸುತ್ತದೆ. ಎಲ್ಲ ವಿವೇಕ ಹಾಗೂ ಜ್ಞಾನ ಅವಳ ವಿವೇಕ ಹಾಗೂ ಜ್ಞಾನಗಳಾಗಿವೆ, ಎಲ್ಲ ಸಾಮರ್ಥ್ಯ ಅವಳ ಸಾಮರ್ಥ್ಯವಾಗಿದೆ, ಎಲ್ಲ ಸಂಕಲ್ಪ ಹಾಗೂ ಶಕ್ತಿ ಅವಳ ಸಂಕಲ್ಪ ಹಾಗೂ ಶಕ್ತಿಗಳಾಗಿವೆ, ಎಲ್ಲ ಕ್ರಿಯೆ ಅವಳ ಕ್ರಿಯೆಯಾಗಿದೆ, ಎಲ್ಲ ಚಲನೆ ಅವಳ ಚಲನೆಯಾಗಿದೆ, ಎಲ್ಲ ಸತ್ತೆಗಳು ಅವಳ ಅಸ್ತಿತ್ವದ ಸಾಮರ್ಥ್ಯದ ಭಾಗಗಳಾಗಿವೆ. ಪರಮೋಚ್ಚ ದೇವಿಯ ಏಳರ ಏಳುಪಟ್ಟು ಸ್ತರಗಳು, ಅವು ದೈವೀ ವಿಶ್ವಾತೀತ ಮತ್ತು ವಿಶ್ವಂಭರ ಆದ್ಯಾಶಕ್ತಿಯ ಆರೋಹಣ ಹಾಗೂ ಅವರೋಹಣದ ಹೆಜ್ಜೆಗಳು. ಮೇಲ್ಗಡೆಗೆ ಸಚ್ಚಿದಾನಂದದ ಏಳರ ಮೂರುಪಟ್ಟು ಪರಮೋಚ್ಚ ಸ್ತರಗಳಿವೆ: त्रि सप्त परमा पदानि मातुः, ಮಧ್ಯದಲ್ಲಿ ದೈವೀ ಸತ್ಯ, ದೈವೀ ವಿಸ್ತಾರ, ಮಹದ್ ಬ್ರಹ್ಮ सत्यमृतं ब्रहत् ಇವೆ, ಕೆಳಗೆ ಪೃಥ್ವಿಯ ಅಸ್ತಿತ್ವದ ಈ ಉತ್ಕ್ರಾಂತಿಪರ ಜಗತ್ತಿನಲ್ಲಿ ಆರೋಹಣ ಹಾಗೂ ಅವರೋಹಣದ ಮೂರುಪಟ್ಟು ಏಳು ಹೆಜ್ಜೆಗಳಿವೆ.

ಮುನ್ನಡೆಯ ಈ ಮೂರು ಹಂತಗಳು ಒಂದರ ನಂತರ ಒಂದರಂತೆ ಬರುವ ಅತಿ ಮನಸ್ಸು ಇಲ್ಲವೆ ದೈವೀ ಸತ್ಯದ ಮನಸ್ಸು, ಅದರೊಂದಿಗೆ ಏಳು ಸೂರ್ಯರನ್ನು ಒಳಗೊಂಡಿರುತ್ತವೆ; ಪ್ರಾಣದೊಂದಿಗೆ ಅದರ ಏಳು ಕಮಲಗಳಿರುತ್ತವೆ, ಪೃಥ್ವಿಯೊಂದಿಗೆ ಅದರ ಏಳು ರತ್ನ ಕೇಂದ್ರಗಳಿವೆ. ಆ ಏಳು ಕಮಲಗಳು ತಾಂತ್ರಿಕ ಸಂಪ್ರದಾಯದ ಏಳು ಚಕ್ರಗಳು, ಅವು ಮನಸ್ಸಿನಿಂದ ಅವರೋಹಣ ಹಾಗೂ ಅರೋಹಣ ಮಾಡುವಂತಹವು (ಸಹಸ್ರ ದಲ, ಆಜ್ಞಾ [,] ವಿಶುದ್ಧ, ಅನಾಹತ), ಮನಸ್ಸು ಪ್ರಾಣವನ್ನು ದೈವೀ ಶಕ್ತಿಯಲ್ಲಿರುವ ಪ್ರಾಣದ ಮೂಲಕ ಕೈಗೆತ್ತಿಕೊಳ್ಳುತ್ತದೆ (ಮಣಿಪುರ, ಸ್ವಾಧಿಷ್ಠಾನ) ಅದು ಪ್ರಾಣವನ್ನು ಭೌತದ್ರವ್ಯದಲ್ಲಿ ತೊಡಗಿಕೊಂಡ ಪ್ರಾಣದವರೆಗೆ ಕೊಂಡೊಯ್ಯುವುದಿರುತ್ತದೆ, [(] ಮೂಲಾಧಾರ [)].

ಈ ಎಲ್ಲ ಪ್ರಾಣ–ಕೇಂದ್ರಗಳು ತಮ್ಮಲ್ಲಿಯೇ ಪ್ರಾಣದಲ್ಲಿರುವ ದೈವೀ ಸತ್ಯದ ಕೇಂದ್ರಗಳಾಗಿವೆ, ಅದು ಏಳು ಸೂರ್ಯರುಗಳಲ್ಲಿ ಪ್ರತಿಯೊಂದು ಪ್ರಕಾಶಮಯ ದೈವೀ–ಮನಸ್ಸು–ಅಸ್ತಿತ್ವದಲ್ಲಿ ದೈವೀ ಸತ್ಯದ ಜ್ವಲಿಸುವ ಹೃದಯ ಇರುವ ರೀತಿಯಲ್ಲಿದೆ. ಆದರೆ ಅಜ್ಞಾನದ ಮೂಲಕ ಈ ಕಮಲಗಳು ಪರದೆಗಳ ಹಿಂದಿವೆ, ಮುಚ್ಚಿಕೊಂಡಿವೆ, ತಮ್ಮದೇ ರಹಸ್ಯ ಚೈತನ್ಯಗಳಲ್ಲಿ ಪ್ರವೇಶವನ್ನು ದುರ್ಗಮಗೊಳಿಸಿವೆ. ಹಾಗಾಗಿ ಮಬ್ಬುತನ, ಮಿಥ್ಯೆ, ಮೃತ್ಯು, ನಮ್ಮ ಅಸ್ತಿತ್ವದ ವೇದನೆಗಳು ಇವೆಲ್ಲ ಇವೆ. ಪೃಥ್ವೀ ಮಾತೆಯ ರತ್ನ ಕೇಂದ್ರಗಳು ದೈವೀ ಸತ್ವದಲ್ಲಿರುವ ದೈವೀ ಸತ್ಯದ ಏಳು ಪ್ರಕಾಶಮಯ ರತ್ನ–ಹೃದಯಗಳು, ಆದರೆ ಅವು ಸೆರೆಗೊಳಗಾಗಿವೆ, ನಿಶ್ಚಲತೆಯಲ್ಲಿ ಪಳೆಯುಳಿಕೆಯಾಗಿವೆ, ಪರದೆಯ ಹಿಂದಿವೆ, ಭೌತಿಕ ಅಚೇತನದ ಕಾಠಿನ್ಯ, ಅಂಧಕಾರ ಮತ್ತು ಜಡತ್ವಗಳಿಂದ ಅವು ತಮ್ಮದೇ ರಹಸ್ಯ ಚೈತನ್ಯಗಳಲ್ಲಿ ಪ್ರವೇಶವನ್ನು ದುರ್ಗಮಗೊಳಿಸಿವೆ. ಅತಿ ಮನಸ್ಸಿನ ಸೂರ್ಯರುಗಳ ಪ್ರಕಾಶಮಯ, ಜ್ವಲಿಸುತ್ತಿರುವ ಅವರೋಹಣದ ಮೂಲಕ ಮತ್ತು ಪೃಥ್ವಿಯಲ್ಲಿ ಅಚೇತನದ ಅಂಧಕಾರದಲ್ಲಿ, ವಲ ಮತ್ತು ಅವನ ಪಾಣಿಗಳು ಇರುವ ಗುಹೆಯಲ್ಲಿ ಅಡಗಿಕೊಂಡ ದೈವೀ ಸತ್ಯದ ಎಂಟನೆಯ ಸೂರ್ಯನನ್ನು ಬಿಡುಗಡೆಗೊಳಿಸುವುದರ ಮೂಲಕ ಈ ಎಲ್ಲ ಸಾಮರ್ಥ್ಯಗಳನ್ನು ಮುಕ್ತಗೊಳಿಸುವುದು ಮೊದಲ ಹೆಜ್ಜೆ, ಇದರಿಂದಾಗಿ ಪೃಥ್ವೀ ಮಾತೆ ತನ್ನದೇ ದೈವಿಕತೆಯನ್ನು ಪುನರ್ವಶಗೊಳಿಸಿಕೊಳ್ಳುವುದರತ್ತ, ಮತ್ತು ಪೃಥ್ವಿಯ ಅಸ್ತಿತ್ವ ತನ್ನ ಸಹಜ ಪ್ರಕಾಶ, ಸತ್ಯ, ಜೀವನ ಮತ್ತು ನಿರ್ಮಲ ಆನಂದದ ದಿವ್ಯಾನಂದದತ್ತ ಸಾಗುವಂತಾಗುವುದು.

**(CWSA, 11/1339–40)**

*



## ಶ್ರೀಮಾತೆಯವರ ದೈವೀ ಶಕ್ತಿ

ಯಾವುದೇ ಮಾನವ ಸಾಹಸ ಮತ್ತು ತಪಸ್ಸು ಇವುಗಳಿಂದ ಸಾಧ್ಯವಾಗ–ದಿರುವುದನ್ನು ಶ್ರೀಮಾತೆಯವರ ಸಾಮರ್ಥ್ಯ ಕೈಕೊಳ್ಳಬಲ್ಲದು, ಆ ಸಾಮರ್ಥ್ಯ ಮುಚ್ಚಳವನ್ನು ತೆಗೆದು ಹಾಕಿ, ಆವರಣವನ್ನು ಹರಿದು, ಪಾತ್ರೆಗೆ ಆಕಾರ ನೀಡಿ ಮಬ್ಬು, ಮಿಥ್ಯೆ, ಮೃತ್ಯು ಮತ್ತು ವೇದನೆಗಳಿರುವ ಈ ಜಗತ್ತಿನಲ್ಲಿ ದೈವೀಸತ್ಯ, ಪ್ರಕಾಶ, ದೈವೀ ಜೀವನ ಹಾಗೂ ಅಮರನ ಆನಂದ ಇವೆಲ್ಲವುಗಳನ್ನು ತರಬಲ್ಲದು.

**(CWSA, 32/26)**

*

ಶ್ರೀಮಾತೆಯವರತ್ತ ಹೊರಳಿದ ಎಲ್ಲರೂ ನನ್ನ ಯೋಗವನ್ನು ಆಚರಿಸುತ್ತಾರೆ. ಮನುಷ್ಯ ತನ್ನದೇ ಪ್ರಯತ್ನದಿಂದ ಪೂರ್ಣ(ಸಮಗ್ರ) ಯೋಗವನ್ನು ಕೈಕೈಕೊಳ್ಳುತ್ತಾನೆ ಎಂದರೆ ಯೋಗದ ಎಲ್ಲ ಬದಿಗಳನ್ನು ಕುರಿತು ಆಚರಣೆ ಮಾಡುತ್ತಾನೆ ಮತ್ತು ನೆರವೇರಿಕೆ ಕಂಡುಕೊಳ್ಳುತ್ತಾನೆ ಎಂದು ತಿಳಿದುಕೊಳ್ಳುವುದು ದೊಡ್ಡ ತಪ್ಪು ಮಾಡಿದ ಹಾಗೆ. ಅದನ್ನು ಯಾವ ಮಾನವ ಸತ್ತೆಯೂ ಕೈಕೊಳ್ಳಲಾರದು. ಮನುಷ್ಯ ಕೈಕೊಳ್ಳಬೇಕಾದುದೇನೆಂದರೆ ತನ್ನನ್ನು ಶ್ರೀಮಾತೆಯವ ಕೈಗಳಲ್ಲಿರಿಸಬೇಕು ಮತ್ತು ತನ್ನನ್ನು ಸೇವೆ, ಭಕ್ತಿ, ಅಭೀಪ್ಸೆ ಇವೆಲ್ಲವುಗಳ ಮೂಲಕ ಅವರತ್ತ ತೆರೆದಿರಿಸಿಕೊಳ್ಳಬೇಕು, ಆಗ ಶ್ರೀಮಾತೆಯವರು ತಮ್ಮ ಪ್ರಕಾಶ ಹಾಗೂ ಶಕ್ತಿಗಳ ಮೂಲಕ ಅವನಲ್ಲಿ ಸಾಧನೆ ಕೈಗೂಡುವಂತೆ ಮಾಡುತ್ತಾರೆ. ಹಾಗೆಯೇ ದೊಡ್ಡ ಪೂರ್ಣ(ಸಮಗ್ರ) ಯೋಗಿ ಇಲ್ಲವೆ ಅತಿಮಾನಸ ಯೋಗಿ ಆಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿರುವುದು ಹಾಗೂ ಆ ದಿಶೆಯಲ್ಲಿ ತಾನೆಷ್ಟು ದೂರ ಸಾಗಿ ಹೋಗಿರುವೆ ಎಂದು ತನ್ನನ್ನು ತಾನೇ ಕೇಳಿಕೊಳ್ಳುವುದು ತಪ್ಪಾದದ್ದು. ಶ್ರೀಮಾತೆಯವರಲ್ಲಿ ಭಕ್ತಿಯನ್ನಿರಿಸಿ–ಕೊಂಡಿರುವುದು ಮತ್ತು ಅವರಿಗೆ ತನ್ನನ್ನು ಕೊಟ್ಟುಕೊಂಡಿರುವುದು ಮತ್ತು ಅವರು ಬಯಸಿದ ರೀತಿಯಲ್ಲಿ ತಾನಾಗಬೇಕೆಂಬುದು ಸರಿಯಾದ ಮನೋವೃತ್ತಿ. ಉಳಿದದ್ದನ್ನು ಶ್ರೀಮಾತೆಯವರು ನಿರ್ಧರಿಸುತ್ತಾರೆ ಹಾಗೂ ನಿನ್ನಲ್ಲಿ ಕಾರ್ಯ ಕೈಕೊಳ್ಳುತ್ತಾರೆ.

*

ನಾನು ಶ್ರೀಮಾತೆಯವರ ಶಕ್ತಿ ಕುರಿತು ಹೇಳಿದಾಗ ಅವಿದ್ಯೆಯ ಮೂಲಕ ಕಾರ್ಯ ಕೈಕೊಳ್ಳುತ್ತಿರುವ ಪ್ರಕೃತಿಯ ಶಕ್ತಿಯನ್ನು ಕುರಿತು ಹೇಳಿರುವುದಿಲ್ಲ, ಆದರೆ ಮೇಲ್ಗಡೆಯಿಂದ ಅವರೋಹಣ ಮಾಡಿ ಬಂದು ಸ್ವಭಾವವನ್ನು ಪರಿವರ್ತನೆ–ಗೊಳಪಡಿಸುವ ಉಚ್ಚತರ ದೈವೀ ಶಕ್ತಿಯನ್ನು ಕುರಿತು ಹೇಳಿರುತ್ತೇನೆ.

*

ಯೋಗವನ್ನು ಕೈಕೊಳ್ಳುವುದಕ್ಕೆ ಎರಡು ಮಾರ್ಗಗಳಿವೆ. ಜ್ಞಾನ ಮತ್ತು ತನ್ನದೇ ಪ್ರಯತ್ನಗಳ ಮೂಲಕ ಮನುಷ್ಯ ಕೈಕೊಳ್ಳುವ ಮಾರ್ಗವೊಂದಿದೆ, ಇನ್ನೊಂದು ಶ್ರೀಮಾತೆಯವರನ್ನು ನೆಚ್ಚಿಕೊಂಡು ಯೋಗಾಚರಣೆ ಮಾಡುವುದಾಗಿದೆ. ಈ ಎರಡನೆಯ ರೀತಿಯನ್ನು ಅನುಸರಿಸಲು ಮನುಷ್ಯ ತನ್ನ ಮನಸ್ಸು, ಹೃದಯ ಮತ್ತು ಉಳಿದೆಲ್ಲವುಗಳನ್ನು ಶ್ರೀಮಾತೆಯವರ ಶಕ್ತಿಯ ಕಾರ್ಯಕ್ಕೆ ಸಮರ್ಪಿಸಬೆಕು, ತೊಂದರೆಗಳೆಂತಹವೇ ಇದ್ದಾಗ ಅವರಿಗೆ ಕರೆ ಕೊಡಬೇಕು, ಅವರಲ್ಲಿ ನಂಬಿಕೆ ಹಾಗೂ ಭಕ್ತಿಗಳನ್ನು ಇಟ್ಟುಕೊಂಡಿರಬೇಕು. ಮೊದಲು ಅದು ಬಹಳ ಸಮಯ ತೆಗೆದುಕೊಳ್ಳುತ್ತದೆ, ಬಹಳಷ್ಟು ಸಲ ಅದಕ್ಕೆ ದೀರ್ಘಕಾಲ ಬೇಕಾಗುತ್ತದೆ, ಅದು ಪ್ರಜ್ಞೆಯನ್ನು ಈ ರೀತಿಯಲ್ಲಿ ತಯಾರು ಮಾಡುವುದಕ್ಕಾಗಿ ಬೇಕಾಗುತ್ತದೆ. ಆ ಸಮಯದಲ್ಲಿ ಬಹಳಷ್ಟು ತೊಂದರೆಗಳು ಮೇಲೆದ್ದು ಬರಬಹುದು, ಮನುಷ್ಯ ಪಟ್ಟುಹಿಡಿದರೆ ಒಂದು ಸಮಯ ಬರುತ್ತದೆ, ಆಗ ಎಲ್ಲವೂ ತಯಾರಾಗಿರುತ್ತದೆ, ಶ್ರೀಮಾತೆಯವರ ಶಕ್ತಿ ಪ್ರಜ್ಞೆಯನ್ನು ಪೂರ್ತಿಯಾಗಿ ಭಗವಂತನತ್ತ ತೆರೆದಿರಿಸಿರುತ್ತದೆ, ಆಗ ಅಭಿವೃದ್ಧಿ ಹೊಂದಬೇಕಾದುದೆಲ್ಲವೂ ಅಂತರಂಗದಲ್ಲಿ ಅಭಿವೃದ್ಧಿ ಹೊಂದುತ್ತದೆ, ಆಧ್ಯಾತ್ಮಿಕ ಅನುಭವ ಬರುತ್ತದೆ ಮತ್ತು ಅದರೊಂದಿಗೆ ಜ್ಞಾನ ಹಾಗೂ ಭಗವಂತನೊಡನೆ ಏಕತೆ ಬರುತ್ತದೆ.

ನಿನ್ನ ಮೇಲೆ ಏನೋ ಹರಿದು ಕೆಳಗೆ ಬರುತ್ತಿರುವುದು ಶಿರದ ಮೇಲಿನ ಶ್ರೀಮಾತೆಯವರ ದೈವೀ ಶಕ್ತಿ. ಸಾಮಾನ್ಯವಾಗಿ ಅದು ಶಿರದ ಮೇಲಿಂದ ಕೆಳಗೆ ಹರಿದು ಬರುತ್ತದೆ ಮತ್ತು ಮನಸ್ಸಿನ ಕೇಂದ್ರಗಳಲ್ಲಿ (ಶಿರ ಹಾಗೂ ಕುತ್ತಿಗೆ) ಕಾರ್ಯ ಕೈಕೊಳ್ಳುತ್ತದೆ, ಎದೆ ಹಾಗೂ ಹೃದಯಗಳಲ್ಲಿ ಹಾಯ್ದು ಹೋಗುತ್ತದೆ ನಂತರ ಇಡೀ ದೇಹದ ಚಲನೆಯಲ್ಲಿ ಸಾಗಿ ಹೋಗುತ್ತದೆ.

ಈ ಕಾರ್ಯಗತಿಯ ಪರಿಣಾಮವನ್ನು ಶಿರದಿಂದ ಹಿಡಿದು ತೋಳುಗಳಿರು–ವಲ್ಲಿಯ ವರೆಗೆ ನೀನು ಭಾವನೆಗೆ ತಂದುಕೊಳ್ಳುತ್ತಿರುವಿ. ಮೇಲಿನಿಂದ ಕೆಳಗೆ ಬರುತ್ತಿರುವ ದೈವೀ ಶಕ್ತಿ ನಿನ್ನ ಪ್ರಜ್ಞೆ ಉಚ್ಚತರ ಆಧ್ಯಾತ್ಮಿಕ ಸತ್ತೆಯ ಪ್ರಜ್ಞೆಯ ರೂಪದಲ್ಲಿ ಪರಿವರ್ತನೆ ಹೊಂದಲು ಕಾರ್ಯ ಕೈಕೊಳ್ಳುತ್ತದೆ. ಅದಕ್ಕಿಂತ ಮೊದಲು ಶ್ರೀಮಾತೆಯವರ ಶಕ್ತಿ, ಚೈತ್ಯ ಮನಸ್ಸು, ಪ್ರಾಣಿಕ ಹಾಗು ಭೌತಿಕ ಇವೆಲ್ಲವುಗಳ ಸ್ತರಗಳಲ್ಲಿ ಆಧಾರ ನೀಡಲು, ಪ್ರಜ್ಞೆಯನ್ನು ಪರಿಶುದ್ಧಗೊಳಿಸಲು ಮತ್ತು ಚೈತ್ಯಾತ್ಮಿಕವಾಗಿ ಬದಲು ಮಾಡಲು ಕಾರ್ಯ ಕೈಕೊಳ್ಳುತ್ತದೆ.

*



ಎರಡು ಅಥವಾ ಮೂರು ಬಗೆಯ ಅವರೋಹಣಗಳಿವೆ. ಬೆನ್ನು ಹುರಿಯ ಮೇಲೆ ಆಧಾರ ಪಡೆದಿರುವ ಚಕ್ರಗಳ ತಳಗಳನ್ನು ಸ್ಪರ್ಶಿಸುತ್ತ ಹೋಗುತ್ತಿರುವುದು ಒಂದು ಬಗೆಯದು. ಇನ್ನೊಂದು ಶಿರದ ಮೂಲಕ ದೇಹದಲ್ಲಿ ಸ್ತರದಿಂದ ಸ್ತರದ ವರೆಗೆ ಇಡೀ ದೇಹವನ್ನು ತುಂಬಿಬಿಡುವವರೆಗೆ ಮತ್ತು ಎಲ್ಲ ಕೇಂದ್ರಗಳನ್ನು ತೆರೆದಿಡುವವರೆಗೆ ಸಾಗಿ ಹೋಗುವಂತಹದು. ಬಾಹ್ಯದಿಂದ ಆಧಾರವನ್ನು ಆವರಿಸುವವರೆಗೆ ಆಗುವ ಆವರೋಹಣದ ರೀತಿಯೂ ಇದೆ.

*

ಅವನು ತನ್ನ ಶಿರದ ಮೇಲೆ ಒತ್ತಡದ ಭಾವನೆ ತಂದುಕೊಳ್ಳುತ್ತಿರುವುದು ಶ್ರೀಮಾತೆಯವರ ಶಕ್ತಿ(ಉಚ್ಚತರ ಪ್ರಜ್ಞೆಯ ಶಕ್ತಿ)ಯಿಂದಾಗಿ, ಅದು ಮೇಲ್ಗಡೆಗಿರುವ ಮೂರು ಕೇಂದ್ರಗಳ (ಸಹಸ್ರ ದಲದ ಆಧಾರವಾದ ಬ್ರಹ್ಮರಂಧ್ರ, ಹಣೆಯಲ್ಲಿರುವ ಆಂತರಿಕ ಮನಸ್ಸಿನ ಚಕ್ರ, ಹೃದಯದಲ್ಲಿರುವ ಇಲ್ಲವೆ ಚೈತ್ಯದ ಭಾವನೆ ಇರುವ ಚಕ್ರ) ಮೂಲಕ ತೆರೆದಿರಿಸುವಿಕೆಯನ್ನು ತಯಾರು ಮಾಡುತ್ತದೆ. ಮೇಲ್ಗಡೆಗಿರುವ ದೈವೀ ಶಕ್ತಿಯ ಅಲ್ಪ ಪ್ರಮಾಣದ ಹರಿವಿನಿಂದಾಗಿ ಬೆನ್ನು ಹುರಿಯಲ್ಲಿ ಭಾವನೆ ಬರುತ್ತದೆ. – ಬೆನ್ನು ಹುರಿ ಎಲ್ಲ ಕೇಂದ್ರಗಳ ಆಧಾರವಾಗಿದೆ ಮತ್ತು ದೈವೀ ಶಕ್ತಿ ಒಂದು ಕೇಂದ್ರದಿಂದ ಇನ್ನೊಂದು ಕೇಂದ್ರಕ್ಕೆ ಸುಲಭವಾಗಿ ಹರಿದು ಹೋಗುವ ಪ್ರವೃತ್ತಿ ಹೊಂದಿದೆ. (ಸಹಸ್ರ ದಲ = ಮಾನವ ಇಲ್ಲವೆ ಮಾನಸಿಕ ಪ್ರಜ್ಞೆ ಮತ್ತು ಉಚ್ಚತರ ಇಲ್ಲವೆ ಆಧ್ಯಾತ್ಮಿಕ ಪ್ರಜ್ಞೆ ಭೇಟಿ ಮಾಡುವ ಕೇಂದ್ರ).

*

**ದೈವೀ ಶಕ್ತಿಯ ಆರೋಹಣ ಮತ್ತು ಅವರೋಹಣ ಇವುಗಳ ಕುರುಹುಗಳು**

ನಿನ್ನ ಸಂಕೀರ್ಣ ಅನುಭವದ ವರ್ಣನೆಯಲ್ಲಿ ಎಲ್ಲವೂ ಇದೆ – ಮೊದಲ ಮುಳುಗು ಹಾಕುವಿಕೆಯ ಎಲ್ಲ ಕುರುಹುಗಳಿವೆ. ಮೊದಲನೆಯದಾಗಿ ಸ್ವಲ್ಪ ಮಟ್ಟಿಗಿನ ಆಳದತ್ತ ಸಾಗಿ ಹೋದುದರಿಂದಾಗಿ ಆಂತರಿಕ ಆಳಗಳತ್ತ ಚಲಿಸುತ್ತಿರುವ ಭಾವನೆ ಬಂದಿತ್ತು, ನಂತರ ನಿಶ್ಚಲತೆ ಮತ್ತು ಸಂತೋಷಕರ ಮರಗಟ್ಟುವಿಕೆ ಮತ್ತು ಅಂಗಗಳ ಹಿಡಿದುಕೊಂಡಿರುವಿಕೆ (stiffness) ಇವೆಲ್ಲ ಇದ್ದವು. ಮೇಲ್ಗಡೆಗಿರುವ ಶಕ್ತಿಯೊಂದರ ಒತ್ತಡದಿಂದ, ದೇಹದಿಂದ ಅಂತರ್ಮುಖವಾಗಿ ನಿವೃತ್ತಿ ಹೊಂದುತ್ತಿರುವ ಪ್ರಜ್ಞೆಯ ಒತ್ತಡ ಇದಾಗಿತ್ತು, – ಆ ಒತ್ತಡ ಆಂತರಿಕ ಜೀವನದ ನಿಶ್ಚಲ ಆಧಾರವೆಂದು ದೇಹವನ್ನು ಸ್ಥಿರಗೊಳಿಸಿತು, ಅದು ಒಂದು ಬಗೆಯ ಬಲವತ್ತರವಾದ ನಿಶ್ಚಲ ಸ್ವಯಂಪ್ರೇರಿತ ಆಸನವಾಗಿತ್ತು. ನಂತರ ತರಂಗಗಳು

ಮೇಲ್ಗಡೆಗೆ ಏರಿ ಹೋಗಿ ಶಿರದ ಮೇಲೆರಗುವುದರಿಂದಾಗಿ ನಿನ್ನನ್ನು ಬಹುಮಟ್ಟಿಗೆ ಪ್ರಜ್ಞಾರಹಿತನಾಗುವಂತೆ ಮಾಡಿದವು ಎಂದು ನೀನು ಹೇಳಿರುವಿ. ಇದು ಆಧಾರದಲ್ಲಿರುವ ನಿಮ್ನತರ ಪ್ರಜ್ಞೆಯ ಆರೋಹಣ ಮೇಲ್ಗಡೆಗಿರುವ ಶ್ರೇಷ್ಠತರ ಪ್ರಜ್ಞೆಯನ್ನು ಭೇಟಿ ಮಾಡುವುದಕ್ಕಿತ್ತು. ಆ ಚಲನೆ ತಾಂತ್ರಿಕ ವಿಧಾನದಲ್ಲಿ ಬಹಳಷ್ಟು ಒತ್ತುಕೊಟ್ಟು ಹೇಳಿದ ಕುಂಡಲಿನಿ ಜಾಗ್ರತಗೊಳ್ಳುವಿಕೆಗೆ ಸದೃಶವಾಗಿತ್ತು. ಆ ಜಾಗ್ರತಗೊಳ್ಳುವಿಕೆಯಲ್ಲಿ ದೇಹದಲ್ಲಿ ಸುರುಳಿಸುತ್ತಿಕೊಂಡು ಸುಪ್ತವಾಗಿದ್ದುದು ಬೆನ್ನೆಲುಬಿನ ಮೂಲಕ ಚಕ್ರಗಳು ಹಾಗೂ ಬ್ರಹ್ಮ ರಂಧ್ರದ ಮೂಲಕ ಸಾಗಿ ಹೋಗಿ ಮೇಲ್ಗಡೆಗಿರುವ ಭಗವಂತನನ್ನು ಭೇಟಿ ಮಾಡುವುದಿತ್ತು. ಆದರೆ ನಮ್ಮ ಯೋಗದಲ್ಲಿ ಅದು ವಿಶಿಷ್ಟವಾಗಿರಿಸಿದ ವಿಧಾನವಲ್ಲ, ಆದರೆ ಇಡೀ ನಿಮ್ನತರ ಪ್ರಜ್ಞೆ ತರಂಗಗಳಲ್ಲಿ ಇಲ್ಲವೆ ಇದ್ದ ಹಾಗೆಯೇ ಸ್ವಯಂಪ್ರೇರಣೆಯಿಂದ ಮೇಲ್ಗಡೆ ನುಗ್ಗುವುದಾಗಿದೆ, ಇನ್ನೊಂದೆಡೆಗೆ ದೈವೀ ಪ್ರಜ್ಞೆ ಅದರ ದೈವೀ ಶಕ್ತಿಯೊಂದಿಗೆ ದೇಹದಲ್ಲಿ ಅವರೋಹಣ ಮಾಡುವುದಾಗಿದೆ. ಈ ಅವರೋಹಣ ಶಕ್ತಿ ಹಾಗೂ ಸಾಮರ್ಥ್ಯ, ಪ್ರಕಾಶ, ಸಂತೋಷ ಹಾಗೂ ದಿವ್ಯಾನಂದ, ವಿಸ್ತಾರ ಹಾಗೂ ಸ್ವಾತಂತ್ರ್ಯ, ದೈವೀ ಸತ್ತೆ ಇಲ್ಲವೆ ದೈವೀ ಸಾನ್ನಿಧ್ಯ ಇವುಗಳ ಶಾಂತಿಯಲ್ಲಿ ಹಾಗೂ ಸ್ಥಿರತೆಯಲ್ಲಿ ಸುರಿದುಕೊಳ್ಳುತ್ತಿರುವ ಭಾವನೆ ಬರುತ್ತದೆ – ಇವುಗಳಲ್ಲಿ ಕೆಲವೊಮ್ಮೆ ಯಾವುದೋ ಒಂದು ಬರುತ್ತದೆ, ಮತ್ತೆ ಕೆಲವೊಮ್ಮೆ ಇವುಗಳಲ್ಲಿ ಹಲವಾರು ಒಟ್ಟುಗೂಡಿ ಬರುತ್ತವೆ. ಆರೋಹಣದ ಚಲನೆಗೆ ಭಿನ್ನ ಪರಿಣಾಮಗಳಿವೆ: ಅದು ಪ್ರಜ್ಞೆಯನ್ನು ಮುಕ್ತಗೊಳಿಸಬಹುದು, ಅದರಿಂದಾಗಿ ಮನುಷ್ಯ ಇನ್ನು ಮುಂದೆ ದೇಹದಲ್ಲಿರುವ ಭಾವನೆ ತಂದುಕೊಳ್ಳುವುದಿಲ್ಲ, ಆದರ ಮೇಲ್ಗಡೆಗೆ ಇಲ್ಲವೆ ದೇಹ ಬಹುಮಟ್ಟಿಗೆ ಅಸ್ತಿತ್ವದಲ್ಲಿ ಇಲ್ಲದೆ ಇರುವ ರೀತಿಯಲ್ಲಿ ಇಲ್ಲವೆ ಅದರ ಮುಕ್ತ ವೈಶಾಲ್ಯದಲ್ಲಿ ಕೇವಲ ಒಂದು ಬಿಂದುವಾಗಿರುವಂತೆ ಪ್ರಜ್ಞೆ ಹರಡಿಕೊಂಡಿರುವ ಭಾವನೆ ತಂದುಕೊಳ್ಳುತ್ತಾನೆ; ಅದು ಸತ್ತೆ ಇಲ್ಲವೆ ಸತ್ತೆಯ ಒಂದು ಭಾಗ ದೇಹದಿಂದ ಹೊರಗೆ ಹೋಗಲು, ಬೇರೆಡೆಯಲ್ಲಿ ಚಲಿಸಲು ಶಕ್ತವಾಗುವಂತೆ ಮಾಡಬಹುದು. ಮತ್ತು ಈ ಕ್ರಿಯೆಯ ಜೊತೆಗೆ ಒಂದು ಬಗೆಯ ಭಾಗಶಃ ಸಮಾಧಿ ಇಲ್ಲವೆ ಸಂಪೂರ್ಣ ಸಮಾಧಿ ಇರಬಹುದು, ಇಲ್ಲವೆ ಇನ್ನು ಮುಂದೆ ದೇಹಕ್ಕೆ ಹಾಗೂ ಅದರ ಬಾಹ್ಯ ಸ್ವಭಾವದ ರೂಢಿಗಳಿಗೆ ಸೀಮಿತವಾಗಿರದ ಪ್ರಜ್ಞೆಗೆ ಸಾಮರ್ಥ್ಯ ನೀಡುವುದರಲ್ಲಿ ಪರಿಣಾಮ ಉಂಟಾಗಬಹುದು, ಅದರಿಂದಾಗಿ ಪ್ರಜ್ಞೆ ಆಂತರಿಕ ಮನಸ್ಸಿನ ಆಳಗಳಲ್ಲಿ, ಆಂತರಿಕ ಪ್ರಾಣಿಕದಲ್ಲಿ, ಆಂತರಿಕ ಸೂಕ್ಷ್ಮ ಭೌತಿಕ ಸತ್ತೆಯಲ್ಲಿ, ಚೈತ್ಯದಲ್ಲಿ ಪ್ರವೇಶ ಮಾಡಲು ಒಳಗೆ ಸಾಗಿ ಹೋಗುವಂತಾಗುವುದು, ಅಲ್ಲಿ ಅದು ಅತ್ಯಂತ ಆಳದಲ್ಲಿರುವ ಚೈತ್ಯದ ಆತ್ಮ ಇಲ್ಲವೆ ಆಂತರಿಕ ಮನಸ್ಸು, ಪ್ರಾಣಿಕ ಮತ್ತು



ಸೂಕ್ಷ್ಮ ಭೌತಿಕ ಸತ್ತೆ ಇವುಗಳ ಬಗ್ಗೆ ಅರಿವುಳ್ಳದ್ದಾಗಬಹುದು ಮತ್ತು ಸ್ವಭಾವದ ಈ ಭಾಗಗಳಿಗೆ ಅನುಗುಣವಾದ ಪ್ರಾಂತಗಳಲ್ಲಿ, ಸ್ತರಗಳಲ್ಲಿ, ಲೋಕಗಳಲ್ಲಿ ಸಾಗಿ ಹೋಗಿ ಅಲ್ಲಿ ಜೀವಿಸುವಂತಾಗುವುದು. ನಿನ್ನ ಸಂದರ್ಭದಲ್ಲಿ ಸಂಭವಿಸಿದ್ದು ಇದೇ ಆಗಿದೆ. ಅದು ನಿಮ್ನತರ ಪ್ರಜ್ಞೆಯ (ಯಾವಾಗಲೂ ಈ ಕುರುಹುಗಳಲ್ಲಿ ರೂಪಾಂತರಗೊಂಡದ್ದಲ್ಲ) ಪುನರಾವರ್ತನಗೊಂಡ ಸತತ ಆರೋಹಣವಾಗಿದೆ. ಅದು ಮನಸ್ಸು, ಪ್ರಾಣಿಕ ಮತ್ತು ಭೌತಿಕ ಇವು ಅತಿಮಾನಸ ಸ್ತರದವರೆಗಿನ ಎಲ್ಲ ಉಚ್ಚತರಗಳ ಸಂಪರ್ಕದಲ್ಲಿ ಬರಲು ಶಕ್ತವಾಗುವಂತೆ ಮಾಡುತ್ತದೆ ಮತ್ತು ಆ ಸ್ತರಗಳ ಪ್ರಕಾಶ, ಸಾಮರ್ಥ್ಯ ಹಾಗೂ ಪ್ರಭಾವ ಇವುಗಳಿಂದ ಗರ್ಭಿತವಾಗುವಂತೆ ಮಾಡುತ್ತದೆ. ಮತ್ತು ದೈವೀ ಪ್ರಜ್ಞೆ ಹಾಗೂ ಅದರ ದೈವೀ ಶಕ್ತಿ ಇವುಗಳ ಅವರೋಹಣ ಪುನರಾವರ್ತನೆಗೊಳಗಾಗುವುದು ಹಾಗೂ ಸತತ ಉಳಿದು–ಕೊಳ್ಳುವುದು ಇಡೀ ಸತ್ತೆಯ ಹಾಗೂ ಇಡೀ ಸ್ವಭಾವದ ಪರಿವರ್ತನೆಗೆ ಸಾಧನವಾಗುತ್ತದೆ. ಅವರೋಹಣ ಒಮ್ಮೆ ರೂಢಿಗತವಾದ ನಂತರ ದೈವೀ ಶಕ್ತಿ, ಶ್ರೀಮಾತೆಯವರ ಸಾಮರ್ಥ್ಯ ಇನ್ನು ಮುಂದೆ ಕೇವಲ ಮೇಲಿನಿಂದ ಇಲ್ಲವೆ ಪರದೆಯ ಹಿಂದಿನಿಂದ ಅಷ್ಟೇ ಅಲ್ಲ, ಆದರೆ ಪ್ರಜ್ಞಾಪೂರ್ವಕವಾಗಿ ಸ್ವತಃ ಆಧಾರದ ಮೇಲೆ ಕಾರ್ಯ ಮಾಡಲು ಪ್ರಾರಂಭಿಸುತ್ತದೆ ಮತ್ತು ಅದರ ತೊಂದರೆಗಳು ಹಾಗೂ ಸಾಧ್ಯತೆಗಳೊಂದಿಗೆ ವ್ಯವಹರಿಸುತ್ತದೆ ಮತ್ತು ಯೋಗವನ್ನು ಮುಂದು–ವರಿಸಿಕೊಂಡು ಹೋಗುತ್ತದೆ.

**(Letters to Dilip Kumar Roy, Vol. I: 96–97) – ಶ್ರೀ ಅರವಿಂದರು**

*

ದೈವೀ ಮತ್ತು ಅನಂತ ಜಗನ್ಮಾತೆಗೆ ಸ್ವ–ಸಮರ್ಪಣ, ಅದೆಷ್ಟೇ ಕಠಿಣವಾಗಿದ್ದರೂ ಕೂಡ, ಅದೊಂದೇ ಪರಿಣಾಮಕಾರಿ ಸಾಧನವಾಗಿ ಉಳಿದುಕೊಳ್ಳುವುದು ಮತ್ತು ನೆಲೆಸಬಹುದಾದ ಆಶ್ರಯ ಸ್ಥಾನವಾಗುವುದು. ಅವಳಿಗೆ ಸ್ವ–ಸಮರ್ಪಣ ಮಾಡಿಕೊಳ್ಳುವುದೆಂದರೆ ನಮ್ಮ ಸ್ವಭಾವ ಅವಳ ಕೈಗಳಲ್ಲಿ ಒಂದು ಉಪಕರಣ–ವಾಗಬೇಕು, ಆತ್ಮ ಜಗನ್ಮಾತೆಯ ತೋಳುಗಳಲ್ಲಿ ಒಂದು ಮಗುವಿನಂತಾಗಬೇಕು.

**(CWSA, 12/171) – ಶ್ರೀ ಅರವಿಂದರು**

*

**ಪ್ರಶ್ನೆ :** *ಯೋಗಶಕ್ತಿ ಎಂದರೇನು? ಯೌಗಿಕ ಮನಸ್ಸಿನ ಶಕ್ತಿ, ಯೌಗಿಕ ಪ್ರಾಣ ಶಕ್ತಿ, ಯೌಗಿಕ ದೇಹಶಕ್ತಿ ಎಂದರೇನು?*

**ಶ್ರೀ ಅ :** ಯೌಗಿಕ ಪ್ರಜ್ಞೆಯಲ್ಲಿ ಮನುಷ್ಯ ವಸ್ತು–ವಿಷಯಗಳ ಬಗ್ಗೆ ಅರಿವುಳ್ಳವ–ನಾಗಿರುತ್ತಾನೆ ಅಷ್ಟೇ ಅಲ್ಲ, ಆದರೆ ಶಕ್ತಿಗಳು ಹಾಗೂ ಅವುಗಳ ಹಿಂದಿರುವ ಪ್ರಜ್ಞಾಪೂರ್ಣ ಶಕ್ತಿಗಳ ಬಗ್ಗೆ ಕೂಡ ಅರಿವುಳ್ಳವನಾಗಿರುತ್ತಾನೆ. ಇವೆಲ್ಲವುಗಳ ಬಗ್ಗೆ ಅವನು ತನ್ನಲ್ಲಿಯಷ್ಟೇ ಅರಿವುಳ್ಳವನಾಗಿರುವುದಿಲ್ಲ, ಆದರೆ ವಿಶ್ವದಲ್ಲಿಯೂ ಕೂಡ ಅರಿವುಳ್ಳವನಾಗಿರುತ್ತಾನೆ. ಈ ಹೊಸ ಪ್ರಜ್ಞೆಯ ಅಭಿವೃದ್ಧಿಯ ಜೊತೆಗೆ ಒಂದು ಶಕ್ತಿಯಿದೆ ಮತ್ತು ಅದು ಆ ಪ್ರಜ್ಞೆಯ ಜೊತೆಗೆ ಒಮ್ಮೆಗೆ ಬೆಳೆಯುತ್ತದೆ ಮತ್ತು ಪ್ರಜ್ಞೆ ಬೆಳೆಯುವುದಕ್ಕೆ ಹಾಗೂ ಪರಿಪೂರ್ಣಗೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಈ ಶಕ್ತಿಯೇ ಯೋಗಶಕ್ತಿ. ನಮ್ಮ ಆಂತರಿಕ ಸತ್ತೆಯ ಕೇಂದ್ರ(ಚಕ್ರ)ಗಳಲ್ಲಿ ಅದು ಸುತ್ತಿಹಾಕಿಕೊಂಡು ನಿದ್ರೆಯಲ್ಲಿರುತ್ತದೆ, ತಂತ್ರದಲ್ಲಿ ಕುಂಡಲಿನಿ ಎಂದು ಕರೆಯಲಾದುದರ ತಳದಲ್ಲಿರುತ್ತದೆ. ಆದರೆ ಅದು ಮೇಲ್ಗಡೆಗೂ ಕೂಡ ಇದೆ. ನಮ್ಮ ಶಿರದ ಮೇಲೆ ದೈವೀಶಕ್ತಿಯ ರೂಪದಲ್ಲಿದೆ. – ಅದು ಅಲ್ಲಿ ಸುತ್ತಿಹಾಕಿಕೊಂಡಿ–ರುವುದಿಲ್ಲ, ತೊಡಕಿನಲ್ಲಿರುವುದಿಲ್ಲ, ನಿದ್ರೆಯಲ್ಲಿರುವುದಿಲ್ಲ, ಆದರೆ ಎಚ್ಚತ್ತುಗೊಂಡಿರುತ್ತದೆ, ಜ್ಞಾನವನ್ನು ಹೊಂದಿರುತ್ತದೆ (scient), ವೀರ್ಯವಂತವಾಗಿರುತ್ತದೆ (potent), ಚಾಚಿಕೊಂಡು ವಿಸ್ತಾರವಾಗಿರುತ್ತದೆ, ಅಲ್ಲಿ ಅದು ಪ್ರಕಟಣೆಗಾಗಿ ಕಾದುಕೊಂಡಿರುತ್ತದೆ ಮತ್ತು ಈ ದೈವೀಶಕ್ತಿಗೆ ನಾವು ತೆರೆದುಕೊಂಡಿರಬೇಕು. – ಅದು ಶ್ರೀಮಾತೆಯವರ ಸಾಮರ್ಥ್ಯವಾಗಿರುತ್ತದೆ. ಅದು ಮನಸ್ಸಿನಲ್ಲಿ ತನ್ನನ್ನು ದೈವೀ ಮನಸ್ಸಿನ ಶಕ್ತಿ ಇಲ್ಲವೆ ವಿಶ್ವಂಭರ ಮನಸ್ಸಿನ ಶಕ್ತಿ ಎಂದು ಪ್ರಕಟಿಸುತ್ತದೆ, ವ್ಯಕ್ತಿವಿಶಿಷ್ಟ ಮನಸ್ಸು ಕೈಕೊಳ್ಳಲಾಗದುದನ್ನೆಲ್ಲ ಅದು ಕೈಕೊಳ್ಳುತ್ತದೆ, ಹಾಗಾಗಿ ಅದು ಯೌಗಿಕ ಮನಸ್ಸಿನ ಶಕ್ತಿ. ಅದು ಪ್ರಾಣಿಕದಲ್ಲಿ ಇಲ್ಲವೆ ದೇಹದಲ್ಲಿ ಪ್ರಕಟಗೊಂಡು ಅದೇ ರೀತಿಯಲ್ಲಿ ಕಾರ್ಯ ಕೈಕೊಂಡರೆ ಯೌಗಿಕ ಪ್ರಾಣಶಕ್ತಿ ಇಲ್ಲವೆ ಯೌಗಿಕ ದೇಹಶಕ್ತಿಯಾಗಿ–ರುತ್ತದೆಂಬುದು ಸ್ಪಷ್ಟವಾಗುತ್ತದೆ. ಬಾಹ್ಯದಲ್ಲಿ ಹಾಗೂ ಮೇಲ್ಗಡೆಗೆ ಸ್ಫೋಟಗೊಂಡು ಈ ಎಲ್ಲ ರೂಪಗಳಲ್ಲಿ ಅದು ಜಾಗ್ರತಗೊಳ್ಳಬಹುದು ಇಲ್ಲವೆ ಕೆಳಗಿಳಿದು ಹೋಗಿ ಅಲ್ಲಿ ವಸ್ತು–ವಿಷಯಗಳಿಗಾಗಿ ನಿಶ್ಚಿತ ಸಾಮರ್ಥ್ಯವಾಗಬಹುದು. ಕಾರ್ಯ ಕೈಕೊಳ್ಳುತ್ತ, ತನ್ನ ಆಳಿಕೆಯನ್ನು ಸ್ಥಾಪಿಸುತ್ತ, ಮೇಲ್ಗಡೆಯಿಂದ ವಿಸ್ತರಿಸಿಕೊಳ್ಳುತ್ತ ತನ್ನನ್ನು ಅದು ದೇಹದಲ್ಲಿ ಕೆಳ ಮುಖವಾಗಿ ಸುರಿದುಕೊಳ್ಳಬಹುದು, ನಮ್ಮಲ್ಲಿ ಅತ್ಯಂತ ಕೆಳಗಿರುವುದರ ಜೊತೆಗೆ ಮೇಲ್ಗಡೆಗೆ ನಮಗೆ ಅತ್ಯುಚ್ಚವೆನಿಸುವುದನ್ನು ಜೋಡಿಸಬಹುದು, ವ್ಯಕ್ತಿಯನ್ನು ವಿಶ್ವವ್ಯಾಪಿ ವಿಶ್ವಂಭರತೆಯಲ್ಲಿ ಇಲ್ಲವೆ ಪರಿಪೂರ್ಣತೆಯಲ್ಲಿ ಮತ್ತು ವಿಶ್ವಾತೀತವಾದುದರಲ್ಲಿ ಬಿಡುಗಡೆಗೊಳಿಸಬಹುದು.

**(CWSA, 32/192)** **– ಶ್ರೀ ಅರವಿಂದರು**

*



ಈ ಯೋಗದಲ್ಲಿ ಏಕಾಗ್ರತೆ ಕೈಕೊಳ್ಳುವುದರ ಹೊರತಾಗಿ ಬೇರೆ ವಿಧಾನವಿಲ್ಲ, ಆ ಏಕಾಗ್ರತೆಯನ್ನು ಹೃದಯದಲ್ಲಿ ಕೈಕೊಳ್ಳುವುದಕ್ಕೆ ಆದ್ಯತೆ ನೀಡಬೇಕು ಮತ್ತು ಅಲ್ಲಿ ಶ್ರೀಮಾತೆಯವರ ಸಾನ್ನಿಧ್ಯ ಹಾಗೂ ಸಾಮರ್ಥ್ಯಗಳಿಗೆ ಕರೆ ಕೊಡಬೇಕು, ನಿಮ್ಮ ಸತ್ತೆಯನ್ನು ಕೈಗೆತ್ತಿಕೊಂಡು ಅವರ ಕಾರ್ಯಗತಿಗಳ ಮೂಲಕ ಪ್ರಜ್ಞೆಯನ್ನು ಪರಿವರ್ತನೆಗೊಳಪಡಿಸಿರೆಂದು ಅವರನ್ನು ಕೇಳಿಕೊಳ್ಳಬೇಕು. ಹಾಗೆಯೇ ಮನುಷ್ಯ ತನ್ನ ಶಿರದಲ್ಲಿ ಇಲ್ಲವೆ ಹುಬ್ಬುಗಳ ಮಧ್ಯೆ ಏಕಾಗ್ರತೆ ವಹಿಸಬಹುದು, ಆದರೆ ಈ ವಿಧಾನ ಬಹಳಷ್ಟು ಜನರಿಗೆ ಹೆಚ್ಚು ಕಠಿಣವಾದ ತೆರೆದಿರಿಸಿಕೊಳ್ಳುವಿಕೆಯಾಗಿರುತ್ತದೆ. ಮನಸ್ಸು ಸ್ಥಿರಗೊಂಡಾಗ, ಏಕಾಗ್ರತೆ ಬಲವತ್ತರವಾದಾಗ, ಆಭೀಪ್ಸೆ ಗಾಢವಾದಾಗ ಅನುಭವ ಪ್ರಾರಂಭವಾಗುತ್ತದೆ. ನಂಬಿಕೆ ಹೆಚ್ಚಾದ ಹಾಗೆ ಪರಿಣಾಮ ತೀವ್ರಗತಿಯದಾಗುವ ಸಂಭವವಿರುತ್ತದೆ. ಉಳಿದದ್ದೆಲ್ಲದಕ್ಕಾಗಿ ಮನುಷ್ಯ ಕೇವಲ ತನ್ನ ಪ್ರಯತ್ನಗಳನ್ನು ಅವಲಂಬಿಸಿರಬಾರದು, ಆದರೆ ದೇವನೊಡನೆ ಸಂಪರ್ಕ ಸಾಧಿಸುವುದರಲ್ಲಿ ಮತ್ತು ಶ್ರೀಮಾತೆಯವರ ಸಾನ್ನಿಧ್ಯ ಹಾಗೂ ಸಾಮರ್ಥ್ಯಗಳನ್ನು ಗ್ರಹಿಸುವುದರಲ್ಲಿ ಯಶಸ್ವಿಯಾಗಬೇಕು.

**(CWSA, 29/107)** **– ಶ್ರೀ ಅರವಿಂದರು**

*

## ಅನಂತ ದೈವೀ ಶಕ್ತಿಯ ರೀತಿ

### ದೈವೀ ಶಕ್ತಿಯಲ್ಲಿ ಹಾಗೂ ಅವಳ ಕಾರ್ಯಗತಿಗಳಲ್ಲಿ ನಂಬಿಕೆ ಇರಿಸುವದರ ಆವಶ್ಯಕತೆ

ನಮ್ಮ ಮೂಲಕ ತನ್ನ ನೆರವೇರಿಕೆ ಕಂಡುಕೊಳ್ಳುವ, ಯೋಗ ಸಿದ್ಧಿಯನ್ನು ನೆರವೇರಿಸುವ, ನಮ್ಮ ಜೀವನ ಕಾರ್ಯವನ್ನು ನೆರವೇರಿಸುವ ಹಾಗೂ ಅನಿಷ್ಟದ ಪರದೆಯ ಹಿಂದೆ ತೋರಿಕೆಗೆ ಇದ್ದಾಗಲೂ ಕೂಡ ಎಲ್ಲವನ್ನೂ ನಮ್ಮ ಒಳ್ಳೆಯದಕ್ಕಾಗಿ ಕಾರ್ಯಗತಗೊಳಿಸುವ ದೇವನ ಪ್ರೇಮ ಹಾಗೂ ವಿವೇಕದಲ್ಲಿ ನಂಬಿಕೆಯಿರಬೇಕು, ಯೋಗದಲ್ಲಿ ಹಾಗೂ ಜೀವನದಲ್ಲಿ ದೈವೀ ಜ್ಞಾನ, ಸಾಮರ್ಥ್ಯ ಹಾಗೂ ಸಂತೋಷ ಇವುಗಳನ್ನು ಈ ಆಧಾರದಲ್ಲಿ ಪೋಷಿಸಲು, ಕಾರ್ಯಗತಗೊಳಿಸಲು ಮತ್ತು ನೆರವೇರಿಕೆ ಕಂಡುಕೊಳ್ಳಲು ಆ ದೇವನಿಂದ ಪ್ರಕಟಿಸಲಾದ ದೈವೀ ಶಕ್ತಿಯಲ್ಲಿ ನಂಬಿಕೆ ಇರಬೇಕು. ಶ್ರದ್ಧೆ ಇಲ್ಲದೆ ಇದ್ದಾಗ ಶಕ್ತಿ ಇರುವುದಿಲ್ಲ, ಅಪರಿಪೂರ್ಣ ಶ್ರದ್ಧೆಯಿದ್ದಾಗ ಅಪರಿಪೂರ್ಣ ಶಕ್ತಿ ಇರುತ್ತದೆ. ಅಪರಿಪೂರ್ಣತೆ ನಂಬಿಕೆಯ ಶಕ್ತಿಯಲ್ಲಿರಬಹುದು, ಇಲ್ಲವೆ ಅದು ಉಂಟು ಮಾಡುವ ಜ್ಞಾನೋದಯದಲ್ಲಿ ಇರಬಹುದು. ಮೊದಲು ನಂಬಿಕೆಯಲ್ಲಿ ಪೂರ್ತಿ ಶಕ್ತಿಯಿರುವುದು ಸಾಕಾಗುತ್ತದೆ, ಏಕೆಂದರೆ ಯೋಗದ

ಪ್ರಾರಂಭದ ದೆಸೆಯಲ್ಲಿ ನಾವು ಪೂರ್ತಿ ಜ್ಞಾನೋದಯ ಪಡೆದಿರುವುದಿಲ್ಲ. ಆಗ ನಾವು ತಪ್ಪು ಮಾಡುವುದು, ಎಡವುವುದು ಹೇಗಾದರೂ ಇರಲಿ ನಮ್ಮ ನಂಬಿಕೆಯ ಶಕ್ತಿ ನಮ್ಮನ್ನು ಪೋಷಿಸುತ್ತದೆ. ನಾವು ಕಾಣಲು ಶಕ್ತರಾಗದೆ ಇದ್ದಾಗ ದೇವ ಪ್ರಕಾಶವನ್ನು ಹಿಂದಿಟ್ಟುಕೊಂಡಿದ್ದಾನೆ ಎಂದು ತಿಳಿದುಕೊಳ್ಳುತ್ತೇವೆ, ವಿಜಯದತ್ತ ಒಂದು ಹೆಜ್ಜೆ ಎಂದು ನಮ್ಮ ಮೇಲೆ ಸೋಲನ್ನು ಅವನು ಹೇರುವ ರೀತಿಯಲ್ಲಿ, ದೋಷ ಜ್ಞಾನದತ್ತ ಒಂದು ಹೆಜ್ಜೆ ಎಂದು ಅದನ್ನು ನಮ್ಮ ಮೇಲೆ ಹೇರುತ್ತಾನೆ.

*

## ಕೃತ್ರಿಮ ಮಾರ್ಗಗಳು ಮತ್ತು ದೈವೀ ಅನಂತನ ಸ್ವಾತಂತ್ರ್ಯ

ನಿಮ್ಮ ಇಡೀ ಮಾನವ ಸ್ವಭಾವವನ್ನು ದೈವೀ ಸ್ವಭಾವವನ್ನಾಗಿ ಮಾಡುವ ಕೆಲವೇ ವರ್ಷಗಳಲ್ಲಿ ಶತಮಾನಗಳ ಕಾಲದಲ್ಲಾದ ಉತ್ಕ್ರಾಂತಿಯನ್ನು ಮುಂದೆ ತಳ್ಳುವ ಪ್ರಚಂಡ ಕಾರ್ಯವನ್ನು ನಿಮ್ಮೊಳಗೆ ಕೈಕೊಳ್ಳಲಾಗುತ್ತಿದೆ. ಅವಶ್ಯವಾಗುವ ಹೆಚ್ಚಿನ ಸಮಯ ಕುರಿತು ನೀವು ಕರುಬ (grudge) ಬಾರದು. ಕೂಡಲೆ ಪರಿಣಾಮಗಳು ಕಂಡುಬರುವಂತೆ ಮಾಡುವ ಇತರ ಮಾರ್ಗಗಳಿವೆ, ನೀವು ನಿಮ್ಮಲ್ಲಿಯೇ ಕಾರ್ಯ ಕೈಕೊಳ್ಳುವಂತೆ ನಿಮಗೆ ಕೆಲವೊಂದು ನಿಶ್ಚಿತ ಕ್ರಿಯೆಯನ್ನು ನೀಡುತ್ತವೆ. ನೀವು ಏನನ್ನೋ ಕೈಕೊಂಡಿರಿ ಎಂಬ ಭಾವನೆಯನ್ನು ನಿಮ್ಮ ಅಹಂಕಾರಕ್ಕೆ ಕೊಡಲಾಗುತ್ತದೆ; ಇಂದು ಹಲವಾರು ಪ್ರಾಣಾಯಾಮಗಳು, ಆಸನಗಳಿಗೆ ಇನ್ನೂ ಹೆಚ್ಚಿನ ಕಾಲ, ಜಪದ ಪುನರಾವರ್ತನೆಗಳು, ಅಷ್ಟೊಂದನ್ನು ಕೈಕೊಳ್ಳಲಾಯಿತು, ಅಷ್ಟೊಂದು ನಿಶ್ಚಿತ ಪ್ರಗತಿಯನ್ನು ಸಾಧಿಸಲಾಯಿತು, ಎನ್ನುವ ರೀತಿಯಲ್ಲಿ ಅದಿರುತ್ತದೆ. ಆದರೆ ಒಮ್ಮೆ ನೀವು ಈ ಮಾರ್ಗವನ್ನು ಆಯ್ದುಕೊಂಡಿರಾದರೆ ಅದಕ್ಕೆ ನೀವು ಅಂಟಿಕೊಳ್ಳಬೇಕು. ಇವು ಮಾನವ ಪದ್ಧತಿಗಳು. ದೈವೀ ಶಕ್ತಿ ಕೈಕೊಳ್ಳುವ ರೀತಿಯವಲ್ಲ, ಅವಳ ಕಾರ್ಯ ಮೌನದಿಂದ, ಕೆಲವೊಮ್ಮೆ ಗ್ರಹಿಕೆಗೆ ಬಾರದ ರೀತಿಯಲ್ಲಿ ಗುರಿಯೆಡೆಗೆ ನಿಧಾನಗತಿಯಲ್ಲಿ ಚಲಿಸುತ್ತದೆ; ಇಲ್ಲಿ ಮುನ್ನಡೆ ಸಾಧಿಸುತ್ತದೆ, ಅಲ್ಲಿ ತಡೆದು ನಿಲ್ಲುತ್ತದೆ, ನಂತರ ಬಲವತ್ತರವಾಗಿ, ವಿಜಯೋತ್ಸಾಹದಿಂದ ಅದು ಕೈಕೊಂಡ ಮಹತ್ವಪೂರ್ಣ ವಿಷಯವನ್ನು ತೆರೆದು ತೋರಿಸುತ್ತದೆ. ಕೃತ್ರಿಮ ಮಾರ್ಗಗಳು ಮನುಷ್ಯನ ಬುದ್ಧಿಮತ್ತೆ ಕಡಿದು ತೆಗೆದ ಕಾಲುವೆಗಳ ಹಾಗಿರುತ್ತವೆ, ನೀವು ಸುಲಭವಾಗಿ, ಸುರಕ್ಷಿತವಾಗಿ, ನಿಶ್ಚಿತವಾಗಿ ಪ್ರಯಾಣ ಮಾಡುತ್ತೀರಿ, ಆದರೆ ಆ ಪ್ರಯಾಣ ಒಂದು ಸ್ಥಳದಿಂದ ಇನ್ನೊಂದು ಸ್ಥಳದವರೆಗೆ ಇರುತ್ತದೆ. ಈ ಮಾರ್ಗ ವಿಶಾಲವಾದದ್ದು. ಗುರುತಿಸಿದ ದಾರಿಗಳಿಲ್ಲದ ಸಾಗರ, ಅದರ ಮೂಲಕ ನೀವು ಜಗತ್ತಿನ ಎಲ್ಲ



ಭಾಗಗಳಲ್ಲಿ ಸಂಚರಿಸಬಲ್ಲಿರಿ, ಅನಂತನ ಸ್ವಾತಂತ್ರದಲ್ಲಿ ಪ್ರವೇಶ ಪಡೆಯುತ್ತೀರಿ. ನಿಮಗೆ ಅವಶ್ಯವಿದ್ದ ಎಲ್ಲವೂ ಹೀಗಿದೆ: ಹಡಗು, ಚಾಲಕ ಚಕ್ರ (steering wheel), ಕಂಪಾಸು, ಚಲನೆಗೆ ಸಂಬಂಧಿಸಿದ ಸಾಮರ್ಥ್ಯ (motive power) ಮತ್ತು ಕುಶಲ ಕಪ್ತಾನ. ಬ್ರಹ್ಮವಿದ್ಯೆ ನಿಮ್ಮ ಹಡಗು, ನಂಬಿಕೆ ನಿಮ್ಮ ಚಾಲಕ ಚಕ್ರ, ಸ್ವ–ಶರಣಾಗತಿ ನಿಮ್ಮ ಕಂಪಾಸ, ದೇವ ಆಜ್ಞೆ ಮಾಡಿದಾಗ ಜಗತ್ತುಗಳನ್ನು ತಯಾರಿಸುವವಳು, ಅವುಗಳಿಗೆ ನಿರ್ದೇಶನ ಕೊಡುವವಳು ಮತ್ತು ನಾಶ ಮಾಡುವವಳು ನಿಮ್ಮ ಚಲನೆಗೆ ಸಂಬಂಧಿಸಿದ ಸಾಮರ್ಥ್ಯ, ದೇವನೇ ಸ್ವತಃ ನಿಮ್ಮ ಕಪ್ತಾನ. ಆದರೆ ಕಾರ್ಯ ಕೈಕೊಳ್ಳುವ ಅವನದೇ ರೀತಿಯಿದೆ ಮತ್ತು ಪ್ರತಿಯೊಂದಕ್ಕೂ ಅವನದೇ ಕಾಲವಿದೆ.

**(CWSA, 13/87–88)**

*

## ಅತಿಮಾನಸ ಯೋಗದ ಪ್ರಧಾನ ಶಬ್ದ: ಶರಣಾಗತಿ

ದೇವನತ್ತ ಆತ್ಮದ ಆರೋಹಣ ಮತ್ತು ಅದೇ ವೇಳೆಗೆ ಮೈವೆತ್ತ ಸ್ವಭಾವದಲ್ಲಿ ದೇವ ಪ್ರಮುಖನ ಅವರೋಹಣ ಇದು ಅತಿಮಾನಸ ಯೋಗವಾಗಿದೆ. ಒಂದು ಕೇಂದ್ರದಲ್ಲಿ ಆತ್ಮ, ಮನಸ್ಸು, ಪ್ರಾಣ ಮತ್ತು ದೇಹ ಇವುಗಳ ಎಲ್ಲವನ್ನೂ ಒಟ್ಟಿಗಿರಿಸುವ ಅಭೀಪ್ಸೆ ಮೇಲ್ಮುಖವಾಗಿರುವುದನ್ನು ಆರೋಹಣ ಒತ್ತಾಯದಿಂದ ಬೇಡುತ್ತದೆ, ಮತ್ತು ಅವರೋಹಣವೆಂದರೆ, ಅನಂತನೂ, ಸನಾತನನೂ ಆದ ಭಗವಂತನಿಗೆ ಇಡೀ ಸತ್ತೆ ಕರೆ ಕೊಡುವುದಾಗಿದೆ. ಈ ಕರೆ ಕೊಡುವಿಕೆ, ಈ ಅಭೀಪ್ಸೆ ಅಲ್ಲಿದ್ದರೆ, ಸತತ ಬೆಳೆಯುತ್ತಿದ್ದು ಎಲ್ಲ ಸ್ವಭಾವವನ್ನು ಹಿಡಿದುಕೊಂಡರೆ, ಆಗ ಮಾತ್ರ ಅದರ ಅತಿಮಾನಸ ಪರಿವರ್ತನೆ ಸಾಧ್ಯವಾಗುತ್ತದೆ. ಈ ಮರ್ತ್ಯ, ಅರ್ಧ ಪ್ರಜ್ಞೆಯಿರುವ ಅಸ್ತಿತ್ವವನ್ನು ಸುತ್ತುವರಿದ ಹಾಗೂ ಅದರ ಮೇಲ್ಗಡೆಗೆ ಹಾಗೂ ಹಿಂದೆ ಅದಾಗಲೇ ಇರುವ ಶ್ರೇಷ್ಠತರ ದೈವೀ ಪ್ರಜ್ಞೆಯನ್ನು ಸ್ವೀಕರಿಸುವುದಕ್ಕಾಗಿ ಹಾಗೂ ಅದರಲ್ಲಿ ಪ್ರವೇಶಿಸುವುದಕ್ಕಾಗಿ ಅಲ್ಲಿ ತೆರೆದಿರಿಸಿಕೊಳ್ಳುವಿಕೆ ಹಾಗೂ ಶರಣಾಗತಿ ಇರಬೇಕು.

ಅನಂತ ದೈವೀ ಮಾತೆಯ ಕೈಗಳಲ್ಲಿ ಆತ್ಮ ಒಂದು ಮಗುವಿನಂತೆ ಆಗುವವರೆಗೆ, ದೈವೀ ಶಕ್ತಿಯ, ಎಂದೆಂದಿಗೂ ಬಲವತ್ತರವಾದ, ಮತ್ತು ಒತ್ತು ನೀಡುವ ಕ್ರಿಯೆಯನ್ನು ಅದು ಸಹಿಸಿಕೊಳ್ಳುವ ಕ್ಷಮತೆಯನ್ನು ಹೊಂದಿರಬೇಕು, ಇತರ ಯೋಗಕ್ಕೆ ಪರಿಚಿತವಾಗಿರುವ ಸಾಧನಗಳನ್ನು ಉಪಯೋಗಿಸಬಹುದು ಮತ್ತು ಅವುಗಳನ್ನು ಕಾಲಕಾಲಕ್ಕೆ ಗೌಣ ಸಾಧನಗಳೆಂದು ಈ ಯೋಗದಲ್ಲಿ ಉಪಯೋಗಿಸ–ಲಾಗಿದೆ, ಆದರೆ ಅವು ಈ ಶ್ರೇಷ್ಠ ನಿಬಂಧನೆಗಳಿಲ್ಲದೆ ಶಕ್ತಿಹೀನವಾಗಿರುತ್ತವೆ, ಮತ್ತು

ಒಮ್ಮೆ ನಿಬಂಧನೆಗಳಲ್ಲಿದ್ದಾಗ, ಅವು ಅತ್ಯವಶ್ಯವಾಗಿರುವುದಿಲ್ಲ. ಕೊನೆಗೆ ಕಂಡುಬರುವುದೇನೆಂದರೆ ಮನಸ್ಸು, ಪ್ರಾಣ ಮತ್ತು ದೇಹ ಇವುಗಳ ಯಾವುದೇ ಪ್ರಯತ್ನದ ಮೂಲಕವಾಗಲಿ, ಇಲ್ಲವೆ ಯಾವುದೇ ಮನೋವೈಜ್ಞಾನಿಕ ಇಲ್ಲವೆ ಭೌತಿಕ ವಿಧಾನದಿಂದಾಗಲಿ ಈ ಯೋಗವನ್ನು ಮುನ್ನಡೆಸಿಕೊಂಡು ಹೋಗ–ಲಾಗುವುದಿಲ್ಲ, ಅದರೆ ಪರಮೋಚ್ಚ ದೈವೀ ಶಕ್ತಿಯ ಕ್ರಿಯೆಯಿಂದ ಅದು ಸಾಧ್ಯವಾಗುತ್ತದೆ. ಆದರೆ ಅವಳ ರೀತಿ ಒಮ್ಮೆಗೆ ರಹಸ್ಯ ಗರ್ಭಿತವಾಗಿ ನೇರವಾದದ್ದು ಮತ್ತು ಬಾಹ್ಯದಲ್ಲಿ ಜಟಿಲವಾದದ್ದು, ಅರಿಯಲಾಗುವಂತೆ ಅನುಸರಿಸುವುದಕ್ಕೆ ಮತ್ತು ನಮ್ಮ ಮಾನವ ಬುದ್ಧಿಮತ್ತೆಯಿಂದ ಸೂತ್ರರೂಪದಲ್ಲಿ ಬಹಳಷ್ಟು ಕತ್ತರಿಸಿ ತೆಗೆದು ವ್ಯಾಖ್ಯೆ ನೀಡುವುದಕ್ಕೆ ಅತಿ ಶ್ರೇಷ್ಠ, ಅತಿ ಸಂಪೂರ್ಣ ಹಾಗೂ ಸೂಕ್ಷ್ಮವಾದದ್ದು.

ಮನುಷ್ಯ ತನ್ನದೇ ಪ್ರಯತ್ನದಿಂದ ತನ್ನನ್ನು ಮನುಷ್ಯನಾದವನಿಗಿಂತ ಹೆಚ್ಚಿನವನನ್ನಾಗಿ ಮಾಡಲು ಸಾಧ್ಯವಿಲ್ಲ, ಆದರೆ ತನ್ನಲ್ಲಿ ಕಾರ್ಯ ಮಾಡುವುದಕ್ಕಾಗಿ ದೈವೀ ಸತ್ಯ ಹಾಗೂ ಅದರ ಸಾಮರ್ಥ್ಯಕ್ಕೆ ಕರೆ ಕೊಡಬಲ್ಲ, ದೈವೀ ಸ್ವಭಾವದ ಒಂದು ಅವರೋಹಣ ಮಾತ್ರ ಮಾನವ (ತುಂಬಿಕೊಳ್ಳುವ) ತೊಟ್ಟಿಯನ್ನು ದೈವೀಕರಣಗೊಳಿಸಬಲ್ಲದು. ಪರಮೋಚ್ಚ ರೂಪಪರಿವರ್ತನೆಗೆ ಒಳಪಡಿಸುವ ದೈವೀ ಸಾಮರ್ಥ್ಯ ಯೋಗದ ಪ್ರಧಾನ ಶಬ್ದವಾಗಿದೆ.

**(Essays Divine & Human, p. 365–66)**

*

## ದೈವೀ ಶಕ್ತಿಯ ಕ್ರಿಯೆ

ಅನಂತನ ಹಾಗೂ ಸನಾತನನ ದೈವೀ ಶಕ್ತಿ ನಮ್ಮ ಅಂತರಂಗದಲ್ಲಿ ಅವರೋಹಣ ಮಾಡುತ್ತದೆ, ಕಾರ್ಯ ಕೈಕೊಳ್ಳುತ್ತದೆ, ಮನೋವೈಜ್ಞಾನಿಕವಾಗಿ ನಮ್ಮ ಸದ್ಯದ ರೂಪ ತಾಳಿರುವವುಗಳನ್ನು ಮುರಿದು ಹಾಕುತ್ತದೆ, ಪ್ರತಿಯೊಂದು ಗೋಡೆಯನ್ನು ಚೂರು ಚೂರು ಮಾಡುತ್ತದೆ, ವಿಶಾಲಗೊಳಿಸುತ್ತದೆ, ಮುಕ್ತಗೊಳಿಸುತ್ತದೆ ಮತ್ತು ಅದು ಹೊಸದಾದ, ಹೆಚ್ಚು ಶ್ರೇಷ್ಠವಾದ ದೃಷ್ಟಿಯ ಸಾಮರ್ಥ್ಯವನ್ನು, ಭಾವಕಲ್ಪನೆ (ideation) ಯನ್ನು, ಗ್ರಹಿಕೆಯನ್ನು, ಹೊಸದಾದ ಜೀವನೋದ್ದೇಶಗಳನ್ನು ನಮ್ಮ ಮುಂದಿರಿಸುತ್ತದೆ, ಆತ್ಮ ಹಾಗೂ ಅದರ ಉಪಕರಣಗಳನ್ನು ಹೆಚ್ಚಿನ ರೀತಿಯಲ್ಲಿ ಭವ್ಯವಾಗಿರಿಸುತ್ತದೆ ಮತ್ತು ಅವುಗಳಿಗೆ ಹೊಸ ಮಾದರಿಯನ್ನು ಕೊಡುತ್ತದೆ, ಪ್ರತಿಯೊಂದು ಅಪರಿಪೂರ್ಣತೆಯ ತಪ್ಪು ಮನಗಾಣುವಂತೆ ಮಾಡಲು ಮತ್ತು ಅದನ್ನು ನಾಶ ಪಡಿಸಲು ನಮ್ಮನ್ನು



ಎದುರಿಸುತ್ತದೆ, ಹೆಚ್ಚು ಶ್ರೇಷ್ಠವಾದ ಪರಿಪೂರ್ಣತೆಯತ್ತ ತೆರೆದಿರಿಸುತ್ತದೆ, ಅಲ್ಪ ಅವಧಿಯಲ್ಲಿ ಹಲವಾರು ಜೀವಿತ ಕಾಲಗಳ ಇಲ್ಲವೆ ಯುಗಗಳ ಕಾರ್ಯವನ್ನು ಕೈಕೊಳ್ಳುತ್ತದೆ, ಅದರಿಂದಾಗಿ ನಮ್ಮ ಅಂತರಂಗದಲ್ಲಿ ಹೊಸ ಜನ್ಮಗಳು ಹಾಗೂ ನೀಳನೋಟ (vista)ಗಳು ಸತತ ತೆರೆದುಕೊಳ್ಳುತ್ತವೆ. ವಿಸ್ತರಣ ಪ್ರವೃತ್ತಿರುವ ಅವಳು ತನ್ನ ಕ್ರಿಯೆಯಲ್ಲಿ ದೇಹದಲ್ಲಿ ಬಂಧನಕ್ಕೊಳಗಾದ ಪ್ರಜ್ಞೆಯನ್ನು ದೇಹದಲ್ಲಿರುವ ಅದರ ಬಂಧನದಿಂದ ಮುಕ್ತಗೊಳಿಸುತ್ತಾಳೆ, ಅದು ಸಮಾಧಿಯಲ್ಲಿ, ನಿದ್ರೆಯಲ್ಲಿ, ಇಲ್ಲವೆ ಎಚ್ಚತ್ತ ಸ್ಥಿತಿಯಲ್ಲಿ ಹೊರಗೆ ಹೋಗಬಲ್ಲದು, ಮತ್ತು ಲೋಕಗಳಲ್ಲಿ (worlds) ಇಲ್ಲವೆ ಈ ಜಗತ್ತಿನ ಬೇರೆ ಪ್ರಾಂತಗಳಲ್ಲಿ ಪ್ರವೇಶ ಮಾಡಬಹುದು ಮತ್ತು ಅಲ್ಲಿ ಕ್ರಿಯೆ ಕೈಕೊಳ್ಳಬಹುದು ಇಲ್ಲವೆ ತನ್ನ ಅನುಭವವನ್ನು ಹೊತ್ತುಕೊಂಡು ಮರಳಿ ಬರಬಹುದು. ದೇಹ ಕೇವಲ ತನ್ನ ಚಿಕ್ಕ ಭಾಗ ಎಂಬ ಭಾವನೆ ಹೊಂದಿ ಅದು ವಿಸ್ತರಿಸಿಕೊಳ್ಳುತ್ತದೆ ಮತ್ತು ಯಾವುದರಲ್ಲಿ ಒಳಗೊಂಡಿತ್ತೋ ಅದನ್ನು ಒಳಗೊಳ್ಳಲು ಪ್ರಾರಂಭಿಸುತ್ತದೆ, ಮತ್ತು ಅದು ವಿಶ್ವವ್ಯಾಪಿ ಪ್ರಜ್ಞೆಯನ್ನು ಸಿದ್ಧಿಸಿಕೊಳ್ಳುತ್ತದೆ ಮತ್ತು ವಿಶ್ವದೊಂದಿಗೆ ಸಮವ್ಯಾಪಕತೆ ಪಡೆಯಲು ವಿಸ್ತರಿಸಿಕೊಳ್ಳುತ್ತದೆ. ಕೇವಲ ಬಾಹ್ಯ ಅವಲೋಕನ ಮತ್ತು ಸಂಪರ್ಕಗಳಿಂದ ಜಗತ್ತಿನಲ್ಲಿ ಲೀಲೆಯಲ್ಲಿ ತೊಡಗಿಕೊಂಡಿರುವ ಶಕ್ತಿಗಳನ್ನು ತಿಳಿದುಕೊಳ್ಳುವುದಷ್ಟೇ ಅಲ್ಲ, ಆದರೆ ಆಂತರಿಕವಾಗಿ ತಿಳಿದುಕೊಳ್ಳಲು ಪ್ರಾರಂಭಿಸುತ್ತದೆ. ಅವುಗಳ ಚಲನೆಯ ಭಾವನೆ ತಂದುಕೊಳ್ಳುತ್ತದೆ. ಅವುಗಳ ಕಾರ್ಯ ವಿಧಾನಗಳನ್ನು ಭಿನ್ನವಾಗಿರಿಸಿ ನೋಡುತ್ತದೆ ಮತ್ತು ಅವುಗಳ ಮೇಲೆ ಅದು ಕೂಡಲೆ ಕಾರ್ಯಾಚರಣೆ ನಡೆಸಬಹುದು, ಅದು ವಿಜ್ಞಾನಿಯೊಬ್ಬ ಭೌತಿಕ ಶಕ್ತಿಗಳ ಮೇಲೆ ಕಾರ್ಯಾಚರಣೆ ಕೈಕೊಳ್ಳುವಂತಿರುತ್ತದೆ ಮತ್ತು ಅವುಗಳ ಕ್ರಿಯೆಯನ್ನು ಮತ್ತು ಪರಿಣಾಮಗಳನ್ನು ನಮ್ಮ ಮನಸ್ಸು, ಪ್ರಾಣ ಹಾಗೂ ದೇಹ ಇವುಗಳಲ್ಲಿ ಒಪ್ಪಿಕೊಳ್ಳಬಹುದು, ಇಲ್ಲವೆ ತಿರಸ್ಕರಿಸಬಹುದು ಇಲ್ಲವೆ ಮಾರ್ಪಡಿಸಬಹುದು, ಬದಲಾಯಿಸಬಹುದು, ಭವ್ಯ ಹೊಸ ಸಾಮರ್ಥ್ಯಗಳನ್ನು ಚಲನೆಗಳನ್ನು ಸ್ವಭಾವದ ಹಳೆಯ, ಚಿಕ್ಕ ಕಾರ್ಯ ವಿಧಾನಗಳ ಸ್ಥಾನದಲ್ಲಿ ಸೃಷ್ಟಿಸಬಹುದು. ವಿಶ್ವಂಭರ ಮನಸ್ಸಿನ ಶಕ್ತಿಗಳ ಕಾರ್ಯಗತಿಗಳನ್ನು ಗ್ರಹಿಸುವುದನ್ನು ನಾವು ಪ್ರಾರಂಭಿಸುತ್ತೇವೆ ಮತ್ತು ಆ ಕಾರ್ಯಗತಿಯಿಂದ ನಮ್ಮ ಯೋಚನೆಗಳನ್ನು ಹೇಗೆ ಸೃಷ್ಟಿಸಲಾಯಿತು ಎಂಬುದನ್ನು ತಿಳಿದುಕೊಳ್ಳುತ್ತೇವೆ, ನಮ್ಮ ಗ್ರಹಿಕೆಗಳ ಸತ್ಯ ಹಾಗೂ ಮಿಥ್ಯೆ ಇವುಗಳಿಂದ ಪ್ರತ್ಯೇಕವಾಗಿ, ಅವುಗಳ ಕ್ಷೇತ್ರವನ್ನು ವಿಶಾಲಗೊಳಿಸುತ್ತೇವೆ, ಅವುಗಳ ಮಹತ್ವವನ್ನು ವಿಸ್ತರಿಸುತ್ತೇವೆ, ಪ್ರಕಾಶಿತಗೊಳಿಸುತ್ತೇವೆ, ನಮ್ಮ ಮನಸ್ಸುಗಳ

ಪ್ರಭುಗಳಾಗುತ್ತೇವೆ ಮತ್ತು ಜಗತ್ತಿನಲ್ಲಿ ನಮ್ಮ ಸುತ್ತಲಿರುವ ದೈವೀ ಮನಸ್ಸಿನ ಚಲನೆಗಳಿಗೆ ಆಕಾರ ಕೊಡಲು ಕ್ರಿಯಾಶೀಲರಾಗುತ್ತೇವೆ. ವಿಶ್ವಂಭರ ಜೀವಶಕ್ತಿಗಳ ಪ್ರವಾಹ ಮತ್ತು ಉಲ್ಬಣ ಇವುಗಳನ್ನು ಗ್ರಹಿಸಲು ಪ್ರಾರಂಭಿಸುತ್ತೇವೆ, ಭಾವನೆ ಉದ್ರೇಕ, ಸಂವೇದನೆಗಳು ಇವುಗಳ ಮೂಲ ಹಾಗೂ ನಿಯಮಗಳನ್ನು ತಿದ್ದುತ್ತೇವೆ. ಸ್ವೀಕರಿಸುವುದಕ್ಕೆ, ತಿರಸ್ಕರಿಸುವುದಕ್ಕೆ, ಹೊಸ ಸೃಷ್ಟಿ ಮಾಡುವುದಕ್ಕೆ ದೈವೀ ಜೀವ–ಸಾಮರ್ಥ್ಯದತ್ತ ಹೆಚ್ಚು ವಿಸ್ತಾರವಾಗಿ ತೆರೆದುಕೊಳ್ಳುವುದಕ್ಕೆ, ಮತ್ತು ಅದರ ಎತ್ತರದ ಸ್ತರಗಳಿಗೆ ಏರಿ ಹೋಗುವುದಕ್ಕೆ ಸ್ವತಂತ್ರರಾಗಿರುತ್ತೇವೆ. ದೈವೀ ಭೌತದ್ರವ್ಯದ ಒಗಟಿಗೆ ಬೀಗದ ಕೈ ಇರುವುದನ್ನು ಗ್ರಹಿಸುತ್ತೇವೆ, ದೈವೀ ಮನಸ್ಸು ಪ್ರಾಣ ಮತ್ತು ಪ್ರಜ್ಞೆ ಇವುಗಳ ಅಂತರಂಗದ ಲೀಲೆಯನ್ನು ಅನುಸರಿಸಿ ಹೋಗುತ್ತೇವೆ, ಅದರ ಉಪಕರಣ ರೂಪದ ಮತ್ತು ಪರಿಣಾಮ ಸ್ವರೂಪದ ಕ್ರಿಯಾವಿಧಾನವನ್ನು ಹೆಚ್ಚು ಹೆಚ್ಚಾಗಿ ಶೋಧಿಸುತ್ತೇವೆ, ಮತ್ತು ಕಟ್ಟಕಡೆಗೆ ದೈವೀ ಭೌತದ್ರವ್ಯ ಕೇವಲ ದೈವೀ ಶಕ್ತಿಯ ಒಂದು ರೂಪವಷ್ಟೇ ಅಲ್ಲ, ಆದರೆ ಒಳಗೊಂಡಿರುವ (involved), ಸೆರೆಗೊಳಗಾದ ಇಲ್ಲವೆ ಸ್ಥಿರತೆಯಿಲ್ಲದ ಗಟ್ಟಿಯಾಗಿರಿಸದ ಮತ್ತು ಮಿತಿಗೊಳಪಡಿಸಿದ ಪ್ರಜ್ಞೆಯಾಗಿದೆ ಎಂಬುದನ್ನು ಹಾಗೆಯೇ ಅದರ ಮುಕ್ತಿ ಹಾಗೂ ಉಚ್ಚತರ ದೈವೀ ಸಾಮರ್ಥ್ಯಗಳಿಗೆ ನಮ್ಮ ಪ್ರತ್ಯುತ್ತರವಿರುವ ಸಾಧ್ಯತೆಗಳನ್ನು ನೋಡುತ್ತೇವೆ, ಅಲ್ಲಿ ಇನ್ನು ಮುಂದೆ ಅರ್ಧಪ್ರಜ್ಞೆಯುಳ್ಳ ಅವತಾರ ಮತ್ತು ದಿವ್ಯಾತ್ಮದ ಅಭಿವ್ಯಕ್ತಿ ಇರುವುದಿಲ್ಲ. ಇದೆಲ್ಲ ಮತ್ತು ಇನ್ನೂ ಹೆಚ್ಚಿನದು ನಮ್ಮಲ್ಲಿ ದೈವೀ ಶಕ್ತಿಯ ಕಾರ್ಯಗತಿ ಹೆಚ್ಚಾಗುತ್ತ ಹೋದ ಹಾಗೆ ಸಾಧ್ಯವಾಗುತ್ತದೆ. ಬಹಳಷ್ಟು ಅಡೆತಡೆ ಇಲ್ಲವೆ ಶ್ರಮದ ವಿರುದ್ಧ ನಮ್ಮ ಮಬ್ಬಾದ ಪ್ರಜ್ಞೆಗೆ ಉತ್ತರ ನೀಡಲು, ಪ್ರಗತಿಯ ಹಾಗೂ ಹಿಂಚಲನೆಯ ಬಹಳಷ್ಟು ಹೋರಾಟದ ಮೂಲಕ, ಅರ್ಧ ಪ್ರಜ್ಞೆಯದನ್ನು ಪ್ರಜ್ಞೆಯನ್ನಾಗಿ ಮಾಡಲು ಗಾಢಪರಿವರ್ತನೆಗಾಗಿ ಉಂಟಾದ ನವೀಕರಿಸಿದ ಪ್ರಗತಿಯ ಆವಶ್ಯಕತೆ, ಶ್ರೇಷ್ಠತರ ಪರಿಶುದ್ಧತೆ, ಸತ್ಯ, ಉನ್ನತಿ, ಹಾಗೂ ವ್ಯಾಪ್ತಿ ಇವುಗಳತ್ತ ಚಲಿಸುತ್ತದೆ. ಚೈತನ್ಯವನ್ನು ನಮ್ಮಲ್ಲಿ ಜಾಗ್ರತಗೊಳಿಸುವುದರ ಮೇಲೆ ಮತ್ತು ದೈವೀ ಶಕ್ತಿಗೆ ನಮ್ಮ ಪ್ರತಿಕ್ರಿಯೆಯ ಸಂಪೂರ್ಣತೆ ಮತ್ತು ನಮ್ಮ ಬೆಳೆಯುತ್ತಿರುವ ಶರಣಾಗತಿಯ ಮೇಲೆ ಎಲ್ಲವೂ ಅವಲಂಬಿಸಿರುತ್ತದೆ.

**(CWSA, 23/183–84)** **– ಶ್ರೀ ಅರವಿಂದರು**

*

**ಪ್ರಶ್ನೆ :** *ಮಧುರ ಮಾತೆಯವರೆ, ಸಹಸ್ರ ದಲ ಪದ್ಮದ ಪ್ರಾಮುಖ್ಯತೆ ಏನು?*



**ಶ್ರೀಮಾತೆ :** ಆ ರೀತಿಯಲ್ಲಿ ಅದನ್ನು ವರ್ಣಿಸುತ್ತಾರೆ. ಏಕೆಂದರೆ ಅಲ್ಲಿ ಒಂದು ಕೇಂದ್ರವಿದೆ, ಅದು ಅತ್ಯಂತ ಸಂಕೀರ್ಣವಾದದ್ದು. ಅದರರ್ಥ ಎಣಿಸಲಾಗದಷ್ಟು ಇರುವ ಯೋಚನೆಗಳ ಸಾಮರ್ಥ್ಯಗಳು ಅಲ್ಲಿವೆ ಎಂದು ನನಗನಿಸುತ್ತದೆ, ಅದು ಎಲ್ಲ ರೂಪಗಳಲ್ಲಿರುವ ಜ್ಞಾನ ಬಹುವಾಗಿರುವುದಾಗಿದೆ. ಅದೇ ಆಗಿರಬೇಕು. ಇದು ಇನ್ನೊಂದು  ಉದಾಹರಣೆ: ಇದನ್ನು ಕುರಿತು ಪುಸ್ತಕಗಳನ್ನು ಓದಿ ತಿಳಿದುಕೊಂಡ, ಅಭ್ಯಾಸ ಮಾಡಿದ ಮತ್ತು ನಂತರ ಅನುಭವ ಪಡೆದ ಜನರು ಯಾವಾಗಲೂ, ಅದನ್ನು ಆ ರೀತಿ ವರ್ಣಿಸುತ್ತಾರೆ, ಅವರು ಹೆಸರುಗಳನ್ನು ಪುಸ್ತಕಗಳಿಂದ ಎತ್ತಿ ತೆಗೆದುಕೊಂಡಿರುತ್ತಾರೆ, ಅವುಗಳನ್ನು ಕುರಿತು ಕಮಲಗಳ ವರ್ಣನೆ ಅಲ್ಲಿರುತ್ತದೆ. ಆದರೆ ಮೊದಲು ಏನನ್ನೂ ಓದಿ ತಿಳಿದುಕೊಂಡಿರದ, ಕಲಿತುಕೊಂಡಿರದ ಜನರು ಸ್ವಯಂಪ್ರೇರಿತ ಅನುಭವ ಪಡೆದಿರುತ್ತಾರೆ, ಅವರು ಅದನ್ನು, ಒಟ್ಟಿನಲ್ಲಿ, ಭಿನ್ನ ರೀತಿಯಲ್ಲಿ ವರ್ಣಿಸುತ್ತಾರೆ, ಅಲ್ಲಿ ವ್ಯಕ್ತಿವಿಶಿಷ್ಟ ನೈಜತೆ ಇರುತ್ತದೆಂದು ಹೇಳಬಹುದು. ಪ್ರತಿಯೊಬ್ಬನೂ ಅನುಭವವನ್ನು ತನ್ನದೇ ರೀತಿಯಲ್ಲಿ ಪಡೆಯುತ್ತಾನೆ. ಕೇಂದ್ರಗಳಿವೆ ಎಂಬುದು ವಾಸ್ತವ ಸಂಗತಿ, ಅವು ಅರಳಿ (ಎಚ್ಚತ್ತು) ಕೊಳ್ಳುತ್ತವೆ ಎಂಬುದೂ ವಾಸ್ತವ ಸಂಗತಿ, ಇದು ವಿಶಾಲ ರೀತಿಯಲ್ಲಿ ಪ್ರಜ್ಞೆಯ ಹಾಗೂ ಚೈತನ್ಯದ ಕಾರ್ಯಗತಿಯನ್ನು ಬದಲಿಸುತ್ತದೆ ಎಂಬುದು ವಾಸ್ತವ ಸಂಗತಿ, ಆದರೆ ಅದು ಸ್ವಯಂಪ್ರೇರಿತವಾದದ್ದು ಮತ್ತು ನಿಷ್ಕಪಟವಾದದ್ದು ಆಗಿದ್ದರೆ ಅದರ ವರ್ಣನೆ ಪ್ರತಿಯೊಬ್ಬನಿಗೂ ಭಿನ್ನವಾಗಿರುತ್ತದೆ. ಅದು ಏನೋ ಒಂದರ ಜೊತೆಗೆ ಏಕರೂಪವಾದದ್ದು ಎಂದು ಮನುಷ್ಯ ಭಾವನೆ ತಂದುಕೊಳ್ಳಬಹುದು, ಆದರೆ ಸ್ಥಿರಪಡಿಸಿದ ಮತ್ತು ನಿಖರವಾದ ವರ್ಣನೆ ಇದ್ದಾಗ ಅದು ಸಂಭವಿಸುವುದು ಮನಸ್ಸು ಮಧ್ಯೆ ಪ್ರವೇಶಿಸುವುದರಿಂದ ಆಗಿರುತ್ತದೆ.

**(CWM, 7/208)**

*

**ಶ್ರೀಮಾತೆಯವರ ಹೊಸದಾಗಿ ಜನ್ಮತಾಳಿದ ಮಗುವಾಗು**

ಚೈತ್ಯಸತ್ತೆ ದೈವೀಸತ್ಯದೊಂದಿಗೆ ನೇರವಾದ ಸಂಪರ್ಕದಲ್ಲಿರುತ್ತದೆ. ಆದರೆ ಮನುಷ್ಯನಲ್ಲಿ ಮನಸ್ಸು, ಪ್ರಾಣಿಕ ಸತ್ತೆ ಮತ್ತು ಭೌತಿಕ ಸ್ವಭಾವ ಇವು ಅದನ್ನು ಅಡಗಿಸಿಟ್ಟಿರುತ್ತವೆ. ಮನುಷ್ಯ ಯೋಗವನ್ನು ಆಚರಿಸಬಹುದು ಮತ್ತು ಮನಸ್ಸಿನಲ್ಲಿ ಹಾಗೂ ತರ್ಕದಲ್ಲಿ ಜ್ಞಾನೋದಯ ಪಡೆಯಬಹುದು, ಸಾಮರ್ಥ್ಯವನ್ನು ಗೆದ್ದುಕೊಳ್ಳಬಹುದು ಮತ್ತು ಪ್ರಾಣಿಕದ ಎಲ್ಲ ಬಗೆಯ ಅನುಭವಗಳಲ್ಲಿ ಖುಷಿ

ಪಡಬಹುದು. ಮತ್ತು ಆಶ್ಚರ್ಯಕರವೆನಿಸುವ ಭೌತಿಕ ಸಿದ್ಧಿಗಳನ್ನು ತನ್ನಲ್ಲಿ ಸ್ಥಾಪಿಸಿಕೊಳ್ಳಬಹುದು. ಆದರೆ ಹಿಂದಿರುವ ನಿಜವಾದ ಆತ್ಮ–ಸಾಮರ್ಥ್ಯ ಪ್ರಕಟವಾಗದೇ ಹೋದರೆ, ಚೈತ್ಯಾತ್ಮಿಕ ಸ್ವಭಾವ ಮುಂಭಾಗದಲ್ಲಿ ಬರದೇ ಹೋದರೆ, ಯಥಾರ್ಥವಾದ ಏನನ್ನೂ ಕೈಕೊಳ್ಳಲಾಗಿರುವುದಿಲ್ಲ. ಈ ಯೋಗದಲ್ಲಿ ಚೈತ್ಯಸತ್ತೆಯೇ ಸ್ವಭಾವದ ಉಳಿದೆಲ್ಲ ಭಾಗವನ್ನು ಅತಿಮಾನಸ ಪ್ರಕಾಶಕ್ಕೆ ಹಾಗೂ ಕೊನೆಗೆ ಪರಮೋಚ್ಚ ಆನಂದಕ್ಕೆ ತೆರೆದಿರಿಸುತ್ತದೆ. ಮನಸ್ಸು ತನ್ನಿಂದ ತಾನೇ ಉಚ್ಚತರ ನೆಲೆಗಳತ್ತ ತೆರೆದಿರಿಸಿಕೊಳ್ಳಬಲ್ಲದು, ತನ್ನನ್ನು ನಿಶ್ಚಲಗೊಳಿಸಿಕೊಳ್ಳಬಲ್ಲದು ಮತ್ತು ಅವ್ಯೈಯಕ್ತಿಕವಾದದರಲ್ಲಿ ವಿಸ್ತರಿಸಿಕೊಳ್ಳಬಲ್ಲದು; ನಿರ್ವಾಣದಂತಹ ಒಂದು ಬಗೆಯ ನಿಶ್ಚಲ ಮುಕ್ತಿಯನ್ನು ಕಂಡುಕೊಳ್ಳುವಂತೆ ಆಧ್ಯಾತ್ಮೀಕರಣ ಹೊಂದಬಲ್ಲದು. ಆದರೆ ಕೇವಲ ಆಧ್ಯಾತ್ಮೀಕರಣಗೊಂಡ ಮನಸ್ಸಿನಲ್ಲಿ ಅತಿಮಾನಸ ಸಾಕಾಗುವಷ್ಟು ಆಧಾರ ಕಂಡುಕೊಳ್ಳಲಾರದು. ಆಳಾತಿ ಆಳದಲ್ಲಿರುವ ಆತ್ಮ ಜಾಗ್ರತಗೊಳ್ಳುವಂತೆ ಮಾಡಿದರೆ, ಕೇವಲ ಮಾನಸಿಕ, ಪ್ರಾಣಿಕ ಹಾಗೂ ಭೌತಿಕವಾದುದರಿಂದ ಹೊರಗೆ ಚೈತ್ಯಾತ್ಮಿಕ ಪ್ರಜ್ಞೆಯಲ್ಲಿ ಹೊಸ ಜನ್ಮ ಹೊಂದಿದರೆ ಆಗ ಈ ಯೋಗವನ್ನು ಕೈಕೊಳ್ಳಬಹುದು, ಹಾಗಿಲ್ಲದೇ ಇದ್ದಾಗ (ಕೇವಲ ಮನಸ್ಸಿನ ಇಲ್ಲವೆ ಇತರ ಭಾಗದ ಸಾಮರ್ಥ್ಯದಿಂದ) ಅದು ಅಸಾಧ್ಯವಾಗಿರುತ್ತದೆ. ಚೈತ್ಯಾತ್ಮಿಕವಾದ ಹೊಸ ಜನ್ಮ ತಾಳುವುದಕ್ಕೆ ಶ್ರೀಮಾತೆಯವರ ಹೊಸ ಜನ್ಮ ತಾಳಿದ ಮಗುವಾಗುವುದಕ್ಕೆ ನಿರಾಕರಣೆ ಇದ್ದರೆ, ಬೌದ್ಧಿಕ ಜ್ಞಾನ ಇಲ್ಲವೆ ಮಾನಸಿಕ ವಿಚಾರಗಳು ಇಲ್ಲವೆ ಯಾವುದೊಂದು ಪ್ರಾಣಿಕ ಆಸೆ ಇಂತಹವುಗಳಿಗೆ ಅಂಟಿಕೊಂಡಿದ್ದರೆ ಸಾಧನೆಯಲ್ಲಿ ವಿಫಲತೆ ಉಂಟಾಗುವುದು.

**(CWSA, 30/337–38)** **– ಶ್ರೀ ಅರವಿಂದರು**

*

ಎರಡು ವಿಶ್ವವ್ಯಾಪಿ ಶಕ್ತಿಗಳಿವೆ – ಒಂದು ಉಚ್ಚತರ ವಿಶ್ವವ್ಯಾಪಿ ದೈವೀಶಕ್ತಿ, ಅದು ಶ್ರೀಮಾತೆಯವರ ಒಂದು ರೂಪ, ಇನ್ನೊಂದು ಅಜ್ಞಾನದ ಸಾಮರ್ಥ್ಯ. ನೀವು ಎರಡನೆಯದಕ್ಕೆ ತೆರೆದಿರಿಸಿಕೊಳ್ಳಬಾರದು, ಕೇವಲ ಶ್ರೀಮಾತೆಯವರಿಗೆ ತೆರೆದಿರಿಸಿಕೊಂಡಿರಬೇಕು.

**(CWSA, 32/225)** **– ಶ್ರೀ ಅರವಿಂದರು**

*



**All India Magazine(ಕನ್ನಡದಲ್ಲಿ ಅ.ಭಾ.ಪ.)ದ ಸಂಪಾದಕರ ಸ್ಪಷ್ಟೀಕರಣ**

ನಮ್ಮ ಓದುಗರಿಗಾಗಿ ಇಲ್ಲಿ ಸ್ಪಷ್ಟೀಕರಣವನ್ನು ಕೊಡಲು ನಾವು ಬಯಸುತ್ತೇವೆ. AIM ಪತ್ರಿಕೆಗಾಗಿ ಪರಿಚ್ಛೇದಗಳನ್ನು ಆಯ್ದುಕೊಳ್ಳುವ ವಿಧಾನ ಕುರಿತು ಕೆಲವು ಓದುಗರಿಗೆ ಪರಿಚಯವಿರದೆ ಇರಬಹುದು.

ಉಪಶೀರ್ಷಿಕೆಗಳನ್ನು ಸಂಪಾದಕರು ಕೊಡುತ್ತಾರೆ. ಶ್ರೀ ಅರವಿಂದರ ಸಂಪೂರ್ಣ ಕೃತಿಗಳು (CWSA) ಮತ್ತು ಶ್ರೀಮಾತೆಯವರ ಕೃತಿಗಳು ಇವುಗಳಿಂದ ನಾವು ಹೆಚ್ಚಾಗಿ ಪರಿಚ್ಛೇದಗಳನ್ನು ಆಯ್ದುಕೊಳ್ಳುತ್ತೇವೆ. ತಿಳಿದುಕೊಳ್ಳಲು ಸುಲಭ–ವಾಗಲೆಂದು ಶ್ರೀಮಾತೆಯವರ ಕೃತಿಗಳಿಂದ ಸಾಧ್ಯವಿದ್ದಷ್ಟು ಹೆಚ್ಚಿನ ರೀತಿಯಲ್ಲಿ ಪರಿಚ್ಛೇದಗಳನ್ನು ಕೈಗೆತ್ತಿಕೊಳ್ಳುತ್ತೇವೆ.

ಶ್ರೀಮಾತೆಯವರ ಮಾತುಕತೆಗಳನ್ನು ಕುರಿತು ಇರುವ Mother's Agenda ಹೆಸರಿನ ಗ್ರಂಥಗಳಿಂದ ಆಯ್ದು ಸಂಗ್ರಹಿಸಿದ ಗ್ರಂಥಗಳಿಂದ ಪರಿಚ್ಛೇದಗಳನ್ನು ಕೈಗೆತ್ತಿಕೊಳ್ಳುತ್ತೇವೆ. ಆ ಪರಿಚ್ಛೇದಗಳಿಗೆ ಸಂಬಂಧಿಸಿದ ಆಳವಾದ ಹಾಗೂ ಸಂಪೂರ್ಣವಾದ ಮಾಹಿತಿ ಪಡೆಯುವುದು ಸರಳವಾಗಲೆಂದು ಉಲ್ಲೇಖಿಸಿದ ಲೇಖನಗಳ ಅಡಿಯಲ್ಲಿ (ಅನುಯಾಯಿಯೊಬ್ಬನೊಡನೆ ಮಾತುಕತೆ) ಎಂದು ಬರೆಯ–ಲಾಗಿರುತ್ತದೆ ಹಾಗೂ ಆ ಮಾತುಕತೆ ನಡೆದ ದಿನಾಂಕವನ್ನು ಸೂಚಿಸಲಾಗಿರುತ್ತದೆ.

ಈ ಚಿತ್ರಣವನ್ನು ಪೂರ್ತಿಗೊಳಿಸಲು ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರು ನಡೆಸಿದ ಮಾತುಕತೆಗಳನ್ನು ನೆನಪಿನಿಂದ ಬರೆದಿಟ್ಟುಕೊಂಡು ಪ್ರಕಟಿಸಿದ ಪುಸ್ತಕಗಳನ್ನೂ ನಾವು ನೆಚ್ಚಿಕೊಳ್ಳುತ್ತೇವೆ. ಇಂತಹ ಕೃತಿಗಳಲ್ಲಿ ಪ್ರಧಾನ–ವಾದವುಗಳು ಇವು: (ಶ್ರೀ ಅರವಿಂದರೊಡನೆ) ಸಾಯಂಕಾಲದ ಮಾತುಕತೆಗಳು, ಮೋನಾ ಸರ್ಕಾರ ಬರೆದ ಪುಸ್ತಕಗಳು, ಹುತಾ ಬರೆದ ಪುಸ್ತಕಗಳು, ಅನುಯಾಯಿ–ಯೊಬ್ಬನು ನೆನಪಿನಿಂದ ಬರೆದ ಗ್ರಂಥಗಳು, 'ಚಂಪಕಲಾಲ ಮಾತನಾಡುತ್ತಾನೆ' ಎಂಬ ಪುಸ್ತಕ. ಈ ಗ್ರಂಥಗಳ ಪೂರ್ತಿ ವಿಶ್ವಾಸಾರ್ಹತೆಯನ್ನು ಕುರಿತು ವಾದ ವಿವಾದಗಳಲ್ಲಿ ತೊಡಗಿಕೊಳ್ಳಲು ನಾವು ಬಯಸುವುದಿಲ್ಲ, ಅದನ್ನು ಓದುಗರ ಸೂಕ್ಷ್ಮ ಸಂವೇದನೆಗೆ ಹಾಗೂ ಶೋಧಕ ದೃಷ್ಟಿಗೆ ಬಿಟ್ಟುಕೊಡುತ್ತೇವೆ. ಆದರೆ ಶ್ರೀ ಅರವಿಂದಾಶ್ರಮ ಪ್ರಕಟಿಸಿದ ಗ್ರಂಥಗಳು: 'the Supreme', 'luminous notes', 'Blessings of the Grace', ಇಲ್ಲವೆ ಹುತಾ ಅವಳ ಪುಸ್ತಕಗಳು ಇವುಗಳ ಮೇಲೆ ನಮ್ಮ ವಿಶ್ವಾಸವಿದೆ, ಈ ಗ್ರಂಥಗಳ ನಿಖರತೆ ಕುರಿತು ಪ್ರಶ್ನಿಸುವ ಅಗತ್ಯವಿರುವುದಿಲ್ಲ. ಅವರ ಬರಹಗಳಲ್ಲಿರುವ ಸರ್ವಸಾಧಾರಣ ಪ್ರವೃತ್ತಿ

ಉಳಿದೆಲ್ಲದರ ಜೊತೆಗೆ ದನಿಗೂಡಿಸುತ್ತಿದ್ದರೆ ಮತ್ತು ವಿಷಯ ವಿವಾದಾತ್ಮಕ ಆಗಿರದಿದ್ದರೆ ಶಬ್ದಗಳನ್ನು ನಿಖರವಾಗಿ ನೆನಪಿನಲ್ಲಿಟ್ಟುಕೊಳ್ಳುವುದನ್ನು ಕುರಿತು ಪ್ರಧಾನ ಸಮಸ್ಯೆ ಇರಲಾರದು. ಪಂಡಿತರು, ಅಧ್ಯಾಪಕರು ಮತ್ತು ಇತರರು ಈ ಕೃತಿಗಳನ್ನು ಕುರಿತು ವಿವರಿಸಿ ಹೇಳಲು, ಪರೀಕ್ಷಿಸಲು ಹಾಗೂ ಪರಿಶೋಧಿಸಲು ಮುಕ್ತರಿದ್ದಾರೆ. ನಮ್ಮ ಗುರಿಗಳು ಸರಳ ಹಾಗೂ ವಿನಮ್ರವಾದವುಗಳಾಗಿವೆ. ಸಂಗ್ರಹಿಸಿದ ಕೃತಿಗಳಲ್ಲಿ ಅದಾಗಲೇ ಸಾರದಲ್ಲಿ ಇರುವುದಕ್ಕೆ ಯಾವುದು ಮಹತ್ವದ್ದು, ಸ್ವಾರಸ್ಯಕರವಾದದ್ದು ಮತ್ತು ಚಿತ್ರಣವನ್ನು ಪೂರ್ತಿಗೊಳಿಸುವುದು ಅಂತಹ ಪರಿಚ್ಛೇದಗಳನ್ನು ಆಯ್ದುಕೊಳ್ಳುತ್ತೇವೆ. ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಶಬ್ದಗಳ ಮೂಲಕ ನಿರ್ಮಾಣಗೊಂಡ ಅದ್ಭುತ ವಾತಾವರಣದಲ್ಲಿ ಓದುಗರು ಮುಳುಗುಹಾಕಲಿ ಮತ್ತು ಅವರ ಪ್ರಕಾಶ ಹಾಗೂ ದಿವ್ಯಾನಂದಗಳಲ್ಲಿ ಉಸಿರಾಡಿಸಲಿ ಎಂಬುದು ಈ ಆಯ್ಕೆಯ ಉದ್ದೇಶವಾಗಿದೆ. ಸ್ವೀಕರಿಸುವ ಅಚಂಚಲತೆಯಿಂದ ಓದಿದಾಗ ಈ ಶಬ್ದಗಳು ನಮ್ಮನ್ನು ಆಳಾತಿ ಆಳದ ಗ್ರಹಿಕೆಯತ್ತ ಮತ್ತು ಅವು ಮೈವೆತ್ತ ಪ್ರಜ್ಞೆಯ ಸ್ಥಿತಿಗಳತ್ತ ಕೊಂಡೊಯ್ಯಲು ಬೀಗದ ಕೈಯಾಗಬಲ್ಲವು. ಈ ರೀತಿಯಲ್ಲಿ ಮಾತ್ರ ನಿಜವಾದ ತಿಳಿವಳಿಕೆ ನಮ್ಮಲ್ಲಿ ಇಳಿದು ಬರಬಹುದು, ಅಲ್ಲಿ ಇಲ್ಲಿ ಇರುವ ಒಂದೆರಡು ಶಬ್ದಗಳು ಇಲ್ಲವೆ ಅರ್ಧ ಪರಿಚ್ಛೇದ ಇಂತಹವುಗಳನ್ನು ಕೈಗೆತ್ತಿಕೊಂಡು, ಸಂದರ್ಭರಹಿತವಾಗಿ ಅವುಗಳನ್ನು ವಿಶ್ಲೇಷಣೆ ಮಾಡಲು ಪ್ರಯತ್ನಿಸುವುದರ ಮೂಲಕ ಆ ತಿಳಿವಳಿಕೆ ಬರಲಾರದು.

**ಪ್ರಶ್ನೆ :** *ಶಬ್ದಗಳ ಮೂಲಕ ಅರಿತುಕೊಳ್ಳಲಾಗದ್ದನ್ನು ನಾವು ತಿಳಿದುಕೊಳ್ಳುವುದು ಸಾಧ್ಯವಾಗುವಂತೆ ನೀವು ಶಬ್ದಗಳ ಜೊತೆಗೆ ಏನೋ ಒಂದನ್ನು ಇರಿಸಿರುತ್ತೀರಿ. ಶಬ್ದಗಳ ಜೊತೆಗಿರುವ ಅದು ಏನಾಗಿರುತ್ತದೆ?*

**ಶ್ರೀಮಾತೆ :** ಪ್ರಜ್ಞೆ

**27–12–1967**

ನಾನು ಮಾತನಾಡಿದಾಗ, ಆ ಮಾತಿನ ಜೊತೆಗೆ ಜೀವಿಸುತ್ತೇನೆ ಮತ್ತು ಆ ಅನುಭವವನ್ನು ಶಬ್ದಗಳ ಜೊತೆಗೆ ತಿಳಿಯಪಡಿಸುತ್ತೇನೆ – ಯಾವ ಯಂತ್ರವೂ ಅದನ್ನು ದಾಖಲಿಸಲಾರದು. ಆ ಕಾರಣದಿಂದಾಗಿ ಪಠ್ಯಭಾಗವನ್ನು ಓದಿದಾಗ ಇಲ್ಲವೆ ಕೇಳಿದಾಗ ಅದು ಪೂರ್ತಿ ಭಿನ್ನವಾಗಿರುವ ಹಾಗೆ ತೋರಿಬರುತ್ತದೆ, ಅದರಲ್ಲಿರುವ ಮುಖ್ಯವಾದದ್ದು ಹೊರಟು ಹೋಗಿರುತ್ತದೆ, ಏಕೆಂದರೆ ಅದು



ಸಂಕೇತಗಳಾಚೆಗಿರುತ್ತದೆ. ಶಬ್ದಗಳು ಅವೇ ಆಗಿದ್ದರೂ ನಾನು ಅವುಗಳನ್ನು ಬರೆಯುವಾಗ ಇರುವ ಗಾಢತೆ ತಪ್ಪಿಸಿಕೊಂಡು ಹೋಗಿರುತ್ತದೆ ಮತ್ತು ಪಠ್ಯ ನೀರಸವಾಗಿರುವಂತೆ ತೋರಿಬರುತ್ತದೆ.

ಭೌತಿಕ ದೈವೀ ಸಾನ್ನಿಧ್ಯ ಇರಬೇಕಾದುದಕ್ಕೆ ಇದೇ ನಿಜವಾದ ಕಾರಣ, ಅದರ ನಿರ್ವಿವಾದ ಮಹತ್ವ.

*

ನನ್ನ ಶಬ್ದಗಳನ್ನು ಒಂದು ಬೋಧನೆಯ ರೂಪದಲ್ಲಿ ತೆಗೆದುಕೊಳ್ಳುವುದು ಬೇಡ, ಅವು ಯಾವಾಗಲೂ, ಕ್ರಿಯೆಯಲ್ಲಿ ಶಕ್ತಿಸ್ವರೂಪದವಾಗಿರುತ್ತವೆ, ಒಂದು ನಿಶ್ಚಿತ ಉದ್ದೇಶಕ್ಕಾಗಿ ಉಚ್ಚರಿಸಲಾಗಿರುತ್ತವೆ, ಆ ಉದ್ದೇಶದಿಂದ ಅವುಗಳನ್ನು ಪ್ರತ್ಯೇಕಗೊಳಿಸಿದಾಗ ಅವು ತಮ್ಮ ನಿಜವಾದ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ.

**(CWM, 13/53)** **– ಶ್ರೀಮಾತೆ**


*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 5/9/2015 ರಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಪೂರ್ವಾಹ್ನ 9.00 ರಿಂದ 11.00 ರವರೆಗೆ ವಿದ್ಯಾರ್ಥಿಗಳು ವಿವಿಧ ವಿನೋದಾವಳಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಮಧ್ಯಾಹ್ನ 2.00 ರಿಂದ ಶಾಲಾ ಆಡಳಿತ ಮಂಡಳಿಯವರು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮೊದಲಿಗೆ ಸಮೂಹ ಧ್ಯಾನದಲ್ಲಿ ಶಿಕ್ಷಕ ವೃಂದದವರು ಮತ್ತು ಶ್ರೀ ಅರವಿಂದೋ ಸಂಕೀರ್ಣದ ಸಿಬ್ಬಂದಿ ವರ್ಗದವರು ಭಾಗವಹಿಸಿದರು. ಬಳಿಕ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಅಜಿತ್ ಸಬ್ನೀಸ್ ಶಿಕ್ಷಕರನ್ನು ಉದ್ದೇಶಿಸಿ ವರ್ತಮಾನದಲ್ಲಿ ಪ್ರಸ್ತುತ ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳು, ಮೌಲ್ಯಗಳ ಮಹತ್ವಗಳ ಬಗ್ಗೆ ಬೆಳಕು ಚೆಲ್ಲಿದರು. ಬಳಿಕ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ವರ್ಗದವರನ್ನು ಸನ್ಮಾನಿಸಲಾಯಿತು. ಶಾಲ ಪ್ರಾಂಶುಪಾಲರು ಆಡಳಿತ ಮಂಡಳಿಯವರಿಗೆ ಧನ್ಯವಾದಗಳನ್ನು ಸಮರ್ಪಿಸಿದರು.



*There is no greater pride*
*and glory than to be*
*a perfect instrument of the Master.*

\- Sri Aurobindo

**RNI No. 22511/1971**
No. of Pages **64 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.